


# ಕಠೋಪನಿಷತ್

[Katopanishat in Kannada]

[ಇಂದಿನ ಸಾಮಾಜಿಕ ಜೀವನದಲ್ಲಿ ಸತ್ಯವನ್ನು ಯಥಾರ್ಥವಾಗಿ ತಿಳಿಯಬಯಸುವವರಿಗೆ ಕಾಠಕೋಪನಿಷತ್ತು ತುಂಬಾ ಸಹಾಯಕ. ಭಾರತೀಯ ತತ್ವಶಾಸ್ತ್ರದಲ್ಲಿ ಹೇಳಲಾದ ಅತೀಂದ್ರಿಯವಾದ ವಸ್ತುಗಳು, ಕಣ್ಣಿಗೆ ಕಾಣದ ಸೂಕ್ಷ್ಮಲೋಕ, ಅಲ್ಲಿನ ಸುಖ-ದುಃಖದ ಅನುಭವ, ಅದನ್ನು ಅನುಭವಿಸಲು ಭೂಲೋಕದಿಂದ ಅಲ್ಲಿಗೆ ಹೋಗುವ ಜೀವ, ಆ ಜೀವನನ್ನು ನಿಯಂತ್ರಿಸುವ ದೇವರು, ಇತ್ಯಾದಿಯನ್ನು ಇಂದು ನಿಜವೋ ಸುಳ್ಳೋ ಎಂದು ತಿಳಿದುಕೊಳ್ಳುವುದು ಕಷ್ಟವಾಗುತ್ತಿದೆ. ಇದರ ಜಿಜ್ಞಾಸೆಗೋಸ್ಕರವೇ ಮೀಸಲಾದ ಉಪನಿಷತ್ತು ಕಠೋಪನಿಷತ್ತು. ಭಗವಂತ ನಮ್ಮನ್ನು ಸಂಸಾರದಲ್ಲಿ ಮಾತ್ರ ನಿಯಮಿಸುವುದೋ ಅಥವಾ ಮೋಕ್ಷದಲ್ಲೂ ಆತನ ನಿಯಂತ್ರಣವಿದೆಯೋ? ಮೋಕ್ಷಕ್ಕೆ ಹೋದ ಜೀವದ ಇರವು ಹೇಗಿರುತ್ತದೆ? ಮೋಕ್ಷಕ್ಕೆ ಹೋದ ಮೇಲೆ ಏನಾಗುತ್ತದೆ? ಇತ್ಯಾದಿ ಪ್ರಶ್ನೆಗಳಿಗೆ ಉತ್ತರವೇ ಈ ಕಾಠಕೋಪನಿಷತ್ತು.

ಪೂಜ್ಯ ಬನ್ನಂಜೆ ಗೋವಿಂದಾಚಾರ್ಯರು ತಮ್ಮ ಉಪನಿಷತ್ ಪ್ರವಚನದಲ್ಲಿ ವಿವರಿಸಿದ ಕಠ ಉಪನಿಷತ್ತಿನ ಅರ್ಥಸಾರವನ್ನು ಇ-ಪುಸ್ತಕ ರೂಪದಲ್ಲಿ ಸೆರೆ ಹಿಡಿದು ಆಸಕ್ತ ಭಕ್ತರಿಗೆ ತಲುಪಿಸುವ ಒಂದು ಕಿರುಪ್ರಯತ್ನ ಇಲ್ಲಿ ಮಾಡಲಾಗಿದೆ.]

Visit us @: http://kathopanishat.blogspot.in

ಚಿತ್ರಕೃಪೆ: ಅಂತರ್ಜಾಲ

# ಪರಿವಿಡಿ

ಓದುವ ಮೊದಲು ........ 2

ಪ್ರಸ್ತಾವನೆ ........ 3

ಶಾಂತಿ ಪಾಠ ........ 5

ಅಧ್ಯಾಯ-೧ ........ 6

ವಲ್ಲೀ-೧ ........ 6
ವಲ್ಲೀ-೨ ........ 26
ವಲ್ಲೀ-೩ ........ 38

ಅಧ್ಯಾಯ-೨ ........ 47

ವಲ್ಲೀ-೦೧ ........ 47
ವಲ್ಲೀ-೦೨ ........ 58
ವಲ್ಲೀ-೦೩ ........ 68

ಶಾಂತಿಮಂತ್ರ........ 79

# ಓದುವ ಮೊದಲು

ಪೂಜ್ಯ ಬನ್ನಂಜೆ ಗೋವಿಂದಾಚಾರ್ಯರು ಒಬ್ಬ ಸಾಮಾನ್ಯ ಮನುಷ್ಯನಿಗೆ ಅರ್ಥವಾಗುವಂತೆ ವಿವರಿಸಿದ 'ಉಪನಿಷತ್ ಪ್ರವಚನ'ವನ್ನು ಬಳಸಿಕೊಂಡು ಇಲ್ಲಿ ಪ್ರತೀ ಶ್ಲೋಕದ ವಿವರಣೆಯನ್ನು ಪ್ರಸ್ತುತಪಡಿಸಲಾಗಿದೆ. ಓದುಗರು ಸಾಧ್ಯವಾದರೆ ಆಚಾರ್ಯರ ಪ್ರವಚನದ ಧ್ವನಿಸುರುಳಿಯನ್ನು ಮೊದಲು ಕೇಳಬೇಕಾಗಿ ಇಲ್ಲಿ ವಿನಂತಿಸಿಕೊಳ್ಳುತ್ತಿದ್ದೇವೆ. ಧ್ವನಿಸುರುಳಿಯನ್ನು ಕೇಳಲು ಸಾಧ್ಯವಾಗದೇ ಇದ್ದವರಿಗೆ ಅನುಕೂಲವಾಗಲೆಂದು ಈ ಪುಸ್ತಕವನ್ನು ಬರೆಯಲಾಗಿದೆ. ಅಧ್ಯಾತ್ಮ ಬಂಧುಗಳು ಇಲ್ಲಿ ಪ್ರಸ್ತುತಪಡಿಸಲಾದ ಅಪೂರ್ವ ಅರ್ಥಸಾರವನ್ನು ತಿಳಿದು, ತಮ್ಮ ಜೀವನವನ್ನು ಪಾವನಗೊಳಿಸಿಕೊಳ್ಳಬೇಕಾಗಿ ಪ್ರಾರ್ಥಿಸುತ್ತೇವೆ.

# ವಿಜ್ಞಾಪನೆ

ಈ ಇ-ಪುಸ್ತಕವನ್ನು ಅಧ್ಯಾತ್ಮದಲ್ಲಿ ಆಸಕ್ತಿಯುಳ್ಳವರಿಗಾಗಿ ನೀಡಲಾಗಿದೆ. ಆದ್ದರಿಂದ ಇದನ್ನು ಯಾವುದೇ ವ್ಯಾಪಾರಕ್ಕಾಗಿ(**Commercial purpose**) ಬಳಸಬಾರದಾಗಿ ಕೋರಿಕೆ. ಈ ಪುಸ್ತಕವನ್ನು ಆಚಾರ್ಯರ ಪ್ರವಚನ ಕೇಳಿಸಿಕೊಂಡು ಬರೆದಿದ್ದರೂ ಸಹ, ಬರೆಯುವಾಗ ಅನೇಕ ತಪ್ಪುಗಳಾಗಿರಬಹುದು. ಬರೆಯುವವರು ತಮಗೆ ಅರ್ಥವಾದ ರೀತಿಯಲ್ಲಿ ಬರೆದುಕೊಂಡಿರಬಹುದು. ಇಲ್ಲಿ ಹಾಗೆ ಏನಾದರೂ ತಪ್ಪು ಅಂಶ ಕಂಡುಬಂದರೆ ಅದಕ್ಕೆ ಆಚಾರ್ಯರು ಹೊಣೆಗಾರರಲ್ಲ. ಇದಕ್ಕಾಗಿ ಓದುಗರು ನೇರವಾಗಿ ಆಚಾರ್ಯರ ಪ್ರವಚನದ ಧ್ವನಿಸುರುಳಿಯನ್ನು ಕೇಳಿಸಿಕೊಳ್ಳಬೇಕಾಗಿ ವಿನಂತಿಸಿಕೊಳ್ಳುತ್ತೇವೆ. ಈ ಪುಸ್ತಕದ ಮುಖ ಪುಟದಲ್ಲಿ ಬಳಸಲಾದ ಚಿತ್ರ ಅಂತರ್ಜಾಲದಿಂದ ತೆಗೆದುಕೊಂಡಿದ್ದು. ಒಂದು ವೇಳೆ ಆ ಬಗ್ಗೆ ಯಾರದ್ದಾದರೂ ಆಕ್ಷೇಪವಿದ್ದರೆ ದಯವಿಟ್ಟು ನಮಗೆ ಬರೆದು ತಿಳಿಸಿ. ಅದನ್ನು ತಕ್ಷಣ ತೆಗೆದು ಹಾಕಲಾಗುವುದು.

ಸಂಪರ್ಕ ಕೊಂಡಿ: http://kathopanishat.blogspot.in/

# ಪ್ರಸ್ತಾವನೆ

ಉಪನಿಷತ್ತಿನಲ್ಲಿ ಬಹಳ ಪ್ರಸಿದ್ಧವಾದ, ಕೃಷ್ಣ ಯಜುರ್ವೇದದ ಕಠ ಎನ್ನುವ ಶಾಖೆಯಿಂದ ಬಂದಿರುವ, 'ಕಠ' ಎನ್ನುವ ಋಷಿ ಪರಂಪರೆಯಲ್ಲಿ ಅನುಷ್ಠಾನಕ್ಕೆ ಬಂದ ಉಪನಿಷತ್ತು ಈ ಕಾಠಕೋಪನಿಷತ್ತು. ಈ ಉಪನಿಷತ್ತನ್ನು ಉಳಿಸಿಕೊಂಡು ಬಂದವರು 'ಕಠ' ಎನ್ನುವ ಋಷಿ ಮನೆತನವಾದರೆ, ಈ ಉಪನಿಷತ್ತಿನ ನಿಜವಾದ ಋಷಿ ಯಮ ಮತ್ತು ನಚಿಕೇತ. ಶಿಷ್ಯನಾಗಿ ನಚಿಕೇತ ಹಾಕುವ ಪ್ರಶ್ನೆಗೆ ಯಮ ಕೊಡುವ ಉತ್ತರವೇ(ಉಪದೇಶವೇ) ಕಠೋಪನಿಷತ್ತು.

ಇಂದು ನಮಗೆ 'ಕಠ' ಎನ್ನುವ ಹೆಸರು ಬಹಳ ವಿಚಿತ್ರವಾಗಿ ಕಾಣಿಸಬಹುದು. ಇದು ವೇದಕಾಲದ ಋಷಿಯ ಹೆಸರು. ಇಂದು ವೇದಕಾಲದ ಋಷಿಗಳ ಹೆಸರು ರೂಢಿಯಲ್ಲಿಲ್ಲ. ಕೇಳುವುದಕ್ಕೆ ವಿಚಿತ್ರವಾಗಿದೆ ಎನಿಸುವ ಈ ಹೆಸರು ತುಂಬಾ ಅರ್ಥಪೂರ್ಣವಾಗಿದ್ದು, ನಮಗೆ ಆ ನಾಮದ ಹಿಂದಿರುವ ಅರ್ಥ ತಿಳಿಯದೇ ಇರುವುದರಿಂದ ಅದು ವಿಚಿತ್ರವೆನಿಸುತ್ತದೆ. ಸಂಸ್ಕೃತದ 'ಕಠ' ಎನ್ನುವ ಧಾತುವಿನಿಂದ ಈ ಶಬ್ದ ನಿಷ್ಪನ್ನವಾಗಿದೆ. 'ಕಠ' ಎಂದರೆ ಜೀವನದಲ್ಲಿ ಪರಿಶ್ರಮಪಟ್ಟು ದುಡಿಯುವವರು ಎಂದರ್ಥ. ಈ ಉಪನಿಷತ್ತು ನಮಗೆ ಅರ್ಥವಾಗಬೇಕಾದರೆ ನಾವೂ ಕೂಡಾ ಸ್ವಲ್ಪ 'ಕಠ'ರಾಗಬೇಕು. ಅರ್ಥ ಮಾಡಿಕೊಳ್ಳಲೇಬೇಕು ಎನ್ನುವ ಹಠದಿಂದ ಪರಿಶ್ರಮಪಟ್ಟು ಅಧ್ಯಯನ ಮಾಡಬೇಕು.

ಇಂದಿನ ಸಾಮಾಜಿಕ ಜೀವನದಲ್ಲಿ ಸತ್ಯವನ್ನು ಯಥಾರ್ಥವಾಗಿ ತಿಳಿಯಬಯಸುವವರಿಗೆ ಕಾಠಕೋಪನಿಷತ್ತು ತುಂಬಾ ಸಹಾಯಕ. ಭಾರತೀಯ ತತ್ವಶಾಸ್ತ್ರದಲ್ಲಿ ಹೇಳಲಾದ -ಅತೀಂದ್ರಿಯವಾದ ವಸ್ತುಗಳು, ಕಣ್ಣಿಗೆ ಕಾಣದ ಸೂಕ್ಷ್ಮಲೋಕ, ಅಲ್ಲಿನ ಸುಖ-ದುಃಖದ ಅನುಭವ, ಅದನ್ನು ಅನುಭವಿಸಲು ಭೂಲೋಕದಿಂದ ಅಲ್ಲಿಗೆ ಹೋಗುವ ಜೀವ, ಆ ಜೀವನನ್ನು ನಿಯಂತ್ರಿಸುವ ದೇವರು, ಇತ್ಯಾದಿಯನ್ನು ಇಂದು ನಿಜವೋ ಸುಳ್ಳೋ ಎಂದು ತಿಳಿದುಕೊಳ್ಳುವುದು ಕಷ್ಟವಾಗುತ್ತಿದೆ. ಇದರ ಜಿಜ್ಞಾಸೆಗೋಸ್ಕರವೇ ಮೀಸಲಾದ ಉಪನಿಷತ್ತು ಕಠೋಪನಿಷತ್ತು.

ಈ ಉಪನಿಷತ್ತಿನ ವಿಶೇಷವೆಂದರೆ ಇಲ್ಲಿ ಉತ್ತರ ಕೊಡುವವ ಯಮ. ಪರಲೋಕ ಅಸ್ತಿತ್ವವಿದ್ದರೆ ಮಾತ್ರ ಯಮನಿಗೆ ಅಸ್ತಿತ್ವ. ಸೂಕ್ಷ್ಮಲೋಕದ ಅಸ್ತಿತ್ವ, ಅಲ್ಲಿನ ಸುಖ-ದುಃಖವನ್ನು ಅರಿತ ಯಮನಲ್ಲಿ ಪ್ರಶ್ನೆ ಕೇಳುವವ ಭೂಲೋಕದ ಒಬ್ಬ ಪುಟ್ಟ ಬಾಲಕ. ಈ ಉಪನಿಷತ್ತಿನ ಪ್ರತಿಪಾದ್ಯ ದೇವತೆ ಮೋಕ್ಷ ನಿಯಾಮಕನಾದ ಭಗವಂತ. ಭಗವಂತ ನಮ್ಮನ್ನು ಸಂಸಾರದಲ್ಲಿ ಮಾತ್ರ ನಿಯಮಿಸುವುದೋ ಅಥವಾ ಮೋಕ್ಷದಲ್ಲೂ ಆತನ ನಿಯಂತ್ರಣವಿದೆಯೋ? ಮೋಕ್ಷಕ್ಕೆ ಹೋದ ಜೀವದ ಇರವು ಹೇಗಿರುತ್ತದೆ? ಮೋಕ್ಷಕ್ಕೆ ಹೋದ ಮೇಲೆ ಏನಾಗುತ್ತದೆ? ಇತ್ಯಾದಿ ನಚಿಕೇತನ ಮುಖ್ಯವಾದ ಪ್ರಶ್ನೆಗಳು. ಮುಗ್ಧ ಬಾಲಕನ ಪ್ರಶ್ನೆಗೆ ಯಮನ ಉತ್ತರವೇ ಈ ಕಠೋಪನಿಷತ್ತು.

ಇಲ್ಲಿ ಪ್ರಶ್ನೆ ಹಾಕುವ ಬಾಲಕನ ಹೆಸರು 'ನಚಿಕೇತ'. ನಚಿಕೇತ ಎನ್ನುವ ಶಬ್ದದ ಅರ್ಥ – ನ ಕಿಂಚಿತ್ ಚಿಕೇತಃ ಇತಿ ನಚಿಕೇತಃ. ಅಂದರೆ ಏನೂ ಮಾಡದವ ಎಂದರ್ಥ! ಈ ಅರ್ಥವನ್ನು ಕೇಳಿ ನಿಮಗೆ ಆಶ್ಚರ್ಯವಾಗಬಹುದು. ಏನೂ ಮಾಡದವನಿಗೆ ಯಮನೇಕೆ ಉಪದೇಶಕೊಟ್ಟ? ಈ ಪ್ರಶ್ನೆಗೆ ಉತ್ತರ ಸಿಗಬೇಕಾದರೆ ನಾವು ನಚಿಕೇತನ ಹಿನ್ನೆಲೆಯನ್ನು ತಿಳಿಯಬೇಕಾಗುತ್ತದೆ. ವಾಜಶ್ರವಸ್ಸಿನ ಮಗಳು ಅರುಣಾ. ಅರುಣೆಯ ಮಗನಾದ ಉದ್ದಾಲಕ ಎನ್ನುವ ಋಷಿ ಕುಟುಂಬದಲ್ಲಿ ಹುಟ್ಟಿದವ ನಚಿಕೇತ. ಉದ್ದಾಲಕ ಮಹಾಜ್ಞಾನಿ. ಆದರೆ ಆತ ತನ್ನ ಮನಸ್ಸಿನ ಕಾಮ-ಕ್ರೋಧ-ಮೋಹವನ್ನು ಪೂರ್ತಿ ಬಿಡಲಾಗದೆ ಲೋಭಿಯಾಗಿದ್ದ. ಈ ಕಾರಣದಿಂದ ಆತ ತಪ್ಪು ಮಾಡುತ್ತಿದ್ದ. ಆತನಿಗೆ ಇಬ್ಬರು ಮಕ್ಕಳು. ಮೊದಲನೆಯವ ಶ್ವೇತಕೇತು ಹಾಗೂ ಎರಡನೆಯವ ನಚಿಕೇತ. ಚಿಕ್ಕವನಿದ್ದಾಗ ನಚಿಕೇತ ಬಹಳ ಮೌನಿಯಾಗಿದ್ದ. ಹಾಗಾಗಿ ಆತನ ತಂದೆ-ತಾಯಿ ಆತನ ಅಂತರಂಗದ ಬೆಳವಣಿಗೆಯನ್ನು ಗುರುತಿಸಲಿಲ್ಲ. ಏನೂ

ಮಾಡದವನೆಂದು ತಿಳಿದು ಆತನನ್ನು ಗುರುಕುಲಕ್ಕೆ ಕಳುಹಿಸದೇ, ಮನೆಯಲ್ಲೇ ಇರಿಸಿಕೊಂಡರು. ಶಿಕ್ಷಣದಿಂದ ವಂಚಿತನಾದ ನಚಿಕೇತ ಮನೆಯಲ್ಲಿ ತಂದೆ ತಾಯಿ ಚಾಕರಿ ಮಾಡಿಕೊಂಡಿದ್ದ. ಇಂತಹ ನಚಿಕೇತನೇ ಈ ಉಪನಿಷತ್ತಿನ ಒಬ್ಬ ಋಷಿ(ಶಿಷ್ಯ) ಹಾಗೂ ಯಮ ಉಪದೇಶ ಮಾಡಿದ ಇನ್ನೊಬ್ಬ ಋಷಿ(ಗುರು).

ಬನ್ನಿ, ಮೋಕ್ಷ ನಿಯಾಮಕನಾದ ಭಗವಂತನ ಕುರಿತಾಗಿರುವ ಈ ಕೃತಿಯನ್ನು ಆ ಭಗವಂತನ ಅನುಗ್ರಹ ಬೇಡಿ ನಮ್ಮ ಯೋಗ್ಯತೆ ಇದ್ದಷ್ಟು ಅರಿಯಲು ಪ್ರಯತ್ನಿಸೋಣ.

*******

**Visit Us at :** http://kathopanishat.blogspot.in/

# ಶಾಂತಿ ಪಾಠ

ಓಂ ಸಹ ನಾವವತು । ಸಹ ನೌ ಭುನಕ್ತು । ಸಹವೀರ್ಯಂ ಕರವಾವಹೈ ।
ತೇಜಸ್ವಿ ನಾವಧೀತಮಸ್ತು । ಮಾ ವಿದ್ವಿಷಾವಹೈ ॥ ಓಂ ಶಾಂತಿಃ ಶಾಂತಿಃ ಶಾಂತಿಃ ॥

ಓ ಭಗವಂತ- ನೀನು ಗುರುಶಿಷ್ಯರಾದ ನಮ್ಮನ್ನು  ಜೊತೆಯಲ್ಲಿ ಕಾಪಾಡಿ ಪೋಷಿಸು. ನಮಗೆ ಈ ಅಧ್ಯಯನ ಮಾಡುವ ಸಾಮರ್ಥ್ಯವನ್ನು ಕೊಡು. ಈ ಅಧ್ಯಯನದಿಂದ ನಾವು ತೇಜಸ್ವಿಗಳಾಗುವಂತೆ ಮಾಡು. ನಾವೆಂದೂ ಪರಸ್ಪರ ದ್ವೇಷಮಾಡದೆ ಇರುವಂತೆ ರಕ್ಷಿಸು. ಓಂಕಾರ ವಾಚ್ಯ ಮತ್ತು ಮೋಕ್ಷನಿಯಾಮಕನಾದ ನೀನು ಜ್ಞಾನಾನಂದಗಳ ತುತ್ತತುದಿ.

(ಪೂರ್ಣ ವಿವರಣೆಯನ್ನು ಕೊನೆಯ ವಲ್ಲಿಯಲ್ಲಿ ನೀಡಲಾಗಿದೆ)

# ಅಧ್ಯಾಯ-೧

## ವಲ್ಲೀ-೧

ಉಶನ್ ಹ ವೈ ವಾಜಶ್ರವಸಃ ಸರ್ವವೇದಸಂ ದದೌ ।
ತಸ್ಯ ಹ ನಚಿಕೇತಾ ನಾಮ ಪುತ್ರ ಆಸ ॥ ೧॥

ವಾಜಶ್ರವಸ್ಸು ಎನ್ನುವ ಋಷಿಯ ಮಗಳು ಅರುಣಿ. ಈ ಅರುಣಿಯ ಮಗ ಉದ್ದಾಲಕ.(ಈತನನ್ನು ಔದ್ದಾಲಕಿ ಆರುಣೀ ಎಂದೂ ಕರೆಯುತ್ತಾರೆ.) ಈತನಿಗೆ ಶ್ವೇತಕೇತು ಮತ್ತು ನಚಿಕೇತ ಎನ್ನುವ ಇಬ್ಬರು ಪುತ್ರರಿದ್ದರು.[ಈ ಶ್ಲೋಕದಲ್ಲಿ 'ವಾಜಶ್ರವಸಃ' ಎನ್ನುವುದನ್ನು ಅನುವಾದಕಾರರು ಸಾಮಾನ್ಯವಾಗಿ 'ವಾಜಶ್ರವಸ್ಸಿನ ಮಗ-ನಚಿಕೇತ' ಎಂದು ತಪ್ಪಾಗಿ ಅನುವಾದಿಸುವುದನ್ನು ಕಾಣುತ್ತೇವೆ. ಆದರೆ ಅದು ಸರಿಯಲ್ಲ. ] ತತ್ವಚಿಂತನೆ, ಜಿಜ್ಞಾಸೆ, ಅನ್ನದಾನಕ್ಕೆ ಹೆಸರಾದ ವಾಜಶ್ರವಸ್ಸಿನ ಕುಟುಂಬದಲ್ಲಿ ಹುಟ್ಟಿಬೆಳೆದ ಉದ್ದಾಲಕ, ಸಮಗ್ರ ಶಾಸ್ತ್ರಜ್ಞನಾಗಿದ್ದ. ಜ್ಞಾನಿಯಾಗಿದ್ದ ಈತ ಸ್ವರ್ಗದ 'ಬಯಕೆ'ಯಿಂದ ಒಂದು ಯಜ್ಞ ಮಾಡಿದ. ಮಹಾನ್ ಜ್ಞಾನಿಯೊಬ್ಬ ಫಲಾಪೇಕ್ಷೆಯಿಂದ ಕರ್ಮ ಮಾಡುವುದನ್ನು ಈ ಶ್ಲೋಕದಲ್ಲಿ "ಹ ವೈ" ಎನ್ನುವಲ್ಲಿ ಆಶ್ಚರ್ಯ ಸೂಚಕವಾಗಿ ಪ್ರಸ್ತುತಪಡಿಸಲಾಗಿದೆ. ಶಾಸ್ತ್ರಕಾರರು ಹೇಳುವಂತೆ ನಾವು ಯಾವುದೇ ಪೂಜೆಯನ್ನಾಗಲಿ ಅಲ್ಪಫಲದ ಆಸೆಯಿಂದ ಮಾಡದೇ ಭಗವದ್ ಪ್ರೀತ್ಯರ್ಥವಾಗಿ ಮಾಡಬೇಕು. ಭಗವದ್ ಪ್ರೀತ್ಯರ್ಥವಾಗಿ ಮಾಡುವ ಕರ್ಮ ಎಲ್ಲಾ ಫಲಗಳನ್ನೊಳಗೊಂಡ 'ಭಗವಂತನ ಅನುಗ್ರಹ' ಎನ್ನುವ ಮಹಾಫಲವನ್ನು ಕೊಡುವಾಗ, ಅಲ್ಪ ಫಲದ ಆಸೆಯಿಂದ ಪೂಜೆ ಮಾಡಿದರೆ ಮಹಾಫಲವನ್ನು ಕಳೆದುಕೊಂಡಂತೆ. ಇಲ್ಲಿ ಜ್ಞಾನಿಯಾಗಿದ್ದ ಉದ್ದಾಲಕ ನಿಷ್ಕಾಮಕರ್ಮ ಮಾಡುವುದನ್ನು ಬಿಟ್ಟು, ಆಶ್ಚರ್ಯವೆಂಬಂತೆ ಫಲವನ್ನು ಬಯಸಿ 'ಸರ್ವವೇದಸ್' ಎನ್ನುವ ಯಜ್ಞ ಮಾಡಿದ. 'ವೇದಸ್' ಎಂದರೆ 'ಸಂಪತ್ತು'. 'ಸರ್ವವೇದಸ್' ಎಂದರೆ ತನ್ನಲ್ಲಿರುವ ಸರ್ವಸ್ವವನ್ನೂ ದಾನ ಮಾಡುವುದು. ಉದ್ದಾಲಕ ಇಂತಹ ಮಹಾನ್ ಯಜ್ಞವನ್ನು ಮಾಡುವಾಗಲೂ ಕೂಡಾ ಲೋಭತನದಿಂದ ಮಾಡಿದ!

ತಂ ಹ ಕುಮಾರಂ ಸಂತಂ ದಕ್ಷಿಣಾಸು ನೀಯಮಾನಾಸು
ಶ್ರದ್ಧಾಽಽವಿವೇಶ ಸೋಽಮನ್ಯತ ॥೨॥

ಪೀತೋದಕಾ ಜಗ್ಧತೃಣಾ ದುಗ್ಧದೋಹಾ ನಿರಿಂದ್ರಿಯಾಃ ।
ಅನಂದಾ ನಾಮ ತೇ ಲೋಕಾಸ್ತಾನ್ ಸ ಗಚ್ಛತಿ ತಾ ದದತ್ ॥೩॥

ಸಾಮಾನ್ಯವಾಗಿ ಕಾಡಿನಲ್ಲಿ ವಾಸಿಸುವ ಋಷಿಗಳ ಸಂಪತ್ತು-ಹಸುಗಳು. ಲೋಭದಿಂದಾಗಿ ಹಸುಗಳಲ್ಲಿ ಒಳ್ಳೆಯ ಹಸುಗಳನ್ನು ಬಿಟ್ಟು ಗೊಡ್ಡು ಹಸುಗಳನ್ನು ಉದ್ದಾಲಕ ದಾನ ಮಾಡುತ್ತಿದ್ದ. ಈ ದೃಶ್ಯವನ್ನು ಹೊರನೋಟಕ್ಕೆ ಮಂದ ಬುದ್ಧಿಯವನಂತೆ ಕಾಣುವ ಪುಣ್ಯಜೀವಿ-ಆತನ ಮಗ ನಚಿಕೇತ ನೋಡುತ್ತಿದ್ದ. ಮಹಾತ್ಮನಾದ ಆತನಿಗೆ ತನ್ನ ತಂದೆ ಮಾಡುತ್ತಿರುವ ತಪ್ಪಿನ ಅರಿವಾಗುತ್ತದೆ. ಯಜ್ಞವೆಂಬ ಮಹತ್ಕಾರ್ಯ ಮಾಡಿ ಅಲ್ಲಿ ತನ್ನ ಲೋಭಕ್ಕೆ ವಶವಾಗಿರುವ

ತಂದೆ ಅನ್ಯಾಯವಾಗಿ ಪಾಪ ಕಾರ್ಯವನ್ನು ಮಾಡುವುದನ್ನು ಕಂಡು ಆತ ಮರುಗುತ್ತಾನೆ. ಚಿಕ್ಕವನಾದ್ದರಿಂದ ಆತನಿಗೆ ತಂದೆಗೆ ಬುದ್ಧಿವಾದ ಹೇಳಲು ಸಾಧ್ಯವಾಗುವುದಿಲ್ಲ. ಈ ರೀತಿ ದಾನ ಮಾಡಿದ್ದರಿಂದ ಪಾಪ ಬರುತ್ತದೆ ಎಂದು ಹೇಳುವ ಬದಲು "ನನ್ನನ್ನು ಯಾರಿಗಾದರೂ ದಾನ ಮಾಡು" ಎಂದು ಹೇಳುವುದಕ್ಕಾಗಿ ಆತ ತಂದೆಯ ಬಳಿ ಹೋಗುತ್ತಾನೆ.

ಸ ಹೋವಾಚ ಪಿತರಂ ತತ ಕಸ್ಮೈ ಮಾಂ ದಾಸ್ಯಸೀತಿ ।
ದ್ವಿತೀಯಂ ತೃತೀಯಂ ತಂ ಹೋವಾಚ ಮೃತ್ಯವೇ ತ್ವಾ ದದಾಮೀತಿ ॥೪॥

ತಂದೆಯ ಬಳಿ ಹೋದ ನಚಿಕೇತ ಹೇಳುತ್ತಾನೆ: "ಅಪ್ಪಾ, ಇದು ಸರ್ವಸ್ವವನ್ನೂ ದಾನ ಮಾಡುವ ಯಜ್ಞವಾಗಿರುವುದರಿಂದ ನನ್ನನ್ನು ಯಾರಿಗಾದರೂ ದಾನ ಮಾಡು. ನಾನು ಅವರ ಮನೆಯ ಚಾಕರಿ ಮಾಡಿಕೊಂಡು ಇದ್ದು ಬಿಡುತ್ತೇನೆ. ನನ್ನನ್ನು ದಾನ ಮಾಡಿದುದರ ಫಲ ನಿನಗೆ ಬರುತ್ತದೆ" ಎಂದು. ಈ ಹಿಂದೆ ಹೇಳಿದಂತೆ ನಚಿಕೇತನನ್ನು ಆತನ ತಂದೆ-ತಾಯಿ ಒಬ್ಬ ಬುದ್ಧಿಹೀನ ಬಾಲಕ ಎಂದು ತಿಳಿದಿದ್ದರು. ಆದ್ದರಿಂದ ಇಲ್ಲಿ ಆತನ ಮಾತನ್ನು ಉದ್ದಾಲಕ ಕಿವಿಗೊಡದೆ-ನಿರ್ಲಕ್ಷಿಸಿದ. ತನ್ನನ್ನು ಗಮನಿಸದ ತಂದೆಯ ಬಳಿ ನಚಿಕೇತ: "ನನ್ನನ್ನು ಯಾರಿಗೆ ಕೊಡುತ್ತೀಯ ಅಪ್ಪಾ" ಎಂದು ಎರಡನೇ ಬಾರಿ ಕೇಳುತ್ತಾನೆ. ಇದನ್ನೂ ಉದ್ದಾಲಕ ಅಲಕ್ಷಿಸಿದಾಗ, ನಚಿಕೇತ ಮೂರನೇ ಬಾರಿ: "ಅಪ್ಪಾ –ನನ್ನನ್ನು ಯಾರಿಗೆ ದಾನ ಮಾಡುತ್ತೀಯ" ಎಂದು ಕೇಳುತ್ತಾನೆ. ಮಗ ಮೂರನೇ ಬಾರಿ ಈ ರೀತಿ ಕೇಳಿದಾಗ ಉದ್ದಾಲಕನಿಗೆ ಕೋಪ ಬರುತ್ತದೆ. ಕೋಪದ ಬರದಲ್ಲಿ ಆತ ಹೇಳುತ್ತಾನೆ: "ಮೃತ್ಯವೇ ತ್ವಾ ದದಾಮಿ" ಎಂದು. ಅಂದರೆ "ನಿನ್ನನ್ನು ಮೃತ್ಯುವಿಗೆ(ಯಮನಿಗೆ) ಕೊಟ್ಟಿದ್ದೇನೆ" ಎಂದು. ಮೃತ್ಯುವಿಗೆ ದಾನ ಕೊಟ್ಟರೆ ಅಲ್ಲಿಗೆ ಈ ಸ್ಥೂಲ ಶರೀರದಿಂದ ಹೋಗಲು ಸಾಧ್ಯವಿಲ್ಲ. ದೇಹ ತ್ಯಜಿಸಿ ಸೂಕ್ಷ್ಮ ಶರೀರಿಯಾಗಿ ಮಾತ್ರ ಸೂಕ್ಷ್ಮಲೋಕ ಪಯಣ ಸಾಧ್ಯ. ನಮ್ಮಲ್ಲಿ ಪ್ರತಿಯೊಬ್ಬರ ಶರೀರದೊಳಗೂ ಒಂದು ಸೂಕ್ಷ್ಮ ಶರೀರವಿದೆ. ಅದನ್ನು ಅನಿರುದ್ಧ ಶರೀರ ಎನ್ನುತ್ತಾರೆ. ಮನಃಶಾಸ್ತ್ರಜ್ಞರು ಇದನ್ನು Arial Body ಎಂದು ಕರೆಯುತ್ತಾರೆ. ಸ್ಥೂಲ ದೇಹದಿಂದ ನಾವು ಸೂಕ್ಷ್ಮಲೋಕವನ್ನು ಕಾಣಲು ಸಾಧ್ಯವಿಲ್ಲವಾದ್ದರಿಂದ ಇಲ್ಲಿ ಉದ್ದಾಲಕ ಹೇಳಿರುವ ಮಾತು "ನೀನು ಸತ್ತು ಹೋಗು" ಎನ್ನುವ ಶಾಪ! ತಂದೆಯ ಬಾಯಿಯಿಂದ 'ಸಾಯಬೇಕು' ಎನ್ನುವ ಆದೇಶ ಬಂದಾಗ ನಚಿಕೇತ ಅದನ್ನು ಪಾಲಿಸಲು ತನ್ನ ಸ್ಥೂಲ ದೇಹವನ್ನು ತ್ಯಾಗಮಾಡಿ ಹೊರಟುಹೋದ. [ವಿದೇಶದಲ್ಲಿ ಇತ್ತೀಚೆಗೆ ಸಂಮೋಹನ ವಿದ್ಯೆಯನ್ನು(Hypnotism) ಪ್ರದರ್ಶಿಸುತ್ತಿದ್ದಾಗ ನಡೆದ ಒಂದು ಘಟನೆ ಈ ಮೇಲಿನ ಕಥೆಗೆ ಪೂರಕ. ಪ್ರದರ್ಶನದ ಒಂದು ಹಂತದಲ್ಲಿ ಸಂಮೋಹನ ಮಾಡುತ್ತಿದ್ದ ವ್ಯಕ್ತಿಯ(hypnotiser) ಮಾತನ್ನು ಸಂಮೋಹನಕ್ಕೊಳಗಾದ ವ್ಯಕ್ತಿ(person under hypnosis) ತಕ್ಷಣ ಪಾಲಿಸಲಿಲ್ಲ. ಆಗ ಕೋಪಗೊಂಡ ಆತ(hypnotiser) "Go to Hell" ಎಂದು ಬಯ್ಯುತ್ತಾನೆ. ತಕ್ಷಣ ಸಂಮೋಹನಕ್ಕೊಳಗಾದ ವ್ಯಕ್ತಿ ಅಲ್ಲೇ ಬಿದ್ದು ಪ್ರಾಣ ಕಳೆದುಕೊಳ್ಳುತ್ತಾನೆ].

ಮುಂದಿನ ಶ್ಲೋಕಕ್ಕೆ ಹೋಗುವ ಮುನ್ನ ಇಲ್ಲಿ ನಚಿಕೇತನ ಕಥೆಯ ಬಗ್ಗೆ ಸ್ವಲ್ಪ ವಿಶ್ಲೇಷಣೆ ಮಾಡೋಣ. ನಚಿಕೇತನ ಕಥೆ ಕೇವಲ ಕಠೋಪನಿಷತ್ತಿನಲ್ಲಿ ಮಾತ್ರವಲ್ಲದೆ ತೈತ್ತಿರೀಯ ಬ್ರಾಹ್ಮಣ[೩-೧-೮], ಮಹಾಭಾರತ[ಅನುಶಾಸನ ಪರ್ವ] ಹಾಗೂ ಪುರಾಣದಲ್ಲಿ ಕೂಡಾ ಪ್ರಸ್ತಾಪವಾಗಿದೆ. ಒಂದನ್ನೊಂದು ತಾಳೆ ಹಾಕಿದಾಗ ನಮಗೆ ಅಲ್ಲಿ ಕೆಲವೊಂದು ಹೊಸ ವಿಷಯಗಳು, ಇನ್ನು ಕೆಲವು ವ್ಯತ್ಯಾಸಗಳು ಕಂಡು ಬರುತ್ತವೆ. ನಾವು ಎಲ್ಲವನ್ನೂ ಸಮಷ್ಠಿಯಾಗಿ ನೋಡಿದಾಗ ಮಾತ್ರ ನಮಗೆ ಕಥೆ ವಿಸ್ತಾರವಾಗಿ ಮತ್ತು ಪೂರ್ಣವಾಗಿ ತಿಳಿಯುತ್ತದೆ. ಪ್ರಾಚೀನರು ಯಾವ ವಿಷಯವನ್ನೂ ಒಂದೇ

ಕಡೆ ಬಿಡಿಸಿ ಹೇಳುತ್ತಿರಲಿಲ್ಲ. ಅವರು ತುಂಬಾ ಗೋಪ್ಯವಾದ ವಿಚಾರ ಕೇವಲ ಯೋಗ್ಯರಾದವರಿಗೆ ಮಾತ್ರ ಸಿಗಬೇಕು ಎನ್ನುವ ಉದ್ದೇಶದಿಂದ ಒಂದು ವಿಷಯವನ್ನು ಅನೇಕ ಗ್ರಂಥಗಳಲ್ಲಿ ಹುದುಗಿಡುತ್ತಿದ್ದರು. ಹಾಗಾಗಿ ನಾವು ಕೇವಲ ಒಂದು ಅಧ್ಯಾತ್ಮ ಗ್ರಂಥವನ್ನು ನೋಡಿದರೆ ನಮಗೆ ಆ ಕೃತಿಯ ಆಳ ಪೂರ್ಣವಾಗಿ ತಿಳಿಯುವುದಿಲ್ಲ. ಹೆಚ್ಚುಹೆಚ್ಚು ಅಧ್ಯಯನ ಮಾಡಿದಾಗ, ಭಗವದನುಗ್ರಹ ಇದ್ದಾಗ ಮಾತ್ರ ಸತ್ಯದ ಸ್ಫುರಣವಾಗುತ್ತದೆ.

ಇಲ್ಲಿ ಕಥೆ ಮುಂದುವರಿದು –ನಚಿಕೇತ ದೇಹತ್ಯಾಗ ಮಾಡಿ ಯಮಲೋಕಕ್ಕೆ ಹೋಗಿ ಅಲ್ಲಿ ಮೂರು ದಿನ ಆಹಾರ ಸೇವಿಸದೆ ಯಮನಿಗಾಗಿ ಕಾದ, ಅತಿಥಿಯನ್ನು ಕಾಯಿಸಿದ್ದಕ್ಕಾಗಿ ಯಮ ನಚಿಕೇತನಲ್ಲಿ "ಮೂರು ವರವನ್ನು ಕೇಳು" ಎಂದು ಹೇಳಿದ ಎಂದಿದೆ. ಆದರೆ ತೈತ್ತಿರೀಯ ಬ್ರಾಹ್ಮಣದಲ್ಲಿ ಇದೇ ಕಥೆ ಸ್ವಲ್ಪ ಭಿನ್ನವಾಗಿದೆ. ದೇಹತ್ಯಾಗ ಮಾಡಿ ಮೃತ್ಯುಲೋಕಕ್ಕೆ ಹೊರಟ ನಚಿಕೇತನಿಗೆ ದಾರಿಯಲ್ಲಿ ವಾಗ್ದೇವತೆಯ ದರ್ಶನವಾಗುತ್ತದೆ. ಆಕೆ "ನಿನಗೆ ಮೂರು ದಿನ ಯಮನ ದರ್ಶನವಾಗುವುದಿಲ್ಲ, ನಿನ್ನನ್ನು ಕಾಯಿಸಿದ್ದಕ್ಕಾಗಿ ಯಮ ನಿನಗೆ ಮೂರು ವರವನ್ನು ಕೇಳು ಎಂದು ಹೇಳುತ್ತಾನೆ, ಆಗ- ಬಿಟ್ಟು ಬಂದ ದೇಹದಲ್ಲಿ ಮರಳಿ ಹುಟ್ಟುವಂತೆ, ಅಗ್ನಿವಿದ್ಯೆ ಪರಮಾತ್ಮನ ವಿದ್ಯೆಯಾಗಿ ಮೋಕ್ಷ ಸಾಧನವಾಗುವ ಅರಿವು ಕೊಡುವಂತೆ ಮತ್ತು ಮೋಕ್ಷದ ಇರವಿನ ಅರಿವು ತಿಳಿಸುವಂತೆ ವರ ಕೇಳು" ಎಂದು ತರಭೇತಿ ಕೊಟ್ಟು ಕಳುಹಿಸುತ್ತಾಳೆ ಎಂದಿದೆ. ಇದೇ ಕಥೆ ಮಹಾಭಾರತದಲ್ಲಿ ಇನ್ನೂ ಸ್ವಲ್ಪ ಭಿನ್ನವಾಗಿದೆ. ಒಂದು ದಿನ ಉದ್ಧಾಲಕ ಮಗನೊಂದಿಗೆ ಸ್ನಾನಕ್ಕಾಗಿ ನದಿ ತೀರಕ್ಕೆ ಹೋದ. ಅಲ್ಲಿಂದ ಮರಳುವಾಗ ಆತ ತನ್ನ ಸ್ನಾನದ ಕಲಶವನ್ನು ಮರೆತು ಬಂದ. ಮನೆಗೆ ಬಂದ ಮೇಲೆ ಇದನ್ನು ಗಮನಿಸಿದ ಆತ ತನ್ನ ಮಗ ನಚಿಕೇತನನ್ನು ಕರೆದು, ನದಿ ತೀರಕ್ಕೆ ಹೋಗಿ ಮರೆತು ಬಂದ ಸ್ನಾನದ ಕಲಶವನ್ನು ತರುವಂತೆ ಹೇಳುತ್ತಾನೆ. ಆದರೆ ನಚಿಕೇತ ಕಲಶವನ್ನು ತರದೆ ಬರಿಗೈಯಲ್ಲಿ ಹಿಂದಿರುಗುತ್ತಾನೆ. ಈ ಕಾರಣದಿಂದಾಗಿ "ಮಗನಲ್ಲಿ ಸ್ವಲ್ಪವೂ ಜವಾಬ್ದಾರಿ ಇಲ್ಲ" ಎನ್ನುವ ಅಸಮಧಾನ ಉದ್ಧಾಲಕನಲ್ಲಿ ಮೂಡುತ್ತದೆ. ಇದಲ್ಲದೆ 'ಆ ಸಮಯದಲ್ಲಿ ಆತ ಹಸಿದಿದ್ದ' ಎನ್ನುತ್ತದೆ ಪುರಾಣ. ಇಂತಹ ಸಂದರ್ಭದಲ್ಲಿ ನಚಿಕೇತ ಪದೇಪದೇ "ನನ್ನನ್ನು ಯಾರಿಗೆ ದಾನ ಕೊಡುತ್ತೀ" ಎಂದು ಕೇಳಿದ್ದರಿಂದ ಉದ್ಧಾಲಕ ಕೋಪದಿಂದ "ಮೃತ್ಯುವಿಗೆ ದಾನ ಮಾಡಿದ್ದೇನೆ" ಎನ್ನುತ್ತಾನೆ.

ಮಹಾಭಾರತದಲ್ಲಿ ಹೇಳುವಂತೆ: - ಯಮಲೋಕಕ್ಕೆ ಬಂದ ಪುಣ್ಯಜೀವಿ ನಚಿಕೇತನನ್ನು ಯಮ ಸತ್ಕರಿಸಿ ಯೋಗ-ಕ್ಷೇಮ ವಿಚಾರಿಸಿದ. 'ನಿನಗೇನುಬೇಕು' ಎಂದು ಕೇಳಿದ್ದಕ್ಕೆ "ಸೂಕ್ಷ್ಮಲೋಕವನ್ನೊಮ್ಮೆ ನೋಡಬೇಕು" ಎನ್ನುವ ತನ್ನ ಅಭಿಲಾಷೆಯನ್ನು ನಚಿಕೇತ ಯಮನ ಮುಂದಿಟ್ಟ. ಆತನ ಬಯಕೆಯನ್ನು ಪುರಸ್ಕರಿಸಿದ ಯಮ ಆತನನ್ನು ರಥದಲ್ಲಿ ಕುಳ್ಳಿರಿಸಿ, ಸೂಕ್ಷ್ಮಲೋಕ ವೀಕ್ಷಣೆಗೆ ಕಳುಹಿಸಿಕೊಟ್ಟ. ಎಲ್ಲವನ್ನೂ ನೋಡಿ ಬಂದ ಮೇಲೆ ಯಮ ನಚಿಕೇತನಲ್ಲಿ "ನಿನ್ನ ಆಯಸ್ಸು ಇನ್ನೂ ಮುಗಿದಿಲ್ಲ, ತಂದೆಯ ಆಜ್ಞೆ ಪಾಲಿಸುವುದಕ್ಕೋಸ್ಕರ ಬಂದಿರುವ ನೀನು, ಮರಳಿ ಹೋಗು" ಎಂದು ಹೇಳಿ ಕಳುಹಿಸಿ ಕೊಟ್ಟನಂತೆ. ಹೀಗೆ ಕಳುಹಿಸುವಾಗ ಯಮ "ಗೋದಾನ ಬಹಳ ವಿಶೇಷವಾದದ್ದು, ಅದನ್ನು ಲೋಭದಿಂದ ಮಾಡಿ ವ್ಯರ್ಥ ಮಾಡಬೇಡ" ಎನ್ನುವ ಸಂದೇಶವನ್ನು ಉದ್ಧಾಲಕನಿಗೆ ಕಳುಹಿಸಿಕೊಟ್ಟ ಎಂದಿದೆ. –ಇದು ಕಥೆ.

ಕಥೆಯಲ್ಲಿ ಹೇಳಲಾದ 'ಮೂರು ದಿನಗಳು' ಕೇವಲ ನಚಿಕೇತನ ಅಂತರ್ದೃಷ್ಟಿಯಲ್ಲಿ ಮೂಡಿ ಬಂದ ಮೂರು ದಿನಗಳೇ ಹೊರತು, ಇದು ದೇವಲೋಕದ ಅಥವಾ ಭೂಲೋಕದ ಮೂರು ದಿನಗಳಲ್ಲ. ಏಕೆಂದರೆ ದೇವಲೋಕದ ಮೂರು ದಿನ ಎಂದರೆ ನಮ್ಮ ಮೂರು ವರ್ಷ. ಸತ್ತ ಮಗನ ಶರೀರವನ್ನು ಮುಂದಿಟ್ಟುಕೊಂಡು ಉದ್ಧಾಲಕ ರಾತ್ರಿಯೆಲ್ಲಾ ಪಶ್ಚಾತ್ತಾಪಪಟ್ಟ, ಮುಂಜಾನೆ ಸತ್ತ ಮಗ ಜೀವಂತವಾಗಿ ಎದ್ದು ನಿಂತ ಎಂದು ಒಂದು ಕಡೆ ಹೇಳಿರುವುದರಿಂದ, ನಚಿಕೇತನ ಸೂಕ್ಷ್ಮಲೋಕದ ಪಯಣ ಕೇವಲ ಕೆಲವು ಘಳಿಗೆಯಷ್ಟಾಗಿತ್ತು ಎನ್ನುವುದು ಇಲ್ಲಿ ಸ್ಪಷ್ಟ. ನಮ್ಮ ಒಳಗಿನ

ನೋಟಕ್ಕೆ ಸಮಯದ ಅಪೇಕ್ಷೆ ಇಲ್ಲ. ಒಂದು ಕ್ಷಣದಲ್ಲಿ ಹತ್ತಾರು ದಿನದ ಕಥೆಯನ್ನು ಅಂತರ್ದೃಷ್ಟಿಯಲ್ಲಿ ಕಾಣಬಹುದು. ಇಲ್ಲಿ ನಚಿಕೇತನಿಗಾಗಿರುವುದು ಅಂತಃದರ್ಶನ. ಬನ್ನಿ, ಈ ಎಲ್ಲಾ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ಮುಂದಿನ ಶ್ಲೋಕಗಳನ್ನು ನೋಡೋಣ.

ಬಹೂನಾಮೇಮಿ ಪ್ರಥಮೋ ಬಹೂನಾಮೇಮಿ ಮಧ್ಯಮಃ ।
ಕಿಂ ಸ್ವಿದ್ಯಮಸ್ಯ ಕರ್ತವ್ಯಂ ಯನ್ಮಯಾऽದ್ಯ ಕರಿಷ್ಯತಿ ॥೫॥

"ನಿನ್ನನ್ನು ಮೃತ್ಯುವಿಗೆ ದಾನ ಮಾಡಿದ್ದೇನೆ-ಅಲ್ಲಿಗೆ ಹೋಗು" ಎನ್ನುವ ತಂದೆಯ ಕೋಪದ ಮಾತನ್ನು ನಚಿಕೇತ ಆದೇಶವಾಗಿ ಸ್ವೀಕರಿಸಿ, ಸ್ಥೂಲ ದೇಹವನ್ನು ತೊರೆದು ಪರಲೋಕದತ್ತ ತನ್ನ ಸೂಕ್ಷ್ಮಶರೀರದ ಮೂಲಕ ಪಯಣಿಸುತ್ತಾನೆ. ಹೀಗೆ ಸಾಗುವಾಗ ಆತನ ಹಿಂದೆ ಆತನ ನಂತರ ಸತ್ತವರು ಹಾಗೂ ಆತನಿಗಿಂತ ಮುಂದೆ ಆತನಿಗಿಂತ ಮೊದಲು ಸತ್ತ ಜೀವಗಳ ಪ್ರವಾಹವೇ ಸಾಗುತ್ತಿತ್ತು. ಆತನ ಹಿಂದಿರುವ ಜೀವಗಳ ಮುಂದಾಳಾಗಿ, ಆತನಿಗಿಂತ ಮುಂದಿರುವ ಜೀವಗಳ ಗುಂಪಿನಲ್ಲಿ ಒಬ್ಬನಾಗಿ ನಚಿಕೇತ ಪರಲೋಕದತ್ತ ತೆರಳುತ್ತಿದ್ದ. ಹೀಗೆ ಸಾಗುತ್ತಿದ್ದ ಆತನಿಗೆ ತನ್ನ ತಂದೆಯ ಮೇಲೆ ಯಾವುದೇ ಕೋಪವಿರಲಿಲ್ಲ. ತಾನು ಚಿಕ್ಕ ವಯಸ್ಸಿನಲ್ಲೇ ಸಾಯಬೇಕಾಗಿ ಬಂತಲ್ಲಾ ಎನ್ನುವ ದುಃಖವೂ ಇರಲಿಲ್ಲ. ಆದರೆ ತಂದೆ ನನ್ನನ್ನು ಯಮನಿಗೆ ದಾನವಾಗಿ ಕೊಟ್ಟು, ಈ ದಾನವನ್ನೂ ವ್ಯರ್ಥ ಮಾಡಿದನಲ್ಲಾ ಎನ್ನುವ ಬೇಸರವಿತ್ತು. ಏಕೆಂದರೆ ಒಂದು ವೇಳೆ ಇನ್ನ್ಯಾರಿಗೋ ದಾನ ಮಾಡುತ್ತಿದ್ದರೆ ನಚಿಕೇತ ಅವರ ಸೇವೆ ಮಾಡಿಕೊಂಡು ಬದುಕುತ್ತಿದ್ದ ಮತ್ತು ಅದರ ಪುಣ್ಯ ತಂದೆಗೆ ಸೇರುತ್ತಿತ್ತು. ಆದರೆ ಇಲ್ಲಿ ಯಮನಿಗೆ ದಾನ ಮಾಡಿರುವುದರಿಂದ- ಯಮನಿಗೆ ತನ್ನಿಂದ ಯಾವ ಉಪಯೋಗವೂ ಇಲ್ಲ, ಆದ್ದರಿಂದ ಈ ದಾನವೂ ವ್ಯರ್ಥವಾಯಿತಲ್ಲಾ ಎನ್ನುವುದು ಆತನ ಚಿಂತನೆ.

ಅನುಪಶ್ಯ ಯಥಾ ಪೂರ್ವೇ ಪ್ರತಿಪಶ್ಯ ತಥಾऽಪರೇ ।
ಸಸ್ಯಮಿವ ಮರ್ತ್ಯಃ ಪಚ್ಯತೇ ಸಸ್ಯಮಿವಾಜಾಯತೇ ಪುನಃ ॥೬॥

ಯಮಲೋಕದತ್ತ ಸಾಗುತ್ತಿರುವ ನಚಿಕೇತ ಯಮಧೂತರ ಮಾತುಗಳನ್ನೂ ಕೇಳಿಸಿಕೊಳ್ಳುತ್ತಾನೆ. ಅವರು ಹೇಳುತ್ತಾರೆ: ಪಾಪಿಗಳು ಯಮಲೋಕದಲ್ಲಿ ಯಾವ ರೀತಿ ಯಾತನೆ ಅನುಭವಿಸುತ್ತಾರೆ ಅನ್ನುವುದನ್ನು ಅನುಭವಿಸಿ ನೋಡು" ಎಂದು. "ಹಿಂದೆ ಬಂದವರು ಅನುಭವಿಸಿದ್ದೂ ಇದನ್ನೇ, ಮುಂದೆ ಬರುವವರು ಅನುಭವಿಸುವುದೂ ಇದನ್ನೇ. ಸಸ್ಯವನ್ನು(ತರಕಾರಿಯನ್ನು) ಹೇಗೆ ಪಾತ್ರೆಯಲ್ಲಿ ಹಾಕಿ ಕುದಿಸುತ್ತಾರೋ, ಹಾಗೇ ಪಾಪಿಗಳನ್ನು ನರಕದ ಕುಂಡದಲ್ಲಿ ಕುದಿಸುತ್ತಾರೆ. ಅವರು ಈ ರೀತಿ ದುಃಖದಲ್ಲಿ ಬೆಂದು, ದುಃಖವನ್ನು ಅನುಭವಿಸಿ, ಪಕ್ವವಾಗಿ ಪುನಃ ಭೂಮಿಯಲ್ಲಿ ಹುಟ್ಟುತ್ತಾರೆ".

ವೈಶ್ವಾನರಃ ಪ್ರವಿಶತ್ಯತಿಥಿರ್ಬ್ರಾಹ್ಮಣೋ ಗೃಹಾನ್ ।
ತಸ್ಯೈತಾಂ ಶಾಂತಿಂ ಕುರ್ವಂತಿ ಹರ ವೈವಸ್ವತೋದಕಂ ॥೭॥

ಹಿಂದೆ ಹೇಳಿದಂತೆ ಯಮಲೋಕವನ್ನು ತಲುಪಿದ ನಚಿಕೇತನಿಗೆ ತಕ್ಷಣ ಯಮನ ದರ್ಶನ ಆಗುವುದಿಲ್ಲ. ಜ್ಞಾನಿಯಾದ ನಚಿಕೇತನನ್ನು ಯಮನ ಪತ್ನಿ ಉಪಚರಿಸುತ್ತಾಳೆ. ಆದರೆ ನಚಿಕೇತ ಯಮನ ದರ್ಶನ ಆಗುವ ತನಕ ಯಾವುದೇ ಆಹಾರವನ್ನು ಸ್ವೀಕರಿಸುವುದಿಲ್ಲ. ಈ ರೀತಿ ಕಾಯುತ್ತಿರುವಾಗ ಯಮನ ಆಗಮನವಾಗುತ್ತದೆ. ಹೀಗೆ ಬಂದ ಯಮನಲ್ಲಿ ಯಮನ ಪತ್ನಿ ಹೇಳುತ್ತಾಳೆ: "ಹಸಿದು ಬಂದ ಒಬ್ಬ ಬ್ರಹ್ಮ ಜ್ಞಾನಿ ನಮ್ಮ ಮನೆ ಮುಂದೆ ಉಪವಾಸ ಕೂತಿದ್ದಾನೆ. ತನ್ನ ಹೊಟ್ಟೆಯಲ್ಲಿ ವೈಶ್ವಾನರ(ಬೆಂಕಿ, ಅಗ್ನಿ ನಾರಾಯಣ)ನನ್ನು ಹೊತ್ತು ಬಂದಿರುವ ಅತಿಥಿಯ ಹಸಿವನ್ನು ಮೊದಲು ಹಿಂಗಿಸು. ಇಲ್ಲದಿದ್ದರೆ ನಮ್ಮ ಇಡೀ ದೇವಲೋಕ ಭಸ್ಮವಾದೀತು" ಎಂದು.

ಇಲ್ಲಿ ಅತಿಥಿ ಎಂದರೆ ಆಕಸ್ಮಿಕವಾಗಿ ಹಸಿದು ಆಹಾರ ಬಯಸಿ ಬರುವವರು. ಇವರಿಗೆ ತಿಥಿ(ದಿನಾಂಕ ಅಥವಾ ಸಮಯ) ಇಲ್ಲ. [ನಾವು ಕರೆದಾಗ ಬರುವವರು, ನೆಂಟರಿಷ್ಟರು, ಅತಿಥಿಗಳಲ್ಲ-ಅವರು ಅಭ್ಯಾಗತರು]. ಹಿಂದೆ ಇಂದಿನ ರೀತಿ ವಸತಿಗೃಹ, ಉಪಹಾರ ಗೃಹಗಳಿರಲಿಲ್ಲ. ಪ್ರತಿಯೊಂದು ಮನೆಯಲ್ಲಿ ಹಸಿದು ಬರುವವನಿಗೆ ಅನ್ನ-ನೀರು ಕೊಡುವ ಅದ್ಭುತ ಸಂಪ್ರದಾಯ ಈ ದೇಶದಲ್ಲಿತ್ತು. ಶಾಸ್ತ್ರಕಾರರ ಪ್ರಕಾರ ಯಾರೇ ಹಸಿದವರು ಬಂದರೂ ನಾವು ಅವರ ಹೊಟ್ಟೆ ತಣಿಸದೆ ಕಳುಹಿಸಬಾರದು. ಅವನ ಕುಲ-ಗೋತ್ರ ಯಾವುದೂ ಇಲ್ಲಿ ಪ್ರಮುಖವಲ್ಲ. ಹಸಿದು ಬಂದವ ಅತಿಥಿ ಅಷ್ಟೇ. "ಹಸಿದು ಬಂದವನ ಹಸಿವನ್ನು ತಣಿಸದಿದ್ದರೆ ಆತನ ಹೊಟ್ಟೆಯಲ್ಲಿನ ಬೆಂಕಿ ನಿನ್ನ ಮನೆಯನ್ನು ಸುಡುತ್ತದೆ" ಎನ್ನುವುದು ನಮ್ಮ ಪ್ರಾಚೀನರು ಕಂಡುಕೊಂಡ ಸತ್ಯವಾಗಿತ್ತು. ಅತಿಥಿ ರೂಪದಲ್ಲಿ ಭಗವಂತ ಬೆಂಕಿಯಾಗಿ ಮನೆಗೆ ಬಂದಾಗ, ಮೊದಲು ಮೂರು ಬಗೆಯ ನೀರನ್ನು ಕೊಟ್ಟು ಬೆಂಕಿಯನ್ನು ಶಾಂತಗೊಳಿಸಬೇಕು. ಕೈ ತೊಳೆಯುವ ನೀರು-ಅರ್ಘ್ಯ, ಕಾಲು ತೊಳೆಯುವ ನೀರು-ಪಾದ್ಯ ಮತ್ತು ಕುಡಿಯುವ ನೀರು-ಆಚಮನ. ಇಲ್ಲಿ ಒಬ್ಬ ಜ್ಞಾನಿ ಅತಿಥಿಯಾಗಿ ಬಂದು ಯಮನಿಗಾಗಿ ಕಾದು ಕುಳಿತಿದ್ದಾನೆ. ಅದಕ್ಕಾಗಿ ಯಮನ ಹೆಂಡತಿ ಕಾದು ಕುಳಿತಿರುವ ಅತಿಥಿಯ ಸತ್ಕಾರ ಮಾಡಿ ಆತನ ಹೊಟ್ಟೆಯಲ್ಲಿನ ಅಗ್ನಿಯನ್ನು ತಣಿಸು" ಎಂದು ವಿವಸ್ವತನ(ಸೂರ್ಯನ) ಮಗನಾದ ಯಮನಿಗೆ ಹೇಳುತ್ತಾಳೆ.[ಕೆಲವು ಅನುವಾದಕಾರರು ಈ ಮಾತನ್ನು ಯಮನ ಮಂತ್ರಿಗಳು ಹೇಳಿದರು ಎಂದು ಬರೆಯುತ್ತಾರೆ. ಆದರೆ ಹಿಂದೆ ಹೇಳಿದಂತೆ ನಾವು ಮಹಾಭಾರತ, ತೈತ್ತಿರೀಯ ಬ್ರಾಹ್ಮಣ ಮತ್ತು ಪುರಾಣದಲ್ಲಿ ಬರುವ ನಚಿಕೇತನ ಕಥೆಯನ್ನು ಸಮಷ್ಠಿಯಾಗಿ ನೋಡಿದಾಗ- ಈ ಮಾತನ್ನು ಯಮನ ಪತ್ನಿ-ಶ್ಯಾಮಲ ಹೇಳಿರುವುದು ಸ್ಪಷ್ಟವಾಗುತ್ತದೆ].

> ಆಶಾಪ್ರತೀಕ್ಷೇ ಸಂಗತಂ ಸೂನೃತಾಂ ಚೇಷ್ಟಾಪೂರ್ತೇ ಪುತ್ರಪಶೂಂಶ್ಚ ಸರ್ವಾನ್ ।
> ಏತದ್ವೃಂಕ್ತೇ ಪುರುಷಸ್ಯಾಲ್ಪಮೇಧಸೋ ಯಸ್ಯಾನಶ್ನನ್ ವಸತಿ ಬ್ರಾಹ್ಮಣೋ ಗೃಹೇ ॥೮॥

ಹಸಿದು ಬಂದ ಅತಿಥಿಯನ್ನು ಸತ್ಕರಿಸದೆ ತಿರಸ್ಕರಿಸುವುದರ ಪರಿಣಾಮ ಏನು ಎನ್ನುವುದನ್ನು ಈ ಶ್ಲೋಕದಲ್ಲಿ ಯಮನ ಪತ್ನಿ ವಿವರಿಸುತ್ತಾಳೆ. "ಒಂದು ವೇಳೆ ಅತಿಥಿಯನ್ನು ಬೈದು ಕಳುಹಿಸಿದರೆ ನಿಮ್ಮ ಆಶಾ ಪ್ರತೀಕ್ಷಗಳು ಮಣ್ಣುಪಾಲಾಗುತ್ತವೆ, ಗೆಳೆಯರು ನಿಮ್ಮಿಂದ ದೂರವಾಗುತ್ತಾರೆ, ಯಾರೂ ನಿನ್ನನ್ನು ನೋಡಿ ಒಳ್ಳೆಯ ಮಾತನಾಡುವುದಿಲ್ಲ. ನಿಮ್ಮ ಇಷ್ಟಾ-ಪೂರ್ತಾ-ಸರ್ವಸ್ವವೂ ನಾಶವಾಗುತ್ತದೆ" ಎನ್ನುತ್ತಾಳೆ ಆಕೆ. ಇಲ್ಲಿ 'ಇಷ್ಟಾ' ಎಂದರೆ ನಮ್ಮ ಬೆಳವಣಿಗೆಗಾಗಿ ನಾವು ಮಾಡುವ ಕ್ರಿಯೆ ಮತ್ತು 'ಪೂರ್ತಾ' ಎಂದರೆ ಸಮಾಜದ ಋಣವನ್ನು ತೀರಿಸುವುದಕ್ಕೋಸ್ಕರ ಮಾಡುವ ಕ್ರಿಯೆ. ಒಟ್ಟು ಆರು ಇಷ್ಟಗಳು ಹಾಗೂ ಆರು ಪೂರ್ತಾಗಳನ್ನು ಶಾಸ್ತ್ರಕಾರರು ಪಟ್ಟಿ ಮಾಡಿದ್ದಾರೆ. "ಅಗ್ನಿಹೋತ್ರಂ ತಪಃ ಸತ್ಯಂ ವೇದಾನಾಂಚಾನುಪಾಲನಂ ಆತಿಥ್ಯಂ ವೈಶ್ವಾದೇವಂ ಚ ಇಷ್ಟಂ ಇತಿ

ಅಭಿಧೀಯತೆ" – (೧) ನಿತ್ಯ ಅಗ್ನಿ ಮುಖದಲ್ಲಿ ಆರಾಧನೆ(ಅಗ್ನಿಹೋತ್ರ), (೨) ಉಪವಾಸ, ಬ್ರಹ್ಮಚರ್ಯ, ಇತ್ಯಾದಿ ನೈಷ್ಠಿಕ ಜೀವನ ಬದುಕುವುದು(ತಪಃ), (೩) ಪ್ರಾಮಾಣಿಕವಾದ ಬದುಕು(ಸತ್ಯ), (೪) ನಿರಂತರ ವೇದಾಧ್ಯಯನ ಹಾಗೂ ವೇದೋಕ್ತ ಕರ್ಮಾನುಷ್ಠಾನ, (೫) ಹಸಿದವರಿಗೆ ಅನ್ನ ನೀಡಿ ಸತ್ಕರಿಸುವುದು(ಆತಿಥ್ಯ), (೬) ದೇವತೆಗಳ ಆತಿಥ್ಯ –ಇವು ಆರು ಇಷ್ಟಗಳು. ಹಾಗೇ (೧) ಸಮಾಜದ ಉಪಯೋಗಕ್ಕಾಗಿ ಬಾವಿ ತೋಡಿಸುವುದು, (೨) ಇಳಿಬಾವಿಯನ್ನು ಕಟ್ಟುವುದು, (೩) ಸ್ನಾನದ ಕೆರೆಯನ್ನು ಕಟ್ಟುವುದು, (೪) ಊರಿನ ಕ್ಷೇಮಕ್ಕೋಸ್ಕರ ದೇವಸ್ಥಾನ ಕಟ್ಟುವುದು, (೫) ಸಾರ್ವಜನಿಕ ಅನ್ನದಾನ ಮತ್ತು (೬) ಗಿಡ ಮರಗಳನ್ನು ಬೆಳೆಸುವುದು- ಇವು ಆರು ಪೂರ್ತಾಗಳು. ಇಲ್ಲಿ ಯಮನ ಪತ್ನಿ ಹೇಳುತ್ತಾಳೆ: "ಒಂದು ವೇಳೆ ಅತಿಥಿಯನ್ನು ತಿರಸ್ಕರಿಸಿದರೆ ಅದರಿಂದ ಇಷ್ಟಾ ಮತ್ತು ಪೂರ್ತಾದ ಎಲ್ಲಾ ಪುಣ್ಯ ಫಲಗಳೂ ನಷ್ಟವಾಗುತ್ತದೆ" ಎಂದು.

ತಿಸ್ರೋ ರಾತ್ರೀರ್ಯದವಾತ್ಸೀರ್ಗೃಹೇ ಮೇಽನಶ್ನನ್ ಬ್ರಹ್ಮನ್ನತಿಥಿರ್ನಮಸ್ಯಃ ।
ನಮಸ್ತೇಽಸ್ತು ಬ್ರಹ್ಮನ್ ಸ್ವಸ್ತಿ ಮೇಽಸ್ತು ತಸ್ಮಾತ್ಪ್ರತಿ ತ್ರೀನ್ವರಾನ್ವೃಣೀಷ್ವ ॥೯॥

ತನಗಾಗಿ ಅನ್ನ-ನೀರನ್ನು ಬಿಟ್ಟು ಕಾಯುತ್ತಿದ್ದ ನಚಿಕೇತನನ್ನು ಕುರಿತು ಯಮ ಹೇಳುತ್ತಾನೆ: "ತಂದೆಯ ಅಣತಿಯಂತೆ ನನ್ನನ್ನು ಕಾಣಲು ಬಂದ ನೀನು ನನಗೆ ಅತಿಥಿ. ಹೀಗಿರುವಾಗ ಅತಿಥಿಯನ್ನು ಮೂರು ದಿನ ಕಾಯಿಸಿದ ಪಾಪ ನನಗೆ ಬಂತು" ಎಂದು. "ನನ್ನ ಗೃಹದಲ್ಲಿ ನನ್ನ ಅತಿಥಿಯಾಗಿ ಉಪವಾಸ ಕುಳಿತ ನಮಸ್ಕಾರ ಯೋಗ್ಯ ಜ್ಞಾನಿ ನೀನು. ನಮ್ಮಿಂದ ಅದೆಷ್ಟು ದೊಡ್ಡ ಅಪರಾಧವಾಗಿ ಹೋಗಿದೆ. ನಿನ್ನ ಕಾಲಿಗೆ ಬಿದ್ದು ಕ್ಷಮೆ ಕೇಳಬೇಕು ನಾವು. ನಿನಗೆ ನನ್ನ ನಮಸ್ಕಾರ" ಎನ್ನುತ್ತಾನೆ ಯಮ. ಎಷ್ಟು ದೊಡ್ಡ ಮಾತು! ಪುಣ್ಯ ಪಾಪಗಳ ನಿರ್ಣಯ ಮಾಡಿ ಪಾಪಿಗಳಿಗೆ ದುಃಖವನ್ನೂ ಪುಣ್ಯಜೀವಿಗಳಿಗೆ ಸುಖವನ್ನೂ ಕೊಡುವ, ಲೋಕದ ಸುಖ-ದುಃಖಗಳ ನಿಯಾಮಕ ದೇವತೆ ಯಮ ಇಲ್ಲಿ "ನನ್ನ ಅಪರಾಧವನ್ನು ಕ್ಷಮಿಸು, ನಿನಗೆ ನಮಸ್ಕಾರ" ಎನ್ನುತ್ತಿದ್ದಾನೆ. ಇದು ಹಿರಿಯರ ದೊಡ್ಡ ಗುಣ. ಶ್ರದ್ಧಾವಾನ್ ಲಭತೇ ಜ್ಞಾನಂ(೪-೩೯) ಎಂದು ಕೃಷ್ಣ ಗೀತೆಯಲ್ಲಿ ಹೇಳಿರುವಂತೆ-ಜ್ಞಾನಿಗಳಿಗೆ ಅಪಮಾನ ಮಾಡಿದರೆ ಅದು ಭಗವಂತನನ್ನು ಅಪಮಾನ ಮಾಡಿದಂತೆ. ಜ್ಞಾನಿಗಳು ಭಗವಂತನಿಗೆ ಪರಮ ಪ್ರಿಯರು. ಈ ಕಾರಣದಿಂದ ಜ್ಞಾನಿಯನ್ನು ಕಾಯಿಸಿದ್ದಕ್ಕೆ ಇಲ್ಲಿ ಯಮ ಕ್ಷಮೆ ಕೇಳುತ್ತಿದ್ದಾನೆ. "ನನಗೆ ಅನಿಷ್ಟವಾಗದಂತೆ ಹರಸು; ಅಷ್ಟೇ ಅಲ್ಲ, ನಿನ್ನನ್ನು ಮೂರು ದಿನ ಕಾಯಿಸಿದ್ದಕ್ಕಾಗಿ ನೀನು ಬಯಸಿದ ಮೂರು ವರವನ್ನು ಕೊಡುತ್ತೇನೆ –ಏನು ಬೇಕಾದರೂ ಕೇಳು" ಎನ್ನುತ್ತಾನೆ ಯಮ.

ಶಾಂತಸಂಕಲ್ಪಃ ಸುಮನಾ ಯಥಾ ಸ್ಯಾದ್ ವೀತಮನ್ಯುರ್ಗೌತಮೋ ಮಾಽಭಿ ಮೃತ್ಯೋ ।
ತ್ವತ್ಪ್ರಸೃಷ್ಟಂ ಮಾಽಭಿವದೇತ್ಪ್ರತೀತ ಏತತ್ ತ್ರಯಾಣಾಂ ಪ್ರಥಮಂ ವರಂ ವೃಣೇ ॥೧೦॥

ನಚಿಕೇತ ಯಮನಲ್ಲಿ ಕೇಳುವ ಮೊದಲ ವರವನ್ನು ಈ ಶ್ಲೋಕದಲ್ಲಿ ವರ್ಣಿಸಲಾಗಿದೆ. "ನಾನು ಪುನಃ ನನ್ನ ತಂದೆಗೆ ಮಗನಾಗಿ ಅದೇ ದೇಹದಲ್ಲಿ ಹುಟ್ಟಬೇಕು; ನನ್ನ ತಂದೆ ಸತ್ತು ಬದುಕಿದ ನನ್ನನ್ನು ಗುರುತಿಸಬೇಕು; ನನ್ನನ್ನು ನೋಡಿ ಸಂತೋಷಪಡಬೇಕು; ಒಳ್ಳೆಯ ಮಾತನ್ನಾಡಿ ಸ್ವಾಗತಿಸಬೇಕು; ನನ್ನ ತಂದೆಗೆ 'ಕೆಟ್ಟದ್ದನ್ನು ಮಾಡುವ' ಬಯಕೆ ಎಂದೂ ಬರಬಾರದು; ಆತನ ಮನಸ್ಸು ಸದಾ ಒಳ್ಳೆಯ ಕೆಲಸ ಮಾಡಲು ಚಡಪಡಿಸಬೇಕು ಮತ್ತು ಆತ ಎಂದೂ ಕೋಪ ಮಾಡಬಾರದು" ಎಂದು ನಚಿಕೇತ ಯಮನನ್ನು ಕೇಳುತ್ತಾನೆ. ಇದು ನಚಿಕೇತ ಕೇಳುವ ಮೊದಲ ವರ.

ಯಥಾ ಪುರಸ್ತಾದ್ ಭವಿತಾ ಪ್ರತೀತಃ ಔದ್ದಾಲಕಿರಾರುಣಿರ್ಮತ್ಪ್ರಸೃಷ್ಟಃ ।
ಸುಖಂ ರಾತ್ರೀಃ ಶಯಿತಾ ವೀತಮನ್ಯುಃ ತ್ವಾಂ ದದೃಶಿವಾನ್ ಮೃತ್ಯುಮುಖಾತ್ ಪ್ರಮುಕ್ತಂ ॥೧೧॥

ನಚಿಕೇತ ಕೇಳಿದ ವರವನ್ನು ಯಮ ಪುರಸ್ಕರಿಸುತ್ತಾನೆ ಮತ್ತು ಹೇಳುತ್ತಾನೆ: "ನೀನು ಹಿಂದಿರುಗಿ ಹೋದಾಗ ನಿನ್ನ ತಂದೆ ನಿನ್ನನ್ನು ಅಷ್ಟೇ ಸ್ಪಷ್ಟವಾಗಿ ಗುರುತಿಸುತ್ತಾನೆ. ನಿನ್ನನ್ನು ಪ್ರೀತಿಯಿಂದ ಸ್ವಾಗತಿಸುತ್ತಾನೆ. ಮರಳಿ ಹೋದ ನಿನ್ನನ್ನು ಕಂಡ ಮೇಲೆ ಆತನ ಕೋಪ ನಾಶವಾಗಿ ಆತ ಶಾಂತನಾಗುತ್ತಾನೆ ಮತ್ತು ಆತ ರಾತ್ರಿ ಸುಖನಿದ್ದೆಯನ್ನು ಪಡೆಯುತ್ತಾನೆ" ಎಂದು.

ಇಲ್ಲಿ ಉದ್ದಾಲಕನನ್ನು ಔದ್ದಾಲಕಿ ಆರುಣಿ ಎಂದು ಕರೆದಿದ್ದಾರೆ. ಔದ್ದಾಲಕಿ ಎಂದರೆ ಉದ್ದಾಲಕನ ಮೊಮ್ಮಗ. ಹಿಂದೆ ಅಜ್ಜನ ಹೆಸರನ್ನು ಮೊಮ್ಮೊಗನಿಗೆ ಇಡುವುದು ಸಂಪ್ರದಾಯವಾಗಿತ್ತು. ಇಲ್ಲಿ ಉದ್ದಾಲಕನ ತಾತನ ಹೆಸರೂ ಉದ್ದಾಲಕ ಎನ್ನುವುದನ್ನು ನಾವು ಗಮನಿಸಬೇಕು. ಅರುಣೆಯ ಮಗ ಹಾಗೂ ಉದ್ದಾಲಕನ ಮೊಮ್ಮಗನಾದ ನಚಿಕೇತನ ತಂದೆ- ಔದ್ದಾಲಕಿ ಆರುಣಿ.

ಸ್ವರ್ಗೇ ಲೋಕೇ ನ ಭಯಂ ಕಿಂಚನಾಸ್ತಿ ನ ತತ್ರ ತ್ವಂ ನ ಜರಯಾ ಬಿಭೇತಿ ।
ಉಭೇ ತೀರ್ತ್ವಾ ಅಶನಾಯಾಪಿಪಾಸೇ ಶೋಕಾತಿಗೋ ಮೋದತೇ ಸ್ವರ್ಗಲೋಕೇ॥೧೨॥

ಸ ತ್ವಮಗ್ನಿಂ ಸ್ವರ್ಗ್ಯಮಧ್ಯೇಷಿ ಮೃತ್ಯೋ ಪ್ರಬ್ರೂಹಿ ತ್ವಂ ಶ್ರದ್ಧಧಾನಾಯ ಮಹ್ಯಂ ।
ಸ್ವರ್ಗಲೋಕಾ ಅಮೃತತ್ವಂ ಭಜಂತ ಏತದ್ ದ್ವಿತೀಯೇನ ವೃಣೇ ವರೇಣ॥೧೩॥

ಇಲ್ಲಿ "ಸ್ವರ್ಗೇ ಲೋಕೇ ನ ಭಯಂ ಕಿಂಚನಾಸ್ತಿ" ಎನ್ನುವಲ್ಲಿ ಬಂದಿರುವ 'ಸ್ವರ್ಗ ಲೋಕ' ಅಂದರೆ ದೇವತೆಗಳಿರುವ ದೇವೇಂದ್ರನ ಲೋಕವಲ್ಲ. ಏಕೆಂದರೆ ಇಲ್ಲಿ 'ನ ಭಯಂ ಕಿಂಚನಾಸ್ತಿ' ಎಂದಿದ್ದಾರೆ. ಅಂದರೆ ಇದು ಯಾವ ಭಯವೂ ಇಲ್ಲದ ಸ್ವರ್ಗಲೋಕ. ದೇವೇಂದ್ರನ ಲೋಕ ಕೇವಲ ತಾತ್ಕಾಲಿಕ ಸುಖವನ್ನು ಅನುಭವಿಸಿ ಭೂಮಿಗೆ ಮರಳುವ ಲೋಕ. ಅಲ್ಲಿ ದೇವತೆಗಳಿಗೂ ಕೂಡಾ ಪತನದ ಭಯವಿದೆ. ಆದ್ದರಿಂದ ಇಲ್ಲಿ ಹೇಳುವ ಸ್ವರ್ಗಲೋಕ-ಭಗವಂತನ ಲೋಕವಾದ ಮೋಕ್ಷ. ಮೋಕ್ಷದಲ್ಲಿ ಮೃತ್ಯುವಿನ ಭಯವಿಲ್ಲ, ಜರಾ-ವ್ಯಾಧಿಯ ಭಯವಿಲ್ಲ [ನ ತತ್ರ ತ್ವಂ ನ ಜರಯಾ ಬಿಭೇತಿ]. ಸಹಜವಾಗಿ ಸ್ವರ್ಗ=ಸ್ವ+ರ+ಗ. ಇಲ್ಲಿ 'ಸ್ವಃ' ಅಂದರೆ ಎಲ್ಲಾ ಸ್ವರಗಳಿಂದ ವಾಚ್ಯನಾದ ಭಗವಂತನ ರೂಪ. ಸ್ವರಃ ಅಂದರೆ-ಸ್ವಯಮೇವ ರಮತಿ ಇತಿ ಸ್ವರಃ. ಸ್ವಯಂ ಆನಂದಸ್ವರೂಪನಾದ ಭಗವಂತ. ಆತನ ಆನಂದಕ್ಕೆ ಇನ್ನೊಂದು ಸಾಧನ ಅಥವಾ ಅಧಿಷ್ಠಾನ ಬೇಡ. ಇಂತಹ ಭಗವಂತ ಎಲ್ಲಿ ಸದಾ ಗತನಾಗಿದ್ದಾನೋ [ಸದಾ ವ್ಯಕ್ತನಾಗಿರುತ್ತಾನೋ] ಅದು ಸ್ವರ್ಗಲೋಕ. ಅಂದರೆ ಮುಕ್ತಸ್ಥಾನ. ಇನ್ನೊಂದು ರೀತಿಯಲ್ಲಿ ಈ ಪದವನ್ನು ಬಿಡಿಸಿದರೆ ಸು+ವ+ರ್ಗ=ಸ್ವರ್ಗ. ಇಲ್ಲಿ ಸುವಃ ಅಂದರೆ ಜ್ಞಾನಾನಂದಸ್ವರೂಪನಾದ ಭಗವಂತ. [ಈ ವಿವರಣೆ ಗಾಯತ್ರಿಯಲ್ಲಿದೆ]. ಅಂತಹ ಭಗವಂತ ಗತನಾದ ಲೋಕ ಸ್ವರ್ಗಲೋಕ-ಅದು ಮೋಕ್ಷ ಸ್ಥಾನ. ಈ ಹಿನ್ನೆಲೆಯನ್ನು ತಿಳಿದು ಈ ಶ್ಲೋಕವನ್ನು ವಿಶ್ಲೇಷಿಸೋಣ.

ಯಮನ ಅನುಗ್ರಹಕ್ಕೆ ಪಾತ್ರನಾದ ನಚಿಕೇತ ಮುಂದುವರಿದು ಹೇಳುತ್ತಾನೆ: "ಮೋಕ್ಷದಲ್ಲಿ ಸಾವಿನ ಭಯವಿಲ್ಲ. ಅಲ್ಲಿ ಹುಟ್ಟು ಸಾವಿನ ನಡುವಿನ ತರಂಗಗಳಾದ ಶೋಕ, ಮೋಹ, ಹಸಿವು, ಬಾಯಾರಿಕೆ, ಮುಪ್ಪು, ರೋಗ ಯಾವುದೂ ಇಲ್ಲದೆ ಎಲ್ಲರೂ ಆನಂದವಾಗಿರುತ್ತಾರೆ ಎಂದು ಕೇಳಿದ್ದೇನೆ. ಸ್ವರ್ಗಲೋಕಕ್ಕೆ ಹೋಗಿ ಅಲ್ಲಿಂದ ವೈಕುಂಠಕ್ಕೆ ಹೋಗಬೇಕಾದರೆ ಸ್ವರ್ಗ ನಿಯಾಮಕನಾದ ಮತ್ತು ಅಗ್ನಿಸ್ಥನಾದ ಭಗವಂತನನ್ನು ತಿಳಿದುಕೊಳ್ಳಬೇಕು ಎನ್ನುವ ವಿಚಾರ ಗೊತ್ತಿದೆ. ನೀನು ಮೋಕ್ಷಪ್ರದನಾದ ನಾರಾಯಣನನ್ನು ಉಪಾಸನೆ ಮಾಡಿದ್ದೀಯ. ಈ ಅಗ್ನಿಸ್ಥನಾದ ಭಗವಂತನನ್ನು ನಾನು ಹೇಗೆ ಉಪಾಸನೆ ಮಾಡಬೇಕು-ಅದನ್ನು ಹೇಳು. ನನಗೆ ಶ್ರದ್ಧೆ ಇದೆ. ನಾನು ಶ್ರದ್ಧೆಯಿಂದ ಕೇಳುತ್ತಿದ್ದೇನೆ. ಭಗವಂತನೆಂಬ ಅಮೃತತತ್ವವನ್ನು ಉಪಾಸನೆ ಮಾಡಿ, ಸ್ವರ್ಗವನ್ನು ಸೇರಿ ಅಲ್ಲಿ ಸ್ವಲ್ಪ ಕಾಲ ಇದ್ದು, ಆಮೇಲೆ ವೈಕುಂಠವನ್ನು ಸೇರುತ್ತಾರೆ ಎನ್ನುವುದನ್ನು ತಿಳಿದವರು ಹೇಳುತ್ತಾರೆ. ಮೋಕ್ಷ ಸಾಧನೆಗಾಗಿ ಉಪಾಸನೆ ಮಾಡಬೇಕಾದ ಭಗವಂತನನ್ನು ಅಗ್ನಿ ಮುಖದಲ್ಲೇ ಏಕೆ ಉಪಾಸನೆ ಮಾಡಬೇಕು ಮತ್ತು ಹೇಗೆ ಮಾಡಬೇಕು. ಅಗ್ನಿಮುಖದಲ್ಲಿ ಆರಾಧನೆ ಮಾಡುವ, ಅದರ ಹಿಂದಿನ ವಿಜ್ಞಾನ ಮತ್ತು ಉಪಾಸನೆಯ ರಹಸ್ಯವನ್ನು ನನಗೆ ಹೇಳು" ಎಂದು ನಚಿಕೇತ ತನ್ನ ಎರಡನೇ ವರವನ್ನು ಯಮನಲ್ಲಿ ಕೇಳುತ್ತಾನೆ.

ಇಲ್ಲಿ ನಚಿಕೇತ 'ನನಗೆ ಶ್ರದ್ಧೆ ಇದೆ, ನಾನು ಶ್ರದ್ಧೆಯಿಂದ ಕೇಳುತ್ತಿದ್ದೇನೆ' ಎಂದಿದ್ದಾನೆ. ಸಂಸ್ಕೃತದಲ್ಲಿ 'ಶ್ರದ್ಧಾ' ಎನ್ನುವ ಶಬ್ದಕ್ಕೆ ಅಪೂರ್ವವಾದ ಅರ್ಥವಿದೆ. 'ಶ್ರತ್' ಎಂದರೆ ಆಸ್ತಿಕ್ಯ. ಆಸ್ತಿಕ್ಯ ಅಂದರೆ ನಮಗೆ ಗೊತ್ತಿಲ್ಲದ, ನಾವು ಕಾಣದ ಸತ್ಯವೂ ಇದೆ ಅನ್ನುವುದನ್ನು ನಂಬುವುದು. ನಮಗೆ ಯಾವುದು ಗೊತ್ತಿಲ್ಲವೋ, ನಾವು ಯಾವುದನ್ನು ಕಾಣಲಿಲ್ಲವೋ ಅದೂ ಕೂಡಾ ಈ ಬ್ರಹ್ಮಾಂಡದಲ್ಲಿದೆ, ಇಲ್ಲಿ ನಾವು ಕಂಡದ್ದಷ್ಟೇ ಇರುವುದಲ್ಲ ಅನ್ನುವ ನಂಬಿಕೆ ಆಸ್ತಿಕ್ಯ. ಇಂತಹ ಆಸ್ತಿಕ್ಯವನ್ನು ಹೊಂದಿರುವುದು ಶ್ರದ್ಧಾ. ಶ್ರದ್ಧೆ ಉಳ್ಳವರು ಪರಲೋಕವನ್ನು, ಭಗವಂತನನ್ನು ಎಂದೂ ನಿರಾಕರಣೆ ಮಾಡುವುದಿಲ್ಲ.

ಮುಂದಿನ ಶ್ಲೋಕಕ್ಕೆ ಹೋಗುವ ಮುನ್ನ ಇಲ್ಲಿ ಅಗ್ನಿಯ ಪ್ರತೀಕದಲ್ಲಿ ಭಗವಂತನ ಆರಾಧನೆಯ ಕುರಿತು ವಿಶೇಷವಾಗಿ ನಚಿಕೇತ ಏಕೆ ಪ್ರಶ್ನೆ ಮಾಡಿದ ಎನ್ನುವುದನ್ನು ಒಮ್ಮೆ ವಿಶ್ಲೇಷಿಸೋಣ. ವೇದದಲ್ಲಿ ಭಗವಂತನ ಆರಾಧನೆಗೆ ಅತ್ಯಂತ ಮುಖ್ಯವಾದ ಪ್ರತೀಕ ಅಗ್ನಿ ಎನ್ನುತ್ತಾರೆ. ಅಗ್ನಿ ಎಂದೂ ಅಪವಿತ್ರವಲ್ಲ. ಅಗ್ನಿಸ್ಪರ್ಶದಿಂದ ಅಪವಿತ್ರ ಕೂಡಾ ಪವಿತ್ರವಾಗುತ್ತದೆ. ನಮಗೆ ಭಗವಂತನಿಗೆ ಏನನ್ನಾದರೂ ತಿನ್ನಿಸಬೇಕು ಎನ್ನುವ ಅಭಿಲಾಷೆ ಇದ್ದರೆ ಅದನ್ನು ಕೇವಲ ಅಗ್ನಿ ಮುಖೇನ ಅರ್ಪಿಸಬೇಕು. ನಮ್ಮ ಕಣ್ಣ ಮುಂದೆ ಇರುವ ಎಲ್ಲಾ ಪ್ರತೀಕಗಳಲ್ಲಿ ಅಗ್ನಿ ಅತ್ಯಂತ ಶ್ರೇಷ್ಠ ಎನ್ನುವುದು ವೇದಕಾಲದ ಋಷಿಗಳ ತೀರ್ಮಾನ. ಸುಡುವ ಅಗ್ನಿಯಲ್ಲಿ ಅಗ್ನಿದೇವ, ಅವನೊಳಗೆ ಪ್ರಾಣ, ಪ್ರಾಣನೊಳಗೆ ಭಗವಂತ. ಈ ಅನುಸಂಧಾನದಲ್ಲಿ ಅಗ್ನಿಮುಖದಲ್ಲಿ ಮಾಡುವ ಪೂಜೆ ಯಜ್ಞ. ಇದು ಯಜ್ಞ ನಾಮಕ ಭಗವಂತನನ್ನು, ಯಜ್ಞದಿಂದ, ಜ್ಞಾನ-ಭಕ್ತಿ-ವೈರಾಗ್ಯದಿಂದ ಕೂಡಿದ ಉತ್ಕೃಷ್ಟವಾದ ಆಹ್ವಾನದಿಂದ ಮಾಡುವ ಆರಾಧನೆ. ಬದುಕಿದ್ದಷ್ಟು ಕಾಲ ಭಗವಂತನನ್ನು ಅಗ್ನಿ ಮುಖದಲ್ಲಿ ಆರಾಧನೆ ಮಾಡುವುದು ನಮ್ಮ ಪ್ರಾಚೀನ ಸಂಪ್ರದಾಯವಾಗಿತ್ತು. ಒಟ್ಟಿನಲ್ಲಿ ಭಗವಂತನನ್ನು ಅಗ್ನಿ ಪ್ರತೀಕದಲ್ಲಿ ಆರಾಧನೆ ಮಾಡುವುದು ಬಹಳ ಶ್ರೇಷ್ಠ. ಇಲ್ಲಿ ನಚಿಕೇತನಿಗೆ ಭೂಸ್ತರದಲ್ಲಿ ಅಗ್ನಿಹೋತ್ರದ ಮಹತ್ವ ತಿಳಿದಿತ್ತು. ಅದಕ್ಕಾಗಿ ಆತ ಅದರ ಹಿಂದಿನ ವಿಜ್ಞಾನವನ್ನು, ಅಗ್ನಿಮುಖದಲ್ಲಿ ಭಗವಂತನ ಉಪಾಸನೆ ಮಾಡುವ ಪೂರ್ಣ ರಹಸ್ಯವನ್ನು ಹೇಳಿಕೊಡು ಎಂದು ವರಕೇಳಿದ.

ನಾವು ಯಾವ ಕ್ರಿಯೆಯನ್ನು ಮಾಡುವುದಾದರೂ ತಿಳಿದು ಮಾಡುವುದು ಬಹಳ ಮುಖ್ಯ. ಸಾಮಾನ್ಯವಾಗಿ ಇಂದು ನಮ್ಮ ಮನೆಗಳಲ್ಲಿ ನಡೆಯುವ ಧಾರ್ಮಿಕ ಕ್ರಿಯೆಗಳನ್ನು ನೋಡಿದರೆ, ಅಲ್ಲಿ ತಿಳುವಳಿಕೆ ಇದ್ದು ಮಾಡುವವರು ತುಂಬಾ ವಿರಳ. ತಿಳಿಯದೇ ಮಾಡುವ ಕ್ರಿಯೆ ಮೂಢತನವಾಗುವ ಸಾಧ್ಯತೆ ಬಹಳ ಹೆಚ್ಚು. ತಿಳಿಯದೇ ಹಿಂದಿನವರು

ಮಾಡಿಕೊಂಡು ಬಂದ ಸಂಪ್ರದಾಯ ಎಂದು ಕಣ್ಮುಚ್ಚಿ ನಡೆಸಿಕೊಂಡು ಬರುವುದರ ಅಪಾಯವನ್ನು ಒಂದು ಕಥೆಯಲ್ಲಿ ಈ ರೀತಿ ವರ್ಣಿಸಿದ್ದಾರೆ: ಒಂದು ಊರಿನಲ್ಲಿ ಒಬ್ಬ ಯುವಕನಿದ್ದ. ಆತನ ತಂದೆ ಒಮ್ಮೆ ತಮ್ಮ ಹಿರಿಯರ ಶ್ರಾದ್ಧ ಮಾಡುತ್ತಿದ್ದರು. ಆ ಸಮಯದಲ್ಲಿ ಮನೆಯಲ್ಲಿದ್ದ ಬೆಕ್ಕು ಅಲ್ಲಿ-ಇಲ್ಲಿ ಬಂದು ತೊಂದರೆ ಕೊಡುತ್ತಿತ್ತು. ಇದನ್ನು ಗಮನಿಸಿದ ಅವರು ಆ ಬೆಕ್ಕನ್ನು ಕಟ್ಟಿ ಹಾಕುವಂತೆ ಮನೆಯವರಿಗೆ ಹೇಳುತ್ತಾರೆ. ಈ ರೀತಿ ಅವರು ಬೆಕ್ಕನ್ನು ಕಟ್ಟಿಹಾಕಿ ಶ್ರಾದ್ಧ ಮಾಡುತ್ತಾರೆ. ಕಾಲಕ್ರಮೇಣ ಯುವಕ ದೊಡ್ಡವನಾದ ಹಾಗೂ ಒಂದು ದಿನ ಆತ ತನ್ನ ತಂದೆಯ ಶ್ರಾದ್ಧ ಮಾಡಬೇಕಾಗಿ ಬಂತು. ಆಗ ಅವರ ಮನೆಯಲ್ಲಿ ಬೆಕ್ಕು ಇರಲಿಲ್ಲ. ಅದಕ್ಕಾಗಿ ಆತ ಎಲ್ಲಿಂದಲೋ ಒಂದು ಬೆಕ್ಕನ್ನು ತಂದು ಕಟ್ಟಿಹಾಕಿಕೊಂಡು ಶ್ರಾದ್ಧ ಮಾಡುತ್ತಾನೆ. ಆತನಿಗೆ ತನ್ನ ತಂದೆ ಏಕೆ ಬೆಕ್ಕನ್ನು ಕಟ್ಟಿ ಹಾಕಿದ್ದರು ಎನ್ನುವುದು ತಿಳಿದಿರಲಿಲ್ಲ. ಆತ ತಿಳಿದುಕೊಂಡಿದ್ದು 'ಶ್ರಾದ್ಧ ಮಾಡಬೇಕಾದರೆ ಬೆಕ್ಕನ್ನು ಕಟ್ಟಿಹಾಕಬೇಕು' ಎಂದು!. ಇಂದು ನಮ್ಮ ಪ್ರತಿಯೊಂದು ಆಚರಣೆಯಲ್ಲಿ ಇಂತಹ ಮೂಢನಂಬಿಕೆಗಳು ತುಂಬಿಹೋಗಿವೆ. ಇದಕ್ಕಾಗಿ ಹಿಂದಿನವರು ಮಾಡಿದ್ದನ್ನು ಏಕೆ-ಏನು ಎಂದು ಗೊತ್ತಿಲ್ಲದೆ ಮಾಡಬಾರದು. ಪ್ರತಿಯೊಂದು ಕ್ರಿಯೆಯ ಹಿಂದಿನ ವೈಶಿಷ್ಟ್ಯವನ್ನು ತಿಳಿದು ಮಾಡುವುದು ಬಹಳ ಮುಖ್ಯ. ಈ ಕಾರಣದಿಂದಲೇ ನಚಿಕೇತನ ಪ್ರಶ್ನೆಯನ್ನು ಕೇಳಿ ಯಮನಿಗೆ ಬಹಳ ಸಂತೋಷವಾಯಿತು. ಚಿಕ್ಕ ಹುಡುಗನಾದರೂ ಆತ ತಾನು ತಿಳಿದು ಮಾಡಬೇಕು ಮತ್ತು ಜಗತ್ತಿಗೆ ತಿಳಿಸಬೇಕು ಎನ್ನುವ ಆಸೆಯಿಂದ ಕೇಳಿದ್ದರಿಂದ, ಯಮ ಸಂತೋಷದಿಂದ ಆತನ ಪ್ರಶ್ನೆಗೆ ಉತ್ತರಿಸುತ್ತಾನೆ.

> ಪ್ರ ತೇ ಬ್ರವೀಮಿ ತದು ಮೇ ನಿಬೋಧಃ ಸ್ವರ್ಗ್ಯಮಗ್ನಿಂ ನಚಿಕೇತಃ ಪ್ರಜಾನನ್ ।
> ಅನಂತಲೋಕಾಪ್ತಿಮಥೋ ಪ್ರತಿಷ್ಠಾಂ ವಿದ್ಧಿ ತ್ವಮೇತಂ ನಿಹಿತಂ ಗುಹಾಯಾಮ್ ॥೧೪॥

ನಚಿಕೇತನ ಪ್ರಶ್ನೆಗೆ ಉತ್ತರಿಸುತ್ತಾ ಯಮ ಹೇಳುತ್ತಾನೆ: "ಎಲ್ಲಾ ವಿವರವನ್ನು, ಎಲ್ಲಾ ರಹಸ್ಯವನ್ನು ಬಿಡಿಸಿ ಹೇಳುತ್ತೇನೆ-ಅದನ್ನು ನನ್ನಿಂದ ಕೇಳು" ಎಂದು. ನಮಗೆ ತಿಳಿದಂತೆ ನಾವು ಮಾಡುವ ಕರ್ಮದ ಪಾಪ-ಪುಣ್ಯವನ್ನು ಲೆಕ್ಕ ಹಾಕಿ ಅದಕ್ಕನುಗುಣವಾದ ಫಲವನ್ನು ನಿರ್ಧರಿಸುವವ ಯಮ. ಆದ್ದರಿಂದ ಕರ್ಮ ಮಾಡುವುದು ಹೇಗೆ, ಅದರ ಹಿಂದಿನ ಅನುಸಂಧಾನ ಹೇಗಿರಬೇಕು, ನಾವು ಮಾಡುವ ಕರ್ಮ ಮೋಕ್ಷಪ್ರದವಾಗಬೇಕಾದರೆ ಏನು ಮಾಡಬೇಕು- ಇದನ್ನು ನಿಖರವಾಗಿ ಹೇಳಬಲ್ಲವ ಯಮ. ಆದ್ದರಿಂದ "ಅದನ್ನು ನನ್ನಿಂದ ನೇರವಾಗಿ ಕೇಳು" ಎಂದಿದ್ದಾನೆ ಯಮ.

ಈ ಶ್ಲೋಕದಲ್ಲಿ ನಚಿಕೇತ ಮತ್ತು ಯಮ ಇಬ್ಬರಿಗೂ ಅನ್ವಯವಾಗುವ 'ಪ್ರಜಾನನ್' ಎನ್ನುವ ವಿಶೇಷಣ ಬಳಕೆಯಾಗಿದೆ. "ತಿಳುವಳಿಕೆ ಇಲ್ಲದ ಅಪ್ರಬುದ್ಧ-ನೀನಲ್ಲ, ಈ 'ಸ್ವರ್ಗ್ಯಗ್ನಿ' ಬಗ್ಗೆ ತಿಳಿದು ಅನುಷ್ಠಾನ ಮಾಡುವ ಯೋಗ್ಯತೆ ಇರುವವ(ಪ್ರಜಾನನ್) ನೀನು. ಆದರೂ ವಿಶೇಷ ತಿಳುವಳಿಕೆಗಾಗಿ ನನ್ನ ಬಳಿ ಕೇಳುತ್ತಿದ್ದೀಯ. ನನಗೆ ಈ ವಿದ್ಯೆ ಚೆನ್ನಾಗಿ ತಿಳಿದಿದೆ(ಪ್ರಜಾನನ್ ). ಅಂತಹ ಮೋಕ್ಷಪ್ರದ ಅಗ್ನಿವಿದ್ಯೆಯನ್ನು ನಾನು ನಿನಗೆ ಹೇಳುತ್ತೇನೆ". ಎನ್ನುವ ಧ್ವನಿ ಈ ವಿಶೇಷಣದ ಹಿಂದಿದೆ.

ಮುಂದುವರಿದು ಯಮ ಹೇಳುತ್ತಾನೆ: "ಈ ಅಗ್ನಿ ವಿದ್ಯೆಯನ್ನು ಯಾರು ತಿಳಿಯುತ್ತಾರೋ ಅವರಿಗೆ ಬರಿಯ ಸ್ವರ್ಗ ಪ್ರಾಪ್ತಿ ಮಾತ್ರವಲ್ಲ, ಅನಂತ ಲೋಕ ಪ್ರಾಪ್ತಿಯಾಗುತ್ತದೆ. ಆತ ಸಾವಿಲ್ಲದ ಮೋಕ್ಷವನ್ನು ಸೇರುತ್ತಾನೆ" ಎಂದು. ನಿತ್ಯಲೋಕದ ಪ್ರಾಪ್ತಿಗೆ ಕಾರಣವಾಗುವ ಈ ವಿದ್ಯೆಯ ಪ್ರತಿಪಾದ್ಯ ಭಗವಂತನನ್ನು ಇಲ್ಲಿ 'ಅನಂತಲೋಕಾಪ್ತಿ' ಎಂದು ಸಂಬೋಧಿಸಿದ್ದಾರೆ. ಭಗವಂತ ಅನಂತ ಲೋಕವನ್ನು ಕೊಡುವವನು ಮತ್ತು ಆತ ಎಲ್ಲಾ ಲೋಕಗಳ ಮೂಲಾಧಾರ(ಪ್ರತಿಷ್ಠ). ಸಾಂತವಾದ ಲೋಕವಿರಲೀ, ಅನಂತವಾದ ಲೋಕವಿರಲೀ ಆ ಲೋಕಕ್ಕೋಸ್ಕರ ಸಾಧನೆ

ಮಾಡುವ ಜೀವಜಾತವಿರಲೀ; ಎಲ್ಲವುದರ ಮೂಲಾಧಾರನಾದ, ಅಗ್ನಿಯಲ್ಲಿರತಕ್ಕಂತಹ ಭಗವಂತನ ವಿದ್ಯೆಯನ್ನು ತಿಳಿದು, ಅಗ್ನಿಯಲ್ಲಿ ಆತನ ಉಪಾಸನೆ ಮಾಡಿದರೆ ಅನಂತಲೋಕದ ಆಪ್ತಿಯಾಗುತ್ತದೆ ಮತ್ತು ನಿತ್ಯಲೋಕ ಶಾಶ್ವತವಾಗಿ ಪ್ರಾಪ್ತಿಯಾಗುತ್ತದೆ.

ಭಗವಂತನ ಪ್ರತೀಕದಲ್ಲಿ ಅತ್ಯಂತ ಶ್ರೇಷ್ಠವಾದ ಈ ಅಗ್ನಿ ಎಲ್ಲಿದೆ ಎಂದರೆ- ಇಲ್ಲಿ ಯಮ ಹೇಳುತ್ತಾನೆ: "ವಿದ್ಧಿ ತ್ವಮೇತಂ ನಿಹಿತಂ ಗುಹಾಯಾಮ್" ಎಂದು. ಭಗವಂತ ನಮ್ಮ ಹೃದಯ ಗುಹೆಯಲ್ಲೇ ಇದ್ದಾನೆ. ಕೃಷ್ಣ ಗೀತೆಯಲ್ಲಿ ಇದನ್ನೇ ಹೀಗೆ ಹೇಳಿದ್ದಾನೆ: "ಅಹಂ ವೈಶ್ವಾನರೋ ಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ" ಎಂದು. ನಮ್ಮ ದೇಹದಲ್ಲಿ ಅಗ್ನಿ ಅಂತರ್ಗತನಾದ ವೈಶ್ವಾನರ ನಾಮಕ ಭಗವಂತನಿದ್ದಾನೆ. ನಮ್ಮೊಳಗಿದ್ದು ನಮಗೆ ಬದುಕುಕೊಟ್ಟು ರಕ್ಷಣೆ ಮಾಡುವ ಭಗವಂತ ನಮ್ಮ ಹೃದಯದಲ್ಲಿ ಮಾತ್ರವಲ್ಲ ನಮ್ಮ ಸ್ವರೂಪದ ಹೃದಯದಲ್ಲೂ ಇದ್ದಾನೆ. ಈ ಕಾರಣದಿಂದ ಶಾಸ್ತ್ರಕಾರರು ಭಗವಂತನ ಎರಡು ರೂಪಗಳನ್ನು ಈ ರೀತಿ ವರ್ಣಿಸಿದ್ದಾರೆ: "ಆತ್ಮಾಂತರಾತ್ಮೇತಿ ಹರಿಃ ಏಕ ಏವ ದ್ವಿದಾಸ್ಥಿತಃ" ಎಂದು. ದೇಹದ ಹೃದಯದಲ್ಲಿ 'ಆತ್ಮ' ನಾಮಕನಾಗಿ, ದೇಹದ ಹೃದಯದಲ್ಲಿರುವ ಜೀವದ ಹೃದಯದಲ್ಲಿ 'ಅಂತರಾತ್ಮ' ನಾಮಕನಾಗಿ ಭಗವಂತನಿದ್ದಾನೆ. ಈ ಕಾರಣದಿಂದ "ಭಗವಂತನನ್ನು ಬೇರೆಲ್ಲೂ ಹುಡುಕುವುದು ಬೇಡ, ಆತ ನಿಮ್ಮ ಹೃದಯ ಗುಹೆಯಲ್ಲೇ ಇದ್ದಾನೆ" ಎಂದಿದ್ದಾನೆ ಯಮ. ಹೀಗಾಗಿ ಭಗವಂತನನ್ನು ಅಗ್ನಿಯಲ್ಲಿ ಉಪಾಸನೆ ಮಾಡುವಾಗ ಎಲ್ಲೋ ಹೊರಗಿನಿಂದ ಉಪಾಸನೆ ಮಾಡಬಾರದು. "ಮದ್ ಹೃದಯಸ್ಥಿತಂ, ವೈಶ್ವಾನರ ನಾಮಂ, ಅಗ್ನಿಯಂತರ್ಗತಂ, ಪರಶುರಾಮಂ, ಕುಂಡ ಮಧ್ಯೇ-ಆವಾಹಯಾಮಿ" ಎಂದು - ಹೃದಯದಲ್ಲಿರುವ ಭಗವಂತನನ್ನು ಕುಂಡದಲ್ಲಿ ಆವಾಹನೆ ಮಾಡಿ ಆರಾಧನೆ ಮಾಡಬೇಕು. ಅದೇ ರೀತಿ ಪ್ರತಿಮೆಯಲ್ಲೂ ಕೂಡಾ- "ಹೃತ್ಕಮಲಸ್ಥಿತಂ ನಾರಾಯಣಂ ಪ್ರತಿಮಾಯಾಂ ಆವಾಹಯಾಮಿ" ಎಂದು ಆವಾಹನೆ ಮಾಡಿ ಆರಾಧನೆ ಮಾಡಬೇಕು.

ಇಲ್ಲಿ ನಚಿಕೇತನಿಗೆ ಎಲ್ಲಾ ವಿವರವನ್ನೂ ಹೇಳುವುದಾಗಿ ಪ್ರತಿಜ್ಞೆ ಮಾಡಿದ್ದ ಯಮ ಮುಂದೇನು ಹೇಳಿದ ಎನ್ನುವುದನ್ನು ಮುಂದಿನ ಶ್ಲೋಕಗಳಲ್ಲಿ ನೋಡೋಣ.

ಲೋಕಾದಿಮಗ್ನಿಂ ತಮುವಾಚ ತಸ್ಮೈ ಯಾ ಇಷ್ಟಕಾ ಯಾವತೀರ್ವಾ ಯಥಾ ವಾ ।
ಸ ಚಾಪಿ ತತ್ಪ್ರತ್ಯವದದ್ಯಥೋಕ್ತಂ ಅಥಾಸ್ಯ ಮೃತ್ಯುಃ ಪುನರೇವಾಹ ತುಷ್ಟಃ ॥೧೫॥

ತಮಬ್ರವೀತ್ ಪ್ರೀಯಮಾಣೋ ಮಹಾತ್ಮಾ ವರಂ ತವೇಹಾದ್ಯ ದದಾಮಿ ಭೂಯಃ ।
ತವೈವ ನಾಮ್ನಾ ಭವಿತಾಽಯಮಗ್ನಿಃ ಸೃಂಕಾಂ ಚೇಮಾಮನೇಕರೂಪಾಂ ಗೃಹಾಣ॥೧೬॥

ತ್ರಿಣಾಚಿಕೇತಸ್ತ್ರಿಭಿರೇತ್ಯ ಸಂಧಿಂ ತ್ರಿಕರ್ಮಕೃತ್ತರತಿ ಜನ್ಮಮೃತ್ಯೂ ।
ಬ್ರಹ್ಮಜಜ್ಞಂ ದೇವಮೀಡ್ಯಂ ವಿದಿತ್ವಾ ನಿಚಾಯ್ಯೇಮಾಂ ಶಾಂತಿಮತ್ಯಂತಮೇತಿ॥೧೭॥

ತ್ರಿಣಾಚಿಕೇತಸ್ತ್ರಯಮೇತದ್ವಿದಿತ್ವಾ ಯ ಏವಂ ವಿದ್ವಾಂಶ್ಚಿನುತೇ ನಾಚಿಕೇತಂ ।
ಸ ಮೃತ್ಯುಪಾಶಾನ್ ಪುರತಃ ಪ್ರಣೋದ್ಯ ಶೋಕಾತಿಗೋ ಮೋದತೇ ಸ್ವರ್ಗಲೋಕೇ॥೧೮॥

ಏಷ ತೇSಗ್ನಿರ್ನಚಿಕೇತಃ ಸ್ವರ್ಗ್ಯೋ ಯಮವೃಣೀಥಾ ದ್ವಿತೀಯೇನ ವರೇಣ ।
ಏತಮಗ್ನಿಂ ತವೈವ ಪ್ರವಕ್ಷ್ಯಂತಿ ಜನಾಸಃ ತೃತೀಯಂ ವರಂ ನಚಿಕೇತೋ ವೃಣೀಷ್ವ॥೧೯॥

[ಉಪನಿಷತ್ತಿನಲ್ಲಿರುವ ಈ ಮಂತ್ರಗಳು ಅರ್ಥ ಅನ್ವಯ ಪ್ರಕಾರ ಸ್ವಲ್ಪ ಹಿಂದೆ ಮುಂದೆ ಇರುವುದರಿಂದ, ಮುಂದೆ ಈ ಶ್ಲೋಕಗಳ ಅರ್ಥವಿವರಣೆ ಮಾಡುವಾಗ, ಹೆಚ್ಚು ಸ್ಪಷ್ಟತೆಗಾಗಿ, ಶ್ಲೋಕಗಳ ಅನುಕ್ರಮವನ್ನು ಬದಲಿಸಿ ವಿವರಿಸಿರುವುದನ್ನು ಓದುಗರು ಗಮನಿಸಬೇಕು]

"ಲೋಕಾದಿಮಗ್ನಿಂ ತಮುವಾಚ ತಸ್ಮೈ ಯಾ ಇಷ್ಟಕಾ ಯಾವತೀರ್ವಾ ಯಥಾ ವಾ(ಶ್ಲೋ-೧೫_೧). ಇಲ್ಲಿ "ಎಲ್ಲಾ ಲೋಕಗಳಿಗೆ ಕಾರಣಕರ್ತ, ಎಲ್ಲಾ ಲೋಕಗಳ ಆದಿ, ಎಲ್ಲಾ ಜೀವಜಾತಕ್ಕೂ ಕಾರಣನಾದ ಅಗ್ನಿನಾರಾಯಣನನ್ನು ನಚಿಕೇತನಿಗೆ ಯಮ ಉಪದೇಶಿಸಿದ" ಎಂದಿದ್ದಾರೆ. ಆದರೆ ಇಲ್ಲಿ ಏನು ಉಪದೇಶಿಸಿದ ಎಂದು ಬಿಡಿಸಿ ಎಲ್ಲಿಯೂ ಹೇಳಿಲ್ಲ. ಅದು ರಹಸ್ಯ. ಅದನ್ನು ನಾವು ಗುರುಮುಖದಲ್ಲಿ ತಿಳಿದುಕೊಳ್ಳಬೇಕು. ಇಲ್ಲಿ "ಯಾ ಇಷ್ಟಕಾ ಯಾವತೀರ್ವಾ ಯಥಾ ವಾ" ಎಂದಿದ್ದಾರೆ. ಅಗ್ನಿಯನ್ನು ಹೊರಗಿನ ಕುಂಡದಲ್ಲಿ ಉಪಾಸನೆ ಮಾಡಬೇಕಿದ್ದರೆ ಅಲ್ಲಿ ಎಷ್ಟು ಇಟ್ಟಿಗೆಗಳನ್ನು(ಇಷ್ಟಕಾ) ಬಳಸಬೇಕು, ಆ ಇಟ್ಟಿಗೆಗಳಲ್ಲಿ ಏನು ಅನುಸಂಧಾನವಿರಬೇಕು, ಇಟ್ಟಿಗೆಗಳನ್ನು ಹೇಗೆ ಜೋಡಿಸಬೇಕು, ಇತ್ಯಾದಿಯನ್ನು ಯಮ ನಚಿಕೇತನಿಗೆ ವಿವರಿಸಿದ. ಇಲ್ಲಿ ಈ ಕುರಿತು ನೇರವಾಗಿ ವಿವರವನ್ನು ಹೇಳಿಲ್ಲವಾದ್ದರಿಂದ ನಾವು ಇದರ ಹಿಂದಿರುವ ಗಣಿತವನ್ನು ಸ್ವಲ್ಪ ವಿಶ್ಲೇಷಿಸಬೇಕಾಗುತ್ತದೆ.

ಅಗ್ನಿಕುಂಡದ ಮಧ್ಯದಲ್ಲಿರುವ ಅಗ್ನಿಯಲ್ಲಿ ಮಾತ್ರ ನಾರಾಯಣನಿರುವುದಲ್ಲ, ಆ ಕುಂಡವನ್ನು ರಚನೆ ಮಾಡಲು ಇಟ್ಟ ಇಟ್ಟಿಗೆಯಲ್ಲೂ ಭಗವಂತನ ರೂಪ ಅಡಗಿದೆ. ಇಲ್ಲಿ ಅಗ್ನಿಕುಂಡ ಎನ್ನುವುದು ನಮ್ಮ ಪಿಂಡಾಂಡದ ದ್ಯೋತಕ. ನಮಗೆ ತಿಳಿದಂತೆ ನಮ್ಮ ಹೃದಯದಲ್ಲಿ ಮಾತ್ರ ಭಗವಂತನಿರುವುದಲ್ಲ, ನಮ್ಮ ಇಡೀ ದೇಹದಲ್ಲಿ ವಿವಿಧ ರೂಪದಲ್ಲಿ ಭಗವಂತನಿದ್ದಾನೆ. ಆದ್ದರಿಂದ ಅಗ್ನಿಹೋತ್ರ ಮಾಡುವಾಗ ಅಗ್ನಿಕುಂಡದ ಒಂದೊಂದು ಇಟ್ಟಿಗೆಯಲ್ಲೂ ಭಗವಂತನಿದ್ದಾನೆ ಎನ್ನುವ ಅನುಸಂಧಾನ ಬಹಳ ಮುಖ್ಯ. ಮೇಲಿನ ಶ್ಲೋಕದಲ್ಲಿ ಬಳಸಲಾದ 'ಇಷ್ಟಕಾ' ಎನ್ನುವ ಪದ ಬಹಳ ರೋಚಕವಾದ ಪದ. ಮೇಲ್ನೋಟಕ್ಕೆ ಇಟ್ಟಿಗೆ ಎನ್ನುವ ಅರ್ಥ ಕೊಡುವ ಈ ಪದಕ್ಕೆ ವಿಶೇಷ ಅರ್ಥವಿದೆ. ನಮಗೆ ಅತ್ಯಂತ ಪ್ರಿಯವಾದ, ಆನಂದಮಯವಾದ ವಸ್ತು-ಇಷ್ಟಕಾ. ಆದ್ದರಿಂದ ಇಲ್ಲಿ 'ಇಷ್ಟಕಾ' ಎನ್ನುವ ಪದ ಬರಿಯ ಇಟ್ಟಿಗೆಯನ್ನು ಹೇಳುವುದಲ್ಲ, ಆ ಇಟ್ಟಿಗೆಯೊಳಗಿನ ಆನಂದಸ್ವರೂಪ ಭಗವಂತನನ್ನು ಹೇಳುತ್ತದೆ.

ಇನ್ನು 'ಯಾವತೀಃ' ಅಂದರೆ ಎಷ್ಟು ಇಟ್ಟಿಗೆಯಿಂದ ಕುಂಡ ಮಾಡಬೇಕು ಮತ್ತು ಯಾವ ರೀತಿ(ಯಥಾ ವಾ) ಉಪಾಸನೆ ಮಾಡಬೇಕು ಎನ್ನುವ ಪ್ರಶ್ನೆ. ಶಾಸ್ತ್ರೀಯವಾಗಿ ಅಗ್ನಿಕುಂಡವನ್ನು ೩೬೦ ಇಟ್ಟಿಗೆಗಳಿಂದ ಮಾಡಬೇಕು. ೩೬೦ ಅನ್ನುವುದು ಒಂದು ವಿಶಿಷ್ಟವಾದ ಸಂಖ್ಯೆ. ಇದರ ಹಿಂದೆ ಮೂರು ವಿಧದ ಉಪಾಸನೆ ಇದೆ. ಅವುಗಳೆಂದರೆ: ಭಗವಂತನನ್ನು ಶರೀರದಲ್ಲಿ ಉಪಾಸನೆ, ಅಗ್ನಿಕುಂಡದಲ್ಲಿ ಉಪಾಸನೆ ಮತ್ತು ಕಾಲದಲ್ಲಿ ಉಪಾಸನೆ. ಶಾಸ್ತ್ರದ ಪ್ರಕಾರ ನಮ್ಮ ದೇಹದಲ್ಲಿ ೩೬೦ ಅಸ್ಥಿಗಳಿವೆ, ಅಷ್ಟೇ ಅಸ್ಥಿಮಜ್ಜೆ[marrows] ಮತ್ತು ಅಸ್ಥಿಸಂಧಿಗಳಿವೆ. [ಆಧುನಿಕ ವೈದ್ಯ ವಿಜ್ಞಾನ ಸುಮಾರು ೩೦೦ ಅಸ್ಥಿಗಳನ್ನು ಗುರುತಿಸುತ್ತದೆ. ಆದರೆ ಪ್ರಾಚೀನರು ಅಸ್ಥಿಸಂಧಿಗಳನ್ನೆಲ್ಲಾ ಪರಿಗಣಿಸಿ ೩೬೦ ಎನ್ನುತ್ತಾರೆ]. ಇದರಲ್ಲಿ ಭಗವಂತ ೩೬೦ ರೂಪದಲ್ಲಿ ನೆಲೆಸಿ ನಡೆಸುತ್ತಿದ್ದಾನೆ. ಇದನ್ನೇ ನಾವು ಹೊರಪ್ರಪಂಚದಲ್ಲಿ ಯಜ್ಞಕುಂಡದ ೩೬೦ ಇಟ್ಟಿಗೆಯಲ್ಲಿ ಕಾಣಬೇಕು.

ಇನ್ನು ಕಾಲದಲ್ಲಿ ಭಗವಂತನ ಉಪಾಸನೆ. ಬೇರೆಬೇರೆ ಮಾನದ ಪ್ರಕಾರ ವರ್ಷದಲ್ಲಿನ ದಿನಗಳ ಸಂಖ್ಯೆ ಬೇರೆಬೇರೆ. ಸೌರಮಾನದ ಪ್ರಕಾರ ವರ್ಷಕ್ಕೆ ೩೬೫ ಮತ್ತು ೮/೩೧ ದಿನಗಳು; ಚಾಂದ್ರಮಾನದ ಪ್ರಕಾರ ೩೬೫ ದಿನಗಳು; ನಕ್ಷತ್ರಮಾನದ ಪ್ರಕಾರ ೩೨೪ ದಿನಗಳು; ಬೃಹಸ್ಪತಿಮಾನದ ಪ್ರಕಾರ ೩೯೦ ದಿನಗಳು. ಆದರೆ ಸಾರ್ವತ್ರಿಕವಾಗಿ ಒಂದು ವತ್ಸರ ಎಂದರೆ ೩೬೦ ದಿನಗಳು. ಏಕೆಂದರೆ ೩೬೦ ಡಿಗ್ರಿ(ಕೋನ) ಅಂದರೆ ಒಂದು ಪೂರ್ಣವೃತ್ತ. ಹೀಗೆ ಅಗ್ನಿಕುಂಡದ ೩೬೦ ಇಟ್ಟಿಗೆಗಳಲ್ಲಿ, ದೇಹದ ೩೬೦ ಅಸ್ಥಿಗಳಲ್ಲಿ, ವರ್ಷದ ೩೬೦ ದಿನಗಳಲ್ಲಿ-೧೦೮೦[೩೬೦+೩೬೦+೩೬೦] ರೂಪಗಳಲ್ಲಿ ಭಗವಂತ ನೆಲೆಸಿದ್ದಾನೆ. ನಾವು ವಿಷ್ಣುಸಹಸ್ರನಾಮದಲ್ಲಿನ 'ಚ', 'ಏವ' ಇತ್ಯಾದಿ ಏಕಾಕ್ಷರ ನಾಮಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ನೋಡಿದರೆ ಅಲ್ಲಿ ೧೦೮೦ ನಾಮಗಳನ್ನು ಕಾಣಬಹುದು. ಇದು ಭಗವಂತನ ಈ ೧೦೮೦ ರೂಪಗಳನ್ನು ಹೇಳುವ ವಿಶಿಷ್ಠನಾಮಗಳು. ಇದಕ್ಕಾಗಿ ವಿಷ್ಣುಸಹಸ್ರನಾಮ ಅಷ್ಟು ಶ್ರೇಷ್ಠ. ಅದನ್ನು ಉಚ್ಛರಿಸಿದಾಗ ಅದರ ಕಂಪನದಿಂದ ನಮ್ಮ ದೇಹದ ರೋಗ ನಾಶವಾಗಿ ಆರೋಗ್ಯ ಸುಧಾರಣೆಯಾಗುತ್ತದೆ ಮತ್ತು ಬದುಕಿನಲ್ಲಿ ಸಮಸ್ಯೆ ಇರುವುದಿಲ್ಲ.

ಹೀಗೆ ಇಲ್ಲಿ ಯಮ- 'ಅಗ್ನಿಯಂತರ್ಗತ ಭಗವಂತ-ಕಾಲದಲ್ಲಿ, ಕುಂಡದಲ್ಲಿ ಮತ್ತು ಪಿಂಡ(ದೇಹ)ದಲ್ಲಿ ನೆಲೆಸಿದ್ದಾನೆ ಎಂದು ತಿಳಿದು ಉಪಾಸನೆ ಮಾಡಬೇಕು' ಎನ್ನುವ ವಿಷಯವನ್ನು ನಚಿಕೇತನಿಗೆ ವಿವರಿಸಿದ. ಇದು ವಿಶ್ವದಲ್ಲಿರುವ ಭಗವಂತನನ್ನು ೩೬೦ ಎನ್ನುವ ಸಂಖ್ಯೆಯಲ್ಲಿ ಅಳವಡಿಸಿ ಮಾಡತಕ್ಕಂತಹ ಒಂದು ಅತ್ಯದ್ಭುತವಾದ ಉಪಾಸನೆ.

ಯಮ ಹೇಳುತ್ತಾನೆ: "ತ್ರಿಣಾಚಿಕೇತಸ್ತ್ರಿಭಿರೇತ್ಯ ಸಂಧಿಂ ತ್ರಿಕರ್ಮಕೃತ್ತರತಿ ಜನ್ಮಮೃತ್ಯೂ (ಶ್ಲೋ:೧೭-೧)ಎಂದು. ಇಲ್ಲಿ ಪ್ರತಿಯೊಬ್ಬನೂ ತ್ರಿಣಾಚಿಕೇತನಾಗಬೇಕು ಎಂದಿದ್ದಾನೆ ಯಮ. ನಚಿಕೇತನ ಮುಖೇನ ಭೂಮಿಗೆ ಪರಿಚಯಿಸಲ್ಪಟ್ಟ ಅಗ್ನಿನಾರಾಯಣನನ್ನು ಮೂರು ಕಡೆ [ಅಗ್ನಿಕುಂಡದಲ್ಲಿ-ಅಗ್ನಿರೂಪ, ಹೃದಯಕುಂಡದಲ್ಲಿ-ವಾಯುರೂಪ, ಕಾಲಕುಂಡದಲ್ಲಿ- ಆದಿತ್ಯರೂಪ] ಉಪಾಸನೆ ಮಾಡುವವರು, ಮೂರರ ಜೊತೆಗೆ ಸಂಧಾನ (ತ್ರಿರೇತ್ಯ ಸಂಧಿಃ) ಮಾಡಿಕೊಂಡು, ಮೂರು ಕರ್ಮಗಳನ್ನು ಮಾಡಿದರೆ(ತ್ರಿಕರ್ಮಕೃತ್), ಆಗ ಜನ್ಮ-ಮೃತ್ಯುವನ್ನು ದಾಟುತ್ತಾರೆ- ಎನ್ನುವುದು ಯಮನ ವಿವರಣೆ. ಇಲ್ಲಿ 'ತ್ರಿರೇತ್ಯ ಸಂಧಿಃ' ಎನ್ನುವಲ್ಲಿ 'ತ್ರಿ' ಎಂದರೆ ಮೂರು ವೇದಗಳು.[ಗದ್ಯರೂಪ, ಪದ್ಯರೂಪ ಮತ್ತು ಗಾನರೂಪದ ಮೂರು ವೇದಗಳು]. ವೇದ ಶಾಖೆಗಳು/ಸಂಹಿತೆಗಳು[ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ-ಒಟ್ಟು-೪] ಮತ್ತು ವೇದದ ಉಪಶಾಖೆಗಳು[ಋಗ್ವೇದದಲ್ಲಿ-೨೪, ಯಜುರ್ವೇದದಲ್ಲಿ-೧೦೧, ಸಾಮವೇದದಲ್ಲಿ-೧೦೦೦, ಅಥರ್ವವೇದದಲ್ಲಿ-೧೨. ಒಟ್ಟು-೧೧೩೭] ಅನೇಕ. ಆದರೆ ಅವುಗಳಲ್ಲಿ ಒಂದಕ್ಕೊಂದು ವಿರೋಧವಿಲ್ಲ. ಪ್ರತಿಯೊಂದು ವೇದವೂ ಭಗವಂತನನ್ನು, ಆತನ ಮಹಿಮೆಯನ್ನು ಹೇಳುತ್ತದೆ. ಅದರಲ್ಲಿರುವ ವಿಷಯವನ್ನು ಒಂದಕ್ಕೊಂದು ಸಮನ್ವಯ ಮಾಡಿ ತಿಳಿದುಕೊಳ್ಳುವುದು 'ತ್ರಿರೇತ್ಯ ಸಂಧಿಃ'. ಹೀಗೆ ವೇದದ ಮೂಲಾರ್ಥವನ್ನು ತಿಳಿದುಕೊಂಡು, ದಿನವೂ ಯಜ್ಞ, ದಾನ, ತಪಃ ಎನ್ನುವ ಮೂರು ಕರ್ಮವನ್ನು ಮಾಡಿಕೊಂಡು ಅಗ್ನಿಕಾರ್ಯ ಮಾಡಿದರೆ ಭಗವಂತ ಒಲಿಯುತ್ತಾನೆ.

ಇಲ್ಲಿ ನಮಗೆ ಒಂದು ಪ್ರಶ್ನೆ ಮೂಡಬಹುದು. ಅದೇನೆಂದರೆ-ಒಬ್ಬ ಸಾಮಾನ್ಯ ಮನುಷ್ಯನಿಗೆ ದಿನವೂ ಯಜ್ಞ, ದಾನ, ತಪಸ್ಸನ್ನು ಮಾಡಲು ಸಾಧ್ಯವೋ ಎನ್ನುವ ಪ್ರಶ್ನೆ. ಈ ಪ್ರಶ್ನೆಗೆ ಶ್ರೀಕೃಷ್ಣ ಗೀತೆಯಲ್ಲಿ ಬಹಳ ಸುಂದರವಾದ ವಿವರಣೆ ಕೊಟ್ಟಿದ್ದಾನೆ(ಅ-೧೭). ನಾವು ಮಾಡುವ ಪ್ರತಿಯೊಂದು ಕೆಲಸವೂ ಒಂದು ದೇವರಪೂಜೆ, ಅದು ಭಗವಂತನಿಗೆ ಅರ್ಪಿತವಾಗಿ ಅವನು ಪ್ರೀತನಾಗಲಿ ಎಂದು ಮಾಡುವುದು ಯಜ್ಞ. ನಾನು ಆಡಿದ ಮಾತೆಲ್ಲವೂ ನಿನ್ನ ಸ್ತೋತ್ರವಾಗಲಿ, ನಾನು ನಡೆದ ನಡೆಯೆಲ್ಲವೂ ನಿನ್ನ ಪ್ರದಕ್ಷಿಣೆಯಾಗಲಿ, ನಾನು ಮಲಗಿದ್ದೆಲ್ಲವೂ ನಿನಗೆ ನಮಸ್ಕಾರವಾಗಲಿ, ನಾನು ಮಾಡುವ ಪ್ರತಿಯೊಂದು ಕರ್ಮವೂ ನಿನಗೆ ಪೂಜೆಯಾಗಲಿ ಎನ್ನುವ ಅನುಸಂಧಾನದಿಂದ ಬದುಕಿದಾಗ ಅದು

ಯಜ್ಞವಾಗುತ್ತದೆ. ಇನ್ನು ಎರಡನೇ ಕರ್ಮ-ದಾನ. ನಮ್ಮಲ್ಲಿಲ್ಲದ್ದನ್ನು ನಾವು ಇನ್ನೊಬ್ಬರಿಗೆ ಕೊಡಲು ಸಾಧ್ಯವಿಲ್ಲ. ಆದರೆ ಯಾರಿಗೆ ಯಾವಾಗ ಯಾವುದರ ಅಗತ್ಯವಿದೆಯೋ, ಅದು ನಮ್ಮಲ್ಲಿದ್ದರೆ, ಅದನ್ನು ನಿಸ್ವಾರ್ಥವಾಗಿ, ಪ್ರಚಾರದ ಬಯಕೆ ಇಲ್ಲದೇ ಕೊಡುವುದು ದಾನ. ಮೂರನೆಯ ಕರ್ಮ-ತಪಸ್ಸು. ದೊಡ್ಡವರಿಗೆ ಗೌರವಕೊಡುವುದು, ಸ್ವಚ್ಛವಾಗಿರುವುದು, ಪ್ರಾಮಾಣಿಕವಾದ ನೇರ ನಡೆ, ಸ್ವಚ್ಛಂದಕಾಮಕ್ಕೆ ಕಡಿವಾಣ(ಬ್ರಹ್ಮಚರ್ಯ), ಇನ್ನೊಬ್ಬರಿಗೆ ತೊಂದರೆಯಾಗದಂತೆ ಬದುಕುವುದು, ಇತ್ಯಾದಿ- ನಾವು ದೈನಂದಿನ ಜೀವನದಲ್ಲಿ ಆಚರಿಸಬಹುದಾದ ತಪಸ್ಸು.[ಈ ಮೂರು ಕರ್ಮದ ಕುರಿತ ಹೆಚ್ಚಿನ ವಿವರಣೆಯನ್ನು ಗೀತೆಯ ಹದಿನೇಳನೇ ಅಧ್ಯಾಯದಲ್ಲಿ ವಿವರಿಸಲಾಗಿದೆ. **Refer: http://bhagavadgitakannada.blogspot.in]**.

ಮುಂದುವರಿದು ಯಮ ಹೇಳುತ್ತಾನೆ: "ತ್ರಿಣಾಚಿಕೇತಸ್ತ್ರಯಮೇತದ್ವಿದಿತ್ವಾ ಯ ಏವಂ ವಿದ್ವಾಂಶ್ಚಿನುತೇ ನಾಚಿಕೇತಂ" ಎಂದು(ಶ್ಲೋ-೧೮-೧). ಅಗ್ನಿಕುಂಡ, ಕಾಲಕುಂಡ, ದೇಹಕುಂಡ ಎನ್ನುವ ಮೂರು ವಿಧವನ್ನು ತಿಳಿದು, ಮೂರು ಬಗೆಯ ನಾಚಿಕೇತಾಗ್ನಿಯ ಉಪಾಸನೆ ಮಾಡುವವನು, ಹಿಂದೆ ಹೇಳಿದ ರೀತಿಯಲ್ಲಿ ಮೂರು ವೇದಗಳನ್ನು ಸಮನ್ವಯಮಾಡಿ ಅರ್ಥ ಮಾಡಿಕೊಂಡು, 'ತ್ರಿಕರ್ಮಕೃತ್' ಆಗಿ, ಅಗ್ನಿಯಲ್ಲಿ ಸ್ಥಿತನಾದ ಅಗ್ನಿನಾರಾಯಣನನ್ನು ಉಪಾಸನೆ ಮಾಡಿದರೆ-ಅಂತವನು ಮೊದಲು ಸ್ವರ್ಗವನ್ನು ಸೇರಿ, ಅಲ್ಲಿ ಕೆಲಕಾಲ ಇದ್ದು[ಶಾಸ್ತ್ರಕಾರರ ಪ್ರಕಾರ ಕೆಲಕಾಲ ಅಂದರೆ ಒಂದು ಮನ್ವಂತರದಷ್ಟು ದೀರ್ಘಕಾಲ], ಸ್ವರ್ಗಸುಖವನ್ನು ಅನುಭವಿಸಿ, ಆನಂತರ ಅಗ್ನಿಸ್ಥನಾದ ಭಗವಂತನನ್ನು ಉಪಾಸನೆ ಮಾಡಿದ ಫಲವಾಗಿ, ಹುಟ್ಟು-ಸಾವುಗಳ ಎಲ್ಲಾ ಬಂಧವನ್ನು ಕಳಚಿಕೊಂಡು, ನಿತ್ಯಾನಂದ ರೂಪವಾದ, ಸ್ವರೂಪಸುಖವನ್ನು ಕೊಡುವ ಮೋಕ್ಷವನ್ನು ಪಡೆಯುತ್ತಾನೆ.

"ಬ್ರಹ್ಮಜಜ್ಞಂ ದೇವಮೀಡ್ಯಂ ವಿದಿತ್ವಾ ನಿಚಾಯ್ಯೇಮಾಂ ಶಾಂತಿಮತ್ಯಂತಮೇತಿ"(ಶ್ಲೋ-೧೭-೨). ಇಲ್ಲಿ ಯಮ ಭಗವಂತನನ್ನು 'ಬ್ರಹ್ಮಜಜ್ಞ' ಎಂದು ಸಂಬೋಧಿಸಿದ್ದಾನೆ. ಶಬ್ದಗಳಲ್ಲಿ ಬೃಹತ್ ಆದದ್ದು ವೇದ. ಆದ್ದರಿಂದ ಅದು 'ಬ್ರಹ್ಮ'. ವೇದಗಳಿಂದ ಅಭಿವ್ಯಕ್ತನಾಗುವ ಭಗವಂತ 'ಬ್ರಹ್ಮಜ'. ಇಂಥ ಭಗವಂತ ವೇದವೇದ್ಯ. ಎಲ್ಲವನ್ನು ಬಲ್ಲವನು ಆ ಭಗವಂತನೊಬ್ಬನೇ. ಆದ್ದರಿಂದ ವೇದವೇದ್ಯನೂ ಸರ್ವಜ್ಞನೂ ಆದ ಆ ಭಗವಂತ 'ಬ್ರಹ್ಮಜಜ್ಞ'. ಆತನನ್ನು ಎಲ್ಲರೂ ಜಾತಿ ಮತ ಭೇದವಿಲ್ಲದೆ 'ದೇವರು' ಎಂದು ಕರೆಯುತ್ತಾರೆ. ಪ್ರಪಂಚದಲ್ಲಿ ಒಬ್ಬೊಬ್ಬರಿಗೆ ಒಂದೊಂದು ದೇವರಿಲ್ಲ. ಎಲ್ಲರಿಗೂ ದೇವರು ಒಬ್ಬನೇ. ಇದನ್ನು 'ದೇವರು' ಎನ್ನುವ ಪದವೇ ವಿವರಿಸುತ್ತದೆ. 'ದೇವರು' ಎನ್ನುವ ಪದ 'ದಿವು' ಎನ್ನುವ ಧಾತುವಿನಿಂದ ಬಂದಿರುವುದು. ಪ್ರಾಚೀನ ಧಾತು ಪಾಠದಲ್ಲಿ ಈ ಧಾತುವಿಗೆ ಏಳು ಅರ್ಥವನ್ನು ನೋಡಬಹುದು. ಅವುಗಳೆಂದರೆ: ೧) ಧ್ಯುತಿ ೨) ವಿಜಿಗೀಶ ೩) ಕಾಂತಿ ೪) ಸ್ತುತಿ ೫) ವ್ಯವಹಾರ ೬) ಕ್ರೀಡಾ ೭) ಗತಿಶು.

೧) ಧ್ಯುತಿ: ಧ್ಯುತಿ ಅಂದರೆ ಬೆಳಕಿನ ಸ್ವರೂಪ. ಬೆಳಕಿನ ಪುಂಜವಾದ ಸೂರ್ಯಚಂದ್ರಾದಿಗಳಿಗೆ ಬೆಳಕನ್ನೀಯುವ ಭಗವಂತ ನಮ್ಮೊಳಗೆ ಜ್ಞಾನದ ಬೆಳಕನ್ನು ತುಂಬುತ್ತಾನೆ.

೨) ವಿಜಿಗೀಶ: ಭಗವಂತ ಎಲ್ಲರಿಗಿಂತ ಎತ್ತರದಲ್ಲಿರುವವನು ಹಾಗೂ ಗೆಲುವಿನ ಸ್ವರೂಪ.

೩) ಕಾಂತಿ: ಕೇವಲ ಇಚ್ಛೆಯಿಂದ ಸೃಷ್ಟಿ ಮಾಡಬಲ್ಲವ. ನಮಗೆ ಇಚ್ಛೆಯನ್ನು ಕೊಟ್ಟವ ಹಾಗೂ ಅದನ್ನು ಅವರವರ ಯೋಗ್ಯತೆಗೆ ತಕ್ಕಂತೆ ಪೂರೈಸುವವ.

೪) ಸ್ತುತಿ: ಎಲ್ಲರಿಂದ ಸ್ತುತನಾದವನು; ಎಲ್ಲರೂ ಯಾರನ್ನು ಸ್ತುತಿಸುತ್ತಾರೋ ಅವನು ಸರ್ವಶಬ್ದ ವಾಚ್ಯನಾದ ಭಗವಂತ.

೫) ವ್ಯವಹಾರ: ಜಗತ್ತಿನ ಸಮಸ್ತ ವ್ಯವಹಾರವನ್ನು ನಿರ್ವಹಿಸುವವ.

೬) ಕ್ರೀಡಾ: ಲೀಲಾ ಮಾತ್ರದಿಂದ ಸೃಷ್ಟಿ-ಸ್ಥಿತಿ-ಸಂಹಾರವನ್ನು ನಿಭಾಯಿಸುವವನು ಭಗವಂತ. ಇದು ಆತನಿಗೊಂದು ಕ್ರೀಡೆ.

೭) ಗತಿಶು: ಚಲನೆ ಮತ್ತು ಜ್ಞಾನ ಕೊಟ್ಟವ. ಯಾರು ಎಲ್ಲಾ ಕಡೆ ಗತನಾಗಿದ್ದಾನೋ; ಎಲ್ಲವನ್ನೂ ತಿಳಿದಿದ್ದಾನೋ; ಎಲ್ಲರೊಳಗೆ ಬಿಂಬ ರೂಪದಲ್ಲಿ ನೆಲೆಸಿದ್ದಾನೋ ಅವನು 'ದೇವ'.

ಹೀಗೆ ಇಚ್ಛಾಮಾತ್ರದಿಂದ ಸೃಷ್ಟಿ ಮಾಡಬಲ್ಲ, ಸತ್ಯಸಂಕಲ್ಪ, ಸರ್ವಗತ, ಸರ್ವಜ್ಞ, ಬೆಳಕುಗಳ ಬೆಳಕಾಗಿ ಜಗತ್ತಿನ ಸರ್ವ ವ್ಯವಹಾರವನ್ನು ನಿರ್ವಹಿಸುವ, ಸರ್ವಶ್ರೇಷ್ಠ ಭಗವಂತ 'ದೇವ'. ಈ ರೀತಿ ಅಗ್ನಿಯಲ್ಲಿರುವ ಭಗವಂತನನ್ನು 'ಬ್ರಹ್ಮಜಜ್ಞಂ ದೇವಮೀಡ್ಯ' ಎಂದು ಉಪಾಸನೆ ಮಾಡಿದರೆ- ಸಾವಿಲ್ಲದ, ಸುಖದ ಪರಾಕಾಷ್ಠೆಯಾದ ಮೋಕ್ಷವನ್ನು ಪಡೆಯಬಹುದು ಎಂದು ವಿವರಿಸಿದ ಯಮ ಹೇಳುತ್ತಾನೆ: "ಇದೇ ನಿನ್ನ ಎರಡನೇ ಪ್ರಶ್ನೆಗೆ ಉತ್ತರ. ಎಲ್ಲವನ್ನು ಬಿಡಿಸಿ ಹೇಳಿದ್ದೇನೆ" ಎಂದು [ "ಏಷ ತೇSಗ್ನಿರ್ನಚಿಕೇತಃ ಸ್ವರ್ಗ್ಯೋ ಯಮವೃಣೀಥಾ ದ್ವಿತೀಯೇನ ವರೇಣ (ಶ್ಲೋ-೧೯-೧)] ಇಷ್ಟು ಹೇಳಿ ಯಮ ನಚಿಕೇತನನ್ನು ಉದ್ದೇಶಿಸಿ ಕೇಳುತ್ತಾನೆ- ನಾನು ಹೇಳಿದ ವಿಚಾರ ನಿನಗೆ ಸರಿಯಾಗಿ ತಿಳಿಯಿತೋ ಎಂದು. ಇದಕ್ಕೆ ಉತ್ತರಿಸಿದ ನಚಿಕೇತ ಯಮನಿಂದ ಪಡೆದ ಜ್ಞಾನದ ಉಪದೇಶವನ್ನು ಪೂರ್ಣವಾಗಿ ಅನುವಾದಿಸಿದ. ಈ ಸಂದರ್ಭವನ್ನು ಇಲ್ಲಿ ವಿವರಿಸುತ್ತಾ ಹೇಳುತ್ತಾರೆ: "ಸ ಚಾಪಿ ತತ್ಪ್ರತ್ಯವದದ್ಯಥೋಕ್ತಂ ಅಥಾಸ್ಯ ಮೃತ್ಯುಃ ಪುನರೇವಾಹ ತುಷ್ಟಃ"(ಶ್ಲೋ-೧೫-೨) ಎಂದು. ತಾನು ಹೇಳಿದ ಎಲ್ಲಾ ವಿಚಾರವನ್ನು ಚಾಚೂ ತಪ್ಪದೆ ನಚಿಕೇತ ಗ್ರಹಿಸಿದ್ದನ್ನು ಕಂಡು ಯಮನಿಗೆ ಮಹದಾನಂದವಾಗುತ್ತದೆ. ಈ ಆನಂದದಲ್ಲಿ ಆತ ತಾನು ಮೊದಲು ಪ್ರತಿಜ್ಞೆ ಮಾಡಿದ್ದ ಮೂರು ವರವಲ್ಲದೆ ಇನ್ನೂ ಒಂದು ವರವನ್ನು ಕೊಡಲು ಮುಂದಾಗುತ್ತಾನೆ. ಇದನ್ನು ವರ್ಣಿಸುತ್ತಾ ಇಲ್ಲಿ ಹೇಳುತ್ತಾರೆ: "ತಮಬ್ರವೀತ್ ಪ್ರೀಯಮಾಣೋ ಮಹಾತ್ಮಾ ವರಂ ತವೇಹಾದ್ಯ ದದಾಮಿ ಭೂಯಃ"(ಶ್ಲೋ-೧೬-೧) ಎಂದು. ಸೂರ್ಯ-ಚಂದ್ರರಿಗೆ ಸಮಾನಸ್ಕಂದನಾದ, ದಿವ್ಯಜ್ಞಾನದ ಬೆಳಕನ್ನು ತುಂಬಿಕೊಂಡಿರುವ, ಮಹಾತ್ಮನಾದ ಯಮ ನಚಿಕೇತನ ಗ್ರಹಣ ಶಕ್ತಿಯನ್ನು ಕಂಡು ಸಂತೋಷಪಟ್ಟು ಇನ್ನೊಂದು ವರವನ್ನು ಅದೇ ಕ್ಷಣದಲ್ಲಿ ತಾನೇ ಉಡುಗೊರೆಯಾಗಿ ಕೊಡುತ್ತಾ ಹೇಳುತ್ತಾನೆ: "ಈ ಅಗ್ನಿ ವಿದ್ಯೆಗೆ ಭೂಮಿಯ ಮೇಲೆ ನಾಚಿಕೇತಾಗ್ನಿ ಎಂದು ಹೆಸರು ಬರಲಿ; ನಿನ್ನ ಹೆಸರಿನಿಂದಲೇ ಈ ಅಗ್ನಿ ಪ್ರಸಿದ್ಧಿಯಾಗಲಿ" ಎಂದು. ಹೀಗೆ ಹೇಳಿ ಯಮ ತನ್ನ ಕೊರಳಿನಿಂದ ಒಂದು ಬಂಗಾರದ ಹಾರವನ್ನು ನಚಿಕೇತನಿಗೆ ಕೊಡಲು ಮುಂದಾಗುತ್ತಾನೆ. [ತವೈವ ನಾಮ್ನಾ ಭವಿತಾSಯಮಗ್ನಿಃ ಸೃಂಕಾಂ ಚೇಮಾಮನೇಕರೂಪಾಂ ಗೃಹಾಣ" (ಶ್ಲೋ-೧೬-೨)]. ಇಲ್ಲಿ ಬಂಗಾರದ ಹಾರವನ್ನು 'ಸೃಂಕಾಂ' ಎಂದು ಕರೆದಿದ್ದಾರೆ. ಈ ಪದಕ್ಕೆ ಸಂಸ್ಕೃತದಲ್ಲಿ 'ಸಂಕೋಲೆ' ಎನ್ನುವ ಅರ್ಥವಿದೆ. ಇದು ಯಮ ನಚಿಕೇತನನ್ನು ಪರೀಕ್ಷಿಸುವ ರೀತಿ. ತನ್ನಿಂದ ಪ್ರಶಂಸೆ ಜೊತೆಗೆ ಚಿನ್ನದ ಹಾರ ದೊರೆತಾಗ, ನಚಿಕೇತ ಚಿನ್ನದ ಆಸೆಗೆ ಬಲಿಬೀಳುತ್ತಾನೋ ಎಂದು ಯಮ ನಚಿಕೇತನನ್ನು ಪರೀಕ್ಷಿಸುತ್ತಿದ್ದಾನೆ. ಇದಕ್ಕೆ ನಚಿಕೇತ ಹೇಳಿದನಂತೆ: "ಭೂಮಿ ಮೇಲೆ ಆರಾಧನೆ ಮಾಡತಕ್ಕ ಅಗ್ನಿವಿದ್ಯೆಗೆ ನನ್ನ ಹೆಸರು ಬಂತೆಂದರೆ ಅದು ನನ್ನ ಭಾಗ್ಯ. ಆದರೆ ಬಂಗಾರದ ಸರ ನನಗೆ ಬೇಡ. ಅದು ನಿಮ್ಮಲ್ಲೇ ಇರಲಿ" ಎಂದು. [ನಚಿಕೇತನ ಈ ಪ್ರತಿಕ್ರಿಯೆಯನ್ನು ಕಠ ಉಪನಿಷತ್ತಿನಲ್ಲಿ ವಿವರಿಸಿಲ್ಲ]. ಇದು ಜ್ಞಾನಿಗಳಲ್ಲಿರುವ ದೊಡ್ಡ ಗುಣ. ಏಕೆಂದರೆ ಇಲ್ಲಿ ಯಮ ಕೊಟ್ಟಿದ್ದು ಸಂಸಾರ ಬಂಧದ ಸಂಕೋಲೆ ಎನ್ನುವ ಹಾರ. ಆದ್ದರಿಂದ ಅದನ್ನು ಜ್ಞಾನಿಯಾದ ನಚಿಕೇತ ಸ್ವೀಕಾರ ಮಾಡಲಿಲ್ಲ. ಆಗ ಯಮ ನಚಿಕೇತನಲ್ಲಿ ಹೇಳುತ್ತಾನೆ: "ನಿನ್ನ ಹೆಸರು ವೈದಿಕ ಇತಿಹಾಸದಲ್ಲಿ ಅಜರಾಮರವಾಗಿ ಉಳಿಯುವಂತೆ ನಿನಗೆ ವರವನ್ನು ಕೊಟ್ಟಿದ್ದೇನೆ. ಈಗ ನೀನು ನಿನ್ನ ಮೂರನೇ ವರವನ್ನು ಕೇಳು" ಎಂದು [ಏತಮಗ್ನಿಂ ತವೈವ ಪ್ರವಕ್ಷ್ಯಂತಿ ಜನಾಸಃ ತೃತೀಯಂ ವರಂ ನಚಿಕೇತೋ

ವೃಣೀಷ್ವ(ಶ್ಲೋ-೧೯-೨)]. ಮೂರನೇ ವರವಾಗಿ ನಚಿಕೇತ ಏನನ್ನು ಕೇಳಿದ ಎನ್ನುವುದನ್ನು ಮುಂದಿನ ಶ್ಲೋಕಗಳಲ್ಲಿ ನೋಡೋಣ.

ಯೇಯಂ ಪ್ರೇತೇ ವಿಚಿಕಿತ್ಸಾ ಮನುಷ್ಯೇಽಸ್ತೀತ್ಯೇಕೇ ನಾಯಮಸ್ತೀತಿ ಚೈಕೇ ।
ಏತದ್ವಿದ್ಯಾಮನುಶಿಷ್ಟಸ್ತ್ವಯಾಽಹಂವರಾಣಾಮೇಷ ವರಸ್ತೃತೀಯಃ॥೨೦॥

ಮೂರನೇ ವರವಾಗಿ ನಚಿಕೇತ ಇಡೀ ಮನುಕುಲವನ್ನು ಯಾವಾಗಲೂ ಕಾಡುತ್ತಿರುವ ಒಂದು ವಿಶಿಷ್ಠವಾದ ಪ್ರಶ್ನೆಯನ್ನು ಯಮನ ಮುಂದಿಡುತ್ತಾನೆ. ಇಡೀ ವೈದಿಕ ಚಿಂತನೆಯಲ್ಲಿ ಈ ವಿಷಯ ಇನ್ನೆಲ್ಲೂ ಸಿಗುವುದಿಲ್ಲ. ಅಂತಹ ಅಪೂರ್ವ ವಿಷಯದ ಬಗ್ಗೆ ಇಲ್ಲಿ ಯಮನಲ್ಲಿ ಪ್ರಶ್ನೆ ಹಾಕುತ್ತಿದ್ದಾನೆ ನಚಿಕೇತ. ಮೇಲ್ನೋಟದಲ್ಲಿ ಈ ಶ್ಲೋಕವನ್ನು ನಾವು ನೋಡಿದರೆ ನಮಗೆ ನಚಿಕೇತನ ಪ್ರಶ್ನೆ ತುಂಬಾ ಸರಳ ಎನಿಸುತ್ತದೆ. ಆದರೆ ಈ ಪ್ರಶ್ನೆಗೆ ಯಮನ ಉತ್ತರವನ್ನು ನೋಡಿದಾಗ ಇಲ್ಲಿ ಕಾಣುವ ಮೇಲ್ನೋಟದ ಅರ್ಥ ನಚಿಕೇತನ ಮೂಲ ಪ್ರಶ್ನೆ ಅಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಮೇಲ್ನೋಟಕ್ಕೆ ಈ ಶ್ಲೋಕವನ್ನು ನೋಡಿದರೆ: 'ಯೇಯಂ ಪ್ರೇತೇ ವಿಚಿಕಿತ್ಸಾ ಮನುಷ್ಯೇ' – ಸತ್ತ ಮನುಷ್ಯನ ಬಗೆಗೆ ಒಂದು ಸಂದೇಹವಿದೆ; 'ಅಸ್ತೀತ್ಯೇಕೇ ನಾಯಮಸ್ತೀತಿ ಚೈಕೇ'-ಕೆಲವರು ಹೇಳುತ್ತಾರೆ ಸತ್ತ ಮೇಲೆ ಅಸ್ತಿತ್ವ ಇದೆ ಎಂದು, ಇನ್ನು ಕೆಲವರು ಇಲ್ಲಾ ಎಂದು; 'ಏತದ್ವಿದ್ಯಾಮನುಶಿಷ್ಟಸ್ತ್ವಯಾಽಹಂ'- ಇದರ ಕುರಿತು ಶಾಸ್ತ್ರಕ್ಕನುಗುಣವಾಗಿ ನಾನು ನಿನ್ನಿಂದ ಕೇಳಿ ತಿಳಿದುಕೊಳ್ಳಬೇಕು'-ಇದು ಮೇಲ್ನೋಟದ ಅರ್ಥ. ಆದರೆ ಈ ರೀತಿ ಈ ಶ್ಲೋಕವನ್ನು ಬಿಡಿಸುವುದು ತಪ್ಪು. ಏಕೆಂದರೆ ಇಲ್ಲಿ ನಚಿಕೇತ ಸತ್ತು ಯಮಲೋಕದಲ್ಲಿದ್ದಾನೆ. ಆದ್ದರಿಂದ ಸತ್ತ ಮೇಲೆ ಅಸ್ತಿತ್ವವಿದೆಯೋ ಅನ್ನುವ ಪ್ರಶ್ನೆಯೇ ಇಲ್ಲಿ ಅಸಂಗತ. ಯಮಲೋಕ ಪಯಣದಲ್ಲಿ ಜೀವಗಳ ಪ್ರವಾಹವನ್ನು ನಚಿಕೇತ ನೋಡಿದ್ದಾನೆ. ಹಾಗಿರುವಾಗ ದೇಹಕ್ಕಿಂತ ಬೇರೆಯಾದ ಅತ್ಮವಿದೆಯೋ ಎಂದು ಆತ ಪ್ರಶ್ನೆ ಹಾಕುವ ಸಾಧ್ಯತೆಯೇ ಇಲ್ಲ. ಹಾಗಾಗಿ ಇಲ್ಲಿರುವ ನಿಜವಾದ ಮೂಲ ಅರ್ಥ ತಿಳಿಯಲು ನಾವು ಈ ಶ್ಲೋಕವನ್ನು ಬೇರೆ ಆಯಾಮದಲ್ಲಿ ನೋಡಬೇಕು.

'ಯೇಯಂ ಪ್ರೇತೇ ವಿಚಿಕಿತ್ಸಾ ಮನುಷ್ಯೇ' ಎನ್ನುವಲ್ಲಿ 'ಪ್ರೇತ' ಎನ್ನುವ ಪದದ ಅರ್ಥ ಸತ್ತ ಜೀವವಲ್ಲ. ಸಂಸ್ಕೃತದಲ್ಲಿ ಪ್ರೇತ ಎಂದರೆ ಎತ್ತರಕ್ಕೆ ಏರಿದವನು(ಪ್ರಕೃಷ್ಟಂ ಏತಃ-ಪ್ರೇತಃ) ಅಥವಾ ಮೇಲಕ್ಕೆ ಹೋದವನು ಎಂದರ್ಥ. ಮೇಲಕ್ಕೆ ಅಂದರೆ ಪುಣ್ಯಲೋಕಕ್ಕೆ ಹೋಗುವುದು. ಪುಣ್ಯಲೋಕದಲ್ಲಿ ಕೊನೆಯ ಎತ್ತರ-ಮೋಕ್ಷ. ಆದ್ದರಿಂದ ಇಲ್ಲಿ ಪ್ರೇತಃ ಅಂದರೆ ಮೋಕ್ಷವನ್ನು ಪಡೆದಿರತಕ್ಕವ. ಇನ್ನು 'ಮನುಷ್ಯ' ಎಂದರೆ ಕೇವಲ ಮಾನವ ಅಲ್ಲ. ಮನನಶೀಲವಾದ ಜೀವ-ಮನುಷ್ಯ[ಮಾನವರು, ದೇವತಗಳು, ಇತ್ಯಾದಿ] . ವಿಚಿಕಿತ್ಸ- ಎಂದರೆ ವಿಚಾರಣೆ ಅಥವಾ ಚರ್ಚೆ. 'ಅಸ್ತೀತ್ಯೇಕೇ ನಾಯಮಸ್ತೀತಿ ಚೈಕೇ' ಎನ್ನುವಲ್ಲಿ 'ಅಸ್ತಿ' ಅನ್ನುವುದಕ್ಕೆ ವಿಶೇಷ ಅರ್ಥವಿದೆ. ಅಸ್ತಿ ಅಂದರೆ ಎಲ್ಲಕ್ಕಿಂತ ಶ್ರೇಷ್ಠವಾದ ವಸ್ತು- ಅಂದರೆ ಭಗವಂತ. ಈ ಎಲ್ಲಾ ಅರ್ಥದೊಂದಿಗೆ ಈ ಶ್ಲೋಕವನ್ನು ನೋಡಿದರೆ ಆಗ ನಮಗೆ ನಚಿಕೇತನ ಮೂಲ ಪ್ರಶ್ನೆ ಏನು ಎನ್ನುವುದು ಅರ್ಥವಾಗುತ್ತದೆ.

"ಸತ್ತ ಜೀವಕ್ಕೆ ಭಗವಂತನ ನಿಯಮನ ಹೇಗೆ? ಭಗವಂತ ಮೋಕ್ಷದಲ್ಲೂ ನಿಯಾಮಕನಾಗಿರುತ್ತಾನೆ ಎನ್ನುತ್ತಾರೆ ಜ್ಞಾನಿಗಳು, ಇಲ್ಲಾ ಎನ್ನುತ್ತಾರೆ ಇನ್ನು ಕೆಲವರು. ಹೀಗಿರುವಾಗ ಮೋಕ್ಷದಲ್ಲಿ ಭಗವಂತ ಜೀವನನ್ನು ನಿಯಂತ್ರಿಸುವ ಬಗೆ ಎಂತಹದ್ದು? ಮೋಕ್ಷದಲ್ಲಿ ಭಗವಂತನ ಪ್ರೇರಣೆ ಹೇಗಿರುತ್ತದೆ? ಭಗವಂತನ ಧಾರಕಶಕ್ತಿಯನ್ನು ಚೆನ್ನಾಗಿ ತಿಳಿದ, ಧರ್ಮನಿಯಾಮಕನಾದ ನೀನು, ಇದನ್ನು ಶಾಸ್ತ್ರಕ್ಕೆ ಅನುಗುಣವಾಗಿ ನನಗೆ ಅನುಭವವಾಗುವಂತೆ ಅನುಭವಿಸಿ

ಹೇಳು. ಇದು ನಾನು ಕೇಳಬೇಕಾದ ಮೂರನೆಯ ಹಾಗೂ ಕೊನೇಯ ವರ." ಎಂದು ನಚಿಕೇತ ತನ್ನ ಪ್ರಶ್ನೆಯನ್ನು ಯಮನ ಮುಂದಿಡುತ್ತಾನೆ.

ಅಧ್ಯಾತ್ಮ ವಿದ್ಯೆಯಲ್ಲಿ ಮನುಷ್ಯ ತಿಳಿಯಬೇಕಾದ ಅತ್ಯಂತ ಶ್ರೇಷ್ಠ ವಿಚಾರವಿದು. ಸತ್ತ ನಂತರ ಜೀವ ಮತ್ತು ಭಗವಂತನ ಸಂಬಂಧ, ಮುಕ್ತಿಯಲ್ಲಿ ಭಗವಂತ ಜೀವನನ್ನು ನಿಯಮಿಸುವ ನಡೆ –ಎಲ್ಲವೂ ಬಹಳ ನಿಗೂಢ. ಮೋಕ್ಷವನ್ನು ಕಾಣದವ ಇದನ್ನು ವಿವರಿಸಲಾರ, ಮೋಕ್ಷವನ್ನು ಸೇರಿದವ ಮರಳಿ ಬಂದು ಹೇಳಲಾರ. ಹೀಗಿರುವಾಗ ಈ ವಿಚಾರ ಬಹಳ ರಹಸ್ಯ. ಇಂತಹ ನಿಗೂಢವಾದ ವಿಷಯವನ್ನು ಯೋಗ್ಯರಲ್ಲದವರಿಗೆ ಯಾರೂ ಹೇಳುವುದಿಲ್ಲ. ಆದ್ದರಿಂದ ಇಲ್ಲಿ ಯಮ ನೇರವಾಗಿ ನಚಿಕೇತನ ಪ್ರಶ್ನೆಗೆ ಉತ್ತರಿಸದೆ, ಆತನ ಯೋಗ್ಯತೆಯನ್ನು ಮತ್ತೆ ವಿವಿಧ ರೀತಿಯಿಂದ ಪರೀಕ್ಷಿಸುವುದನ್ನು ಮುಂದಿನ ಶ್ಲೋಕಗಳಲ್ಲಿ ಕಾಣಬಹುದು.

ದೇವೈರತ್ರಾಪಿ ವಿಚಿಕಿತ್ಸಿತಂ ಪುರಾ ನ ಹಿ ಸುವಿಜ್ಞೇಯಮಣುರೇಷ ಧರ್ಮಃ ।
ಅನ್ಯಂ ವರಂ ನಚಿಕೇತೋ ವೃಣೀಷ್ವ ಮಾ ಮೋಪರೋತ್ಸೀರತಿ ಮಾ ಸೃಜೈನಂ ॥೨೧॥

ಯಮ ಹೇಳುತ್ತಾನೆ: "ನೀನು ಕೇಳಿದ ವಿಚಾರ ದೇವತೆಗಳಿಗೂ ಪೂರ್ಣವಾಗಿ ತಿಳಿದಿಲ್ಲ. ಈ ಬಗ್ಗೆ ದೇವಲೋಕದಲ್ಲಿ ನಿರಂತರ ಚರ್ಚೆ ನಡೆದಿದೆ" ಎಂದು. ಇಲ್ಲಿ 'ನ ಹಿ ಸುವಿಜ್ಞೇಯಮಣುರೇಷ ಧರ್ಮಃ' ಎನ್ನುವಲ್ಲಿ 'ಧರ್ಮಃ' ಅನ್ನುವುದನ್ನು ದೇವರು ಎನ್ನುವ ಅರ್ಥದಲ್ಲಿ ಬಳಸಲಾಗಿದೆ. 'ಧಾರಯತಿ ಇತಿ ಧರ್ಮಃ'. ಯಾವುದು ನಮ್ಮನ್ನು ಧಾರಣೆ ಮಾಡುತ್ತದೋ ಅದು ಧರ್ಮ. ನಮ್ಮ ಪ್ರಾಮಾಣಿಕ ಬದುಕು ನಮ್ಮನ್ನು ಧಾರಣೆ ಮಾಡಿ ಬಾಳಿನಲ್ಲಿ ಕುಸಿಯದಂತೆ ಎತ್ತರಕ್ಕೇರಲು ಸಹಾಯ ಮಾಡುತ್ತದೆ. ಅದು ಧರ್ಮ. ಎಲ್ಲವನ್ನೂ(ಇಡೀ ವಿಶ್ವವನ್ನು) ಧಾರಣೆ ಮಾಡಿದ ಆ ಭಗವಂತನನ್ನು ಶಾಸ್ತ್ರಕಾರರು ಧರ್ಮಃ ಎಂದು ಕರೆಯುತ್ತಾರೆ. ವಿಷ್ಣುಸಹಸ್ರನಾಮದಲ್ಲಿ ಭಗವಂತನನ್ನು 'ಧರ್ಮೋ ಧರ್ಮವಿದುತ್ತಮಃ' ಎಂದು ಕರೆದಿದ್ದಾರೆ. ಇಂತಹ ಸ್ಥೂಲ ಪ್ರಪಂಚವನ್ನು ಧಾರಣೆ ಮಾಡಿದ ಭಗವಂತ ಸೂಕ್ಷ್ಮಾತಿ-ಸೂಕ್ಷ್ಮ. ಅದು ನಮ್ಮ ಬುದ್ಧಿಗೆ ನಿಲುಕಲಾರದ ಸಂಗತಿ. "ಇದನ್ನು ದೇವತೆಗಳೂ ಪೂರ್ಣ ಗ್ರಹಿಸಲಾರರು. ಹೀಗಿರುವಾಗ ನೀನು ತಿಳಿಯುವುದು ಕಷ್ಟ. ಹಾಗಾಗಿ ಈ ವರವನ್ನು ಬಿಟ್ಟು ಬೇರೆ ಏನಾದರೂ ವರವನ್ನು ಕೇಳು" ಎನ್ನುತ್ತಾನೆ ಯಮ. "ನನ್ನನ್ನು ಬಲವಂತ ಮಾಡಬೇಡ, ನನಗಾಗಿ ಈ ಪ್ರಶ್ನೆಯನ್ನು ಬಿಟ್ಟುಬಿಡು-ಬೇರೆ ಏನಾದರೂ ವರವನ್ನು ಕೇಳು" ಎಂದು ಯಮ ಹೇಳಿದಾಗ ನಚಿಕೇತ ಹೇಳುತ್ತಾನೆ:

ದೇವೈರತ್ರಾಪಿ ವಿಚಿಕಿತ್ಸಿತಂ ಕಿಲ ತ್ವಂ ಚ ಮೃತ್ಯೋ ಯನ್ನ ಸುಜ್ಞೇಯಮಾತ್ಥ ।
ವಕ್ತಾ ಚಾಸ್ಯ ತ್ವಾದೃಗನ್ಯೋ ನ ಲಭ್ಯೋ ನಾನ್ಯೋ ವರಸ್ತುಲ್ಯ ಏತಸ್ಯ ಕಶ್ಚಿತ್॥೨೨॥

ದೇವತೆಗಳಿಗೂ ಪೂರ್ಣ ತಿಳಿಯದ ವಿಷಯವೊಂದನ್ನು ನಾನು ನಿನ್ನಲ್ಲಿ ಕೇಳಿದ್ದೇನೆ. ನೀನು ಲೋಕದ ಧರ್ಮಾಧರ್ಮವನ್ನು ತೀರ್ಮಾನ ಮಾಡುವ ದೊಡ್ಡ ದೇವತೆ. ಹಾಗಿರುವಾಗ ಇಂತಹ ನಿಗೂಢ ವಿಷಯವನ್ನು ತಿಳಿದ ನಿನ್ನ ಬಳಿ ಬಂದ ನಾನು ಈ ವಿಷಯವನ್ನು ತಿಳಿದುಕೊಳ್ಳದೇ ಹೋದರೆ ಮೂರ್ಖನಾದಂತೆ. ನಿಜವಾಗಿ ಭಗವಂತನನ್ನು ಕಂಡು ಸಾಕ್ಷಾತ್ಕಾರ ಪಡೆದ ಒಬ್ಬ ಉಪಾಧ್ಯಾಯ ಇಂದು ನನಗೆ ಸಿಕ್ಕಿದ್ದಾನೆ. ಹಾಗಿರುವಾಗ ಈ ಜ್ಞಾನದಿಂದ ನಾನು

ವಂಚಿತನಾಗಲಾರೆ. ಇದಕ್ಕೆ ಸಮನಾದ ಇನ್ನೊಂದು ವರವೇ ಇಲ್ಲ. ಆದ್ದರಿಂದ ನಾನು ಬೇರೆ ವರ ಕೇಳಲಾಗದು- ಎನ್ನುತ್ತಾನೆ ನಚಿಕೇತ.

ಶತಾಯುಷಃ ಪುತ್ರಪೌತ್ರಾನ್ ವೃಣೀಷ್ವಾ ಬಹೂನ್ ಪಶೂನ್ ಹಸ್ತಿಹಿರಣ್ಯಮಶ್ವಾನ್ ।
ಭೂಮೇರ್ಮಹದಾಯತನಂ ವೃಣೀಷ್ವ ಸ್ವಯಂ ಚ ಜೀವ ಶರದೋ ಯಾವದಿಚ್ಛಸಿ॥೨೩॥

ನಚಿಕೇತ ತಾನು ಕೇಳಿದ ಈ ಮೂರನೇ ವರಕ್ಕೆ ಸಮನಾದ ಬೇರೊಂದು ವರವೇ ಇಲ್ಲಾ ಎಂದು ಹೇಳಿದಾಗ ಯಮ ಹೇಳುತ್ತಾನೆ: "ಒಂದಲ್ಲದಿದ್ದರೆ ಅನೇಕ ವರವನ್ನು ಕೇಳು" ಎಂದು. ಇಲ್ಲಿ ನಚಿಕೇತನಿಗೆ ಯಮ ಲೌಕಿಕವಾದ ಪ್ರಲೋಭನೆ ಮಾಡುತ್ತಿರುವುದನ್ನು ನಾವು ಗಮನಿಸಬೇಕು. ಯಮ ಹೇಳುತ್ತಾನೆ: "ನಿನಗೆ ಧೀರ್ಘಾಯಸ್ಸು ಪಡೆದ ಮಕ್ಕಳು, ಮೊಮ್ಮಕ್ಕಳು ಬೇಕಿದ್ದರೆ ಕೇಳು; ಮನೆ ತುಂಬಾ ಹಾಲು ಮೊಸರು ಕೊಡುವಂತಹ ಗೋವುಗಳನ್ನು ಕೇಳು; ಅಶ್ವ, ಆನೆ, ಬಂಗಾರದ ರಾಶಿಯನ್ನು ಕೇಳು; ನಿನಗೆಷ್ಟು ಭೂಮಿ ಬೇಕೋ ಅದನ್ನು ಕೇಳು; ನಿನಗೆ ಎಷ್ಟು ಸಮಯ ಬದುಕಬೇಕೋ ಅಷ್ಟು ಆಯಸ್ಸನ್ನು ಕೊಡುತ್ತೇನೆ. ಜೀವನದಲ್ಲಿ ಒಬ್ಬ ಸಂಸಾರಿ ಬಯಸುವ ಎಲ್ಲವನ್ನೂ ಕೇಳು- ಕೊಡುತ್ತೇನೆ, ಆದರೆ ಈ ಪ್ರಶ್ನೆಯನ್ನು ಬಿಟ್ಟುಬಿಡು.

ಏತತ್ತುಲ್ಯಂ ಯದಿ ಮನ್ಯಸೇ ವರಂ ವೃಣೀಷ್ವ ವಿತ್ತಂ ಚಿರಜೀವಿಕಾಂ ಚ ।
ಮಹಾಭೂಮೌ ನಚಿಕೇತಸ್ತ್ವಮೇಧಿ ಕಾಮಾನಾಂ ತ್ವಾ ಕಾಮಭಾಜಂ ಕರೋಮಿ॥೨೪॥

ಮುಂದುವರಿದು ಯಮ ಹೇಳುತ್ತಾನೆ: ನೀನು ಕೇಳಿದ ಒಂದು ವರಕ್ಕೆ ಲೌಕಿಕವಾಗಿ ಒಬ್ಬ ಮನುಷ್ಯ ಎಷ್ಟು ಬಯಸುತ್ತಾನೋ ಅಷ್ಟನ್ನು ಬೇಡಿಕೋ. ಇಲ್ಲಾ ಇದೂ ಕಡಿಮೆ ಎನಿಸಿದರೆ- ಇಡೀ ಬ್ರಹ್ಮ ಕಲ್ಪದಲ್ಲಿ ಪೂರ್ತಿ ಜೀವಿಸಲು ಬಯಸು-ಅದನ್ನು ಕೊಡುತ್ತೇನೆ; ಇಡೀ ಭೂಮಂಡಲದ ಚಕ್ರವರ್ತಿಯಾಗಬಯಸುವುದಾದರೆ ಅದನ್ನು ಕೇಳು. ಯಾವ ಚಕ್ರವರ್ತಿಯೂ ಸೇರದ ಎತ್ತರವನ್ನು ನೀನು ಸೇರುವಂತೆ ಮಾಡುತ್ತೇನೆ. ಯಾವಯಾವ ಕಾಮನೆಗಳಿವೆ ಅವೆಲ್ಲವೂ ಬಯಸಿದಾಗ ಕೈಸೇರುವಂತೆ ಮಾಡುತ್ತೇನೆ.

ಯೇ ಯೇ ಕಾಮಾ ದುರ್ಲಭಾ ಮರ್ತ್ಯಲೋಕೇ ಸರ್ವಾನ್ ಕಾಮಾಂಶ್ಛಂದತಃ ಪ್ರಾರ್ಥಯಸ್ವ ।
ಇಮಾ ರಾಮಾಃ ಸರಥಾಃ ಸತೂರ್ಯಾ ನ ಹೀದೃಶಾ ಲಂಭನೀಯಾ ಮನುಷ್ಯೈಃ ।
ಆಭಿರ್ಮತ್ಪ್ರತ್ತಾಭಿಃ ಪರಿಚಾರಯಸ್ವ ನಚಿಕೇತೋ ಮರಣಂ ಮಾಽನುಪ್ರಾಕ್ಷೀಃ ॥೨೫॥

ಮನುಷ್ಯ ಲೋಕದಲ್ಲಿ ನೀನು ಕಂಡು ಕೇಳರಿಯದ ದೇವಲೋಕದ ಅಪೂರ್ವ ಸಂಪತ್ತನು ಬಯಸು-ಅದನ್ನು ಕೊಡುತ್ತೇನೆ. ದೇವಲೋಕದ ಭೋಗವಾದ, ಮನುಷ್ಯ ಲೋಕದವರು ಎಂದೂ ಕಂಡು ಕೇಳರಿಯದ ಸೌಂದರ್ಯವಾದ ಅಪ್ಸರ ಸ್ತ್ರೀಯರನ್ನು ನಿನ್ನೊಂದಿಗೆ ಕರೆದುಕೊಂಡು ಹೋಗು, ಅವರು ನಿನ್ನ ಮನೆಯ ಚಾಕರಿ ಮಾಡಿಕೊಂಡಿರುವಂತೆ ಬಯಸು, ಎಲ್ಲಿ ಬೇಕಾದರೂ ಸಂಚರಿಸಬಲ್ಲ ದೇವಲೋಕದ ವಾಹನ ಬೇಕಿದ್ದರೆ ತೆಗೆದುಕೊಂಡು ಹೋಗು, ಭೂ ಲೋಕದಲ್ಲಿ ಇಲ್ಲದೇ ಇರುವ ವಿಶಿಷ್ಠ ತಾಳ ವಾದ್ಯಗಳನ್ನು ದೇವಲೋಕದಿಂದ ಪಡೆ. ಹೀಗೆ ಏನು ಬೇಕಾದರೂ ಕೇಳು.

ಆದರೆ ಸಾವಿನ ಆಚೆಗೆ ಜೀವನನ್ನು ನಿಯಂತ್ರಿಸುವ ಭಗವಂತನ ಬಗ್ಗೆ ಹೇಳು ಎಂದು ಕೇಳಬೇಡ. ಎಂದು ಯಮ ಒತ್ತಡದ ಪ್ರಲೋಭನೆ ಮಾಡುತ್ತಾನೆ. ಇದಕ್ಕೆ ನಚಿಕೇತ ಉತ್ತರಿಸುತ್ತಾ ಹೇಳುತ್ತಾನೆ:

ಶ್ವೋಭಾವಾ ಮರ್ತ್ಯಸ್ಯ ಯದಂತಕೈತತ್ ಸರ್ವೇಂದ್ರಿಯಾಣಾಂ ಜರಯಂತಿ ತೇಜಃ ।
ಅಪಿ ಸರ್ವಂ ಜೀವಿತಮಲ್ಪಮೇವ ತವೈವ ವಾಹಾಸ್ತವ ನೃತ್ಯಗೀತೇ ॥೨೬॥

ನ ವಿತ್ತೇನ ತರ್ಪಣೀಯೋ ಮನುಷ್ಯೋ ಲಪ್ಸ್ಯಾಮಹೇ ವಿತ್ತಮದ್ರಾಕ್ಷ್ಮ ಚೇತ್ತ್ವಾ ।
ಜೀವಿಷ್ಯಾಮೋ ಯಾವದೀಶಿಷ್ಯಸಿ ತ್ವಂ ವರಸ್ತು ಮೇ ವರಣೀಯಃ ಸ ಏವ ॥೨೭॥

ಅಜೀರ್ಯತಾಮಮೃತಾನಾಮುಪೇತ್ಯ ಜೀರ್ಯನ್ ಮರ್ತ್ಯಃ ಕ್ವಧಸ್ಥಃ ಪ್ರಜಾನನ್ ।
ಅಭಿಧ್ಯಾಯನ್ ವರ್ಣರತಿಪ್ರಮೋದಾನ್ ಅತಿದೀರ್ಘೇ ಜೀವಿತೇ ಕೋ ರಮೇತ ॥೨೮॥

ಯಸ್ಮಿನ್ನಿದಂ ವಿಚಿಕಿತ್ಸಂತಿ ಮೃತ್ಯೋ ಯತ್ಸಾಂಪರಾಯೇ ಮಹತಿ ಬ್ರೂಹಿ ನಸ್ತತ್ ।
ಯೋಽಯಂ ವರೋ ಗೂಢಮನುಪ್ರವಿಷ್ಟೋ ನಾನ್ಯಂ ತಸ್ಮಾನ್ನಚಿಕೇತಾ ವೃಣೀತೇ ॥೨೯॥

ಇಲ್ಲಿ ನಚಿಕೇತ ಯಮನಿಗೆ ಕೊಟ್ಟ ಉತ್ತರ ಬಹಳ ರೋಚಕವಾದುದ್ದು. ನಚಿಕೇತನ ಜ್ಞಾನ ಎಷ್ಟು ಎತ್ತರದ್ದು ಎನ್ನುವುದು ಈ ಶ್ಲೋಕಗಳಲ್ಲಿ ತಿಳಿಯುತ್ತದೆ. ನಚಿಕೇತ ಹೇಳುತ್ತಾನೆ- ನೀನು ಏನನ್ನು ಕೊಡುತ್ತೇನೆ ಎಂದು ಹೇಳಿದೆಯೋ ಅವೆಲ್ಲವೂ ನಶ್ವರ. ಈ ಪ್ರಪಂಚ ಶೋ-ಭಾವಃ ಮತ್ತು ಶೋ-ಅಭಾವಃ. ಇಂದು ಇದ್ದಂತೆ ನಾಳೆ ಇರತ್ತದೆ ಎನ್ನುವ ಭರವಸೆ ಇಲ್ಲ. ಇಂತಹ ಪ್ರಪಂಚದಲ್ಲಿ ಬದುಕುವ ನಾವು ಮರ್ತ್ಯರು. ಇಲ್ಲಿ ಸಾವಿಲ್ಲದ್ದನ್ನು ನೀನು ಕೊಡಲಾರೆ. ಹೀಗಿರುವಾಗ ಈ ಲೌಕಿಕ ಪ್ರಪಂಚವನ್ನು ಬಯಸಿ ಪ್ರಯೋಜನವೇನು? ಇಲ್ಲಿ ನಾವು ಅನುಭವಿಸುವ ಎಲ್ಲಾ ಭೋಗವೂ ನಮ್ಮ ಇಂದ್ರಿಯಗಳ ತೇಜಸ್ಸನ್ನು ಹೀರಿ ನಮ್ಮನ್ನು ಮುಪ್ಪಿನತ್ತ ಕೊಂಡೊಯ್ಯುತ್ತದೆ. ಮುಪ್ಪಿನಿಂದ ಸಾವು. ಹೀಗಿರುವಾಗ ಯಾವ ಪುರುಷಾರ್ಥಕ್ಕಾಗಿ ಈ ಲೌಕಿಕ ಭೋಗ? ಹೀಗಾಗಿ ಆಯಸ್ಸು, ಭೋಗದ್ರವ್ಯ ಯಾವುದೂ ನನಗೆ ಬೇಡ. ನನ್ನ ಬಯಕೆಯನ್ನು ಇದ್ಯಾವುದೂ ತಣಿಸಲಾರದು. ಆದ್ದರಿಂದ ಇವೆಲ್ಲವೂ ನಿನ್ನಲ್ಲೇ ಇರಲಿ. ನನಗೆ ಬೇಡ.
ಮನುಷ್ಯನಿಗೆ ಎಷ್ಟು ಬೇಕೋ ಅಷ್ಟು ಹಣವನ್ನು ಕೊಡುತ್ತೇನೆ ಎಂದರೆ ಅದು ಮೂರ್ಖತನವಾಗುತ್ತದೆ. ಏಕೆಂದರೆ ಮನುಷ್ಯನ ಧನ ಆಸೆಯನ್ನು ಪೂರೈಸುವುದು ಯಾರಿಂದಲೂ ಸಾಧ್ಯವಿಲ್ಲ. ನಮಗೆಷ್ಟು ಸಿಕ್ಕಿದರೂ ಅದು ಸಾಕು ಎಂದೆನಿಸುವುದಿಲ್ಲ. ನನಗೆ ನಿನ್ನಂತಹ ಜ್ಞಾನಿಯ ದರ್ಶನವಾಗಿರುವಾಗ ಬದುಕಿನ ಚಿಂತೆ ನನಗಿಲ್ಲ. ಅದಕ್ಕಾಗಿ ಈ ಯಾವ ಅಪೇಕ್ಷೆಯೂ ನನಗಿಲ್ಲ. ನನಗೆ ಬೇಕಾಗಿರುವುದು ಜ್ಞಾನ.
ಮುಪ್ಪು-ಸಾವನ್ನು ಗೆದ್ದ ನೀವು ಅಮೃತರು. ನಿಮ್ಮ ಬಳಿ ಬಂದ ನಾನು ಒಂದು ದಿನ ಮುದುಕನಾಗಿ ಸಾಯುವವ. ಹೀಗಾಗಿ ಸಾಯುವ ಮೊದಲು ನಿಮ್ಮಂತವರಿಂದ ಜ್ಞಾನ ಪಡೆಯದಿದ್ದರೆ ನಾನೆಂತಹ ತಿಳಿಗೇಡಿಯಾಗುತ್ತೇನೆ? ನನಗೊದಗಿದ ಇಂತಹ ಅವಕಾಶದಲ್ಲಿ ನಾನು ಜ್ಞಾನವನ್ನು ಪಡೆದುಕೊಳ್ಳದಿದ್ದರೆ ಅದು ದೊಡ್ಡ ನಷ್ಟ-ಎನ್ನುತ್ತಾನೆ ನಚಿಕೇತ. ಮಧ್ವಾಚಾರ್ಯರು ಹೇಳಿದಂತೆ: "ನಿಜವಾಗಿ ಅಧ್ಯಾತ್ಮದ ರಹಸ್ಯವನ್ನು ಹೇಳಬಲ್ಲ ಜ್ಞಾನಿ ಸಿಕ್ಕಾಗ ಅವನನ್ನು ಉಪಯೋಗಿಸಿಕೊಳ್ಳದೇ ಇರುವವರು ಖಾಯಂ ಆಗಿ ನರಕ ವಾಸ ಮಾಡುತ್ತಾರೆ. ಅವರಿಗೆ ಉದ್ಧಾರದ

ದಾರಿಯೇ ಇಲ್ಲ." ಹೀಗಾಗಿ ಮುಂದುವರಿದು ನಚಿಕೇತ ಹೇಳುತ್ತಾನೆ: ನಿಮ್ಮಂತಹ ಜ್ಞಾನಿಯೊಂದಿಗೆ ಮಾತನಾಡುವ ಭಾಗ್ಯ ಸಿಕ್ಕಿದೆ, ಹಾಗಿರುವಾಗ ನನಗೆ ಸಾಧ್ಯವಾದಷ್ಟು ತಿಳಿದುಕೊಳ್ಳುವ ಪ್ರಯತ್ನ ಮಾಡದಿದ್ದರೆ ಎಂತಹ ನಷ್ಟ. ಏನೂ ಜ್ಞಾನ ಸಾಧನೆ ಮಾಡದೆ ಕೇವಲ ತಿಂದುಂಡು ಜೀವನ ಕಳೆಯುವುದರಲ್ಲಿ ಯಾವ ಸುಖವಿದೆ? ಕೇವಲ ಬಂಧದ ಬದುಕು, ಭೋಗದ ಆಸಕ್ತಿಯಲ್ಲಿದ್ದು, ಅದರಾಚೆಗಿನ ಅರಿವೇ ಇಲ್ಲದೆ ಬದುಕುವುದರಿಂದ ಮನುಷ್ಯ ಜೀವನ ವ್ಯರ್ಥ. ಈ ರೀತಿ ಬದುಕಿದರೆ ಮನುಷ್ಯ ಜನ್ಮ ಪಡೆದೂ ಪ್ರಾಣಿಯಾಗಿ ಬದುಕಿದಂತೆ. ಹಾಗಾಗಿ ಕೇವಲ ತಿಂದುಂಡು ಬದುಕುವ ಧೀರ್ಘ ಜೀವನ ನನಗೆ ಬೇಡ-ಎನ್ನುತ್ತಾನೆ ನಚಿಕೇತ. ಇಲ್ಲಿ 'ಜೀರ್ಯನ್ ಮರ್ತ್ಯಃ ಕ್ವಧಸ್ಥಃ ಪ್ರಜಾನನ್' ಎನ್ನುವಲ್ಲಿ ಕ್ವಧಸ್ಥಃ ಎನ್ನುವ ವಿಶೇಷ ಪದ ಬಳಕೆಯಾಗಿದೆ. ಇದು ಸತ್ತು ನರಕಕ್ಕೆ ಹೋದ ಮನುಷ್ಯನ ಪಾಡನ್ನು ಹೇಳುವ ಪದ. ಕ್ವಥನ ಶೀಲೇ ನರಕೇ ಸ್ಥಿತಃ. ಕ್ವದ ಅಂದರೆ ದುಃಖದ ಮಡುವಿನಲ್ಲಿ ಬಿದ್ದು ಬೇಯುವುದು[ಥ-ಕಾರದ ಬದಲು ಮೂರನೇ ಪದವಾದ ದ-ಕಾರ ಬಳಸುತ್ತಾರೆ]-ತುಂಬಾ ಕಷ್ಟವನ್ನು ಅನುಭವಿಸುವ ನರಕಲೋಕ.

ಮುಂದುವರಿದು ನಚಿಕೇತ ಹೇಳುತ್ತಾನೆ: ಮರಳಿ ಬಾರದ ಮುಕ್ತಿಯಲ್ಲಿ ಭಗವಂತ ಹೇಗೆ ನಿಯಮಿಸುತ್ತಾನೆ ಎಂದು ಪೂರ್ತಿ ತಿಳಿಯದೆ, ಅದನ್ನು ತಿಳಿಯುವುದಕ್ಕೋಸ್ಕರ ದೇವತೆಗಳು ಏನು ಚರ್ಚೆ ಮಾಡುತ್ತಾರೋ, ಅಂತಹ ಭಗವಂತನ ಜ್ಞಾನವನ್ನು ನನಗೆ ಕೊಡು. ಭೂಮಿಯಲ್ಲಿ ಸಿಗದ ಈ ಅಪೂರ್ವ ತತ್ವಜ್ಞಾನ ನನಗೆ ಬೇಕು. ಈ ಸಂಪತ್ತಿಗಿಂತ ಮಿಗಿಲಾದ ಸಂಪತ್ತು ಇನ್ಯಾವುದೂ ಇಲ್ಲ. ನಮ್ಮ ಹೃದಯಗುಹೆಯಲ್ಲೇ ಇದ್ದರೂ, ನಮ್ಮ ಪ್ರಜ್ಞೆಗೆ ನಿಲುಕದ ತತ್ವಜ್ಞಾನ ನನಗೆ ಬೇಕು. ಯಾರಿಗೂ ತಿಳಿಯದ ಈ ಗುಟ್ಟನ್ನು ಇಂದು ನಿನ್ನಿಂದ ಪಡೆಯುವ ಭಾಗ್ಯ ನನಗೆ ಬಂದಿದೆ. ಆ ಅಧ್ಯಾತ್ಮದ ರಹಸ್ಯವಾದ ಮುಕ್ತನಿಯಾಮಕ ಭಗವಂತನ ಮಹಿಮೆಯನ್ನು ಹೇಳು. ಇದನ್ನು ಬಿಟ್ಟು ನಚಿಕೇತ ಇನ್ನೇನನ್ನೂ ಬಯಸುವುದಿಲ್ಲ. ಎಂದು ನಚಿಕೇತ ಗಟ್ಟಿಯಾಗಿ ಕುಳಿತುಬಿಟ್ಟ.

ಪ್ರೀತಿಯ ಅಧ್ಯಾತ್ಮ ಬಂಧುಗಳೇ, ಒಂದು ಸುಂದರ ಕಥೆಯ ರೂಪದಲ್ಲಿ ಜ್ಞಾನಧಾರೆಯನ್ನು ಹರಿಸುವ ಈ ಉಪನಿಷತ್ತಿನ ಮೊದಲ ಅಧ್ಯಾಯದ ಮೊದಲ ಬಳ್ಳಿಯನ್ನು ಇಲ್ಲಿ ನಾವು ನಮ್ಮ ಸಾಮರ್ಥ್ಯಕ್ಕನುಗುಣವಾಗಿ ನೋಡಿದೆವು. ಇಲ್ಲಿ ಬರುವ ಒಂದೊಂದು ಶ್ಲೋಕದಲ್ಲಿನ ಒಂದೊಂದು ಪದದಲ್ಲೂ ಅನೇಕ ಗುಹ್ಯಾರ್ಥಗಳು ಅಡಗಿವೆ. ಕಥಾ ರೂಪದಲ್ಲಿ ಹರಿಯುವಾಗ ಕಥೆಯ ಪಾತ್ರಧಾರಿಗಳ ನಡವಳಿಕೆಯಲ್ಲಿ ಕೂಡಾ ನಾವು ತಿಳಿಯುವುದು ಬಹಳಷ್ಟಿದೆ. ಮೇಲ್ನೋಟದಲ್ಲಿ ನೋಡಿದರೆ ಒಬ್ಬ ಮಹಾನ್ ಜ್ಞಾನಿಯಾದ ಉದ್ಧಾಲಕ ಕೋಪವನ್ನು, ಲೋಭವನ್ನು ಗೆದ್ದಿರಲಿಲ್ಲ ಎಂದು ಕಾಣಿಸಿದರೂ, ನಂತರ ಆತನ ಕೋಪ ಇಂತಹ ಮಹಾನ್ ಜ್ಞಾನ ಭೂಮಿಗಿಳಿದು ಬರುವಂತೆ ಮಾಡಲು ಭಗವಂತ ಮಾಡಿದ ವ್ಯವಸ್ಥೆ ಇದಾಗಿತ್ತು ಎನ್ನುವುದು ತಿಳಿಯುತ್ತದೆ. ಇನ್ನು ಯಮ ಧರ್ಮರಾಯ. ಈತನ ಪಾತ್ರದ ಮುಖೇನ ಭಗವಂತ ನಮಗೆ ಅದೆಷ್ಟು ಸಂದೇಶವನ್ನು ಕರುಣಿಸಿದ್ದಾನೆ? ಅತಿಥಿ ಸತ್ಕಾರ ಹೇಗಿರಬೇಕು, ಜ್ಞಾನಿಯನ್ನು ಹೇಗೆ ಗೌರವಿಸಬೇಕು, ಮಹತ್ತಾದ ಜ್ಞಾನವನ್ನು ಕೊಡುವಾಗ ವ್ಯಕ್ತಿಯ ಯೋಗ್ಯತೆಯನ್ನು ಹೇಗೆ ಪರೀಕ್ಷಿಸಬೇಕು ಇತ್ಯಾದಿ. ಇಲ್ಲಿ ನಿಮಗೊಂದು ಪ್ರಶ್ನೆ ಬರಬಹುದು. "ಎಲ್ಲವನ್ನೂ ತಿಳಿದ ಯಮಧರ್ಮನಿಗೆ ನಚಿಕೇತನ ಯೋಗ್ಯತೆ ತಿಳಿದಿರಲಿಲ್ಲವೇ? ಗೊತ್ತಿದ್ದಿದ್ದರೆ ಮತ್ತೆ ಆತನನ್ನು ಲೌಕಿಕವಾದ ಪ್ರಲೋಭನೆ ಮಾಡುವ ಅಗತ್ಯವೇನಿತ್ತು?" ಎಂದು. ನಿಜ, ಯಮನಿಗೆ ಎಲ್ಲವೂ ತಿಳಿದಿತ್ತು. ಆದರೂ ಕೂಡಾ ಆತ ನಚಿಕೇತನನ್ನು ಪರೀಕ್ಷಿಸಿದ. ಇದಕ್ಕೆ ಕಾರಣವೇನೆಂದರೆ-ಮಹಾತ್ಮರಾದವರು ಯಾವಾಗಲೂ ಲೋಕನಿಯಮದಂತೆಯೇ ನೆಡೆದುಕೊಳ್ಳುತ್ತಾರೆ. ಏಕೆಂದರೆ ಮಹಾತ್ಮರ ನಡೆಯನ್ನು ಪ್ರಪಂಚ ಸದಾ ಪ್ರಮಾಣವಾಗಿರಿಸಿಕೊಂಡು ಅನುಸರಿಸುತ್ತದೆ. ಹಾಗಿರುವಾಗ ಮಹಾತ್ಮರ ನಡೆ ಭಿನ್ನವಾಗಿದ್ದರೆ ಇಡೀ ಲೋಕ ಕರ್ಮ ಪ್ರಜ್ಞೆಯನ್ನು ಕಳೆದುಕೊಂಡು ದಾರಿತಪ್ಪಿಬಿಡುತ್ತದೆ, ಸ್ವಚ್ಛಂದತೆ ಬಂದು ನಿರ್ಧಿಷ್ಟ ವ್ಯವಸ್ಥೆ ಹೊರಟು ಹೋಗುತ್ತದೆ. [ಶ್ರೀಕೃಷ್ಣ ಸಂಧ್ಯಾವಂದನೆ ಇತ್ಯಾದಿ ಮೂಲ ಕರ್ಮವನ್ನು ತಪ್ಪದೇ

ಮಾಡುತ್ತಿದ್ದುದನ್ನು ಇಲ್ಲಿ ನಾವು ನೆನಪಿಸಿಕೊಳ್ಳಬಹುದು. ಇದು ಆತನಿಗೋಸ್ಕರವಲ್ಲ, ಆತನನ್ನು ಹಿಂಬಾಲಿಸುವ ಜನರಿಗೆ ಮಾರ್ಗದರ್ಶನಕ್ಕೋಸ್ಕರ]. ಹೀಗಾಗಿ ದೇವತೆಗಳು ತಮ್ಮ ಕರ್ಮವನ್ನು ಲೋಕನಿಯಮದಂತೆ ಮಾಡಿ ತೋರಿಸುತ್ತಾರೆ. ಇದು ಅವರ ಶಿಕ್ಷಣ ಕ್ರಮ. ಇಲ್ಲಿ ಯಮ ನಚಿಕೇತನನ್ನು ಪರೀಕ್ಷಿಸುವ ಮುಖೇನ ಆತನ ಯೋಗ್ಯತೆಯನ್ನು ನಮ್ಮ ಮುಂದೆ ತೆರೆದಿಟ್ಟಿದ್ದಾನೆ. ಇನ್ನು ಈ ಕಥೆಯ ನಾಯಕನಾದ ನಚಿಕೇತ. ಈತ ಜ್ಞಾನ ಸಂಪತ್ತಿನ ಮುಂದೆ ಇತರ ಲೌಕಿಕ ಸಂಪತ್ತು ನಶ್ವರ ಎನ್ನುವುದನ್ನು ಲೋಕಕ್ಕೆ ತೋರಿಸಿಕೊಟ್ಟ. ಯಮ ಮೂರು ವರವನ್ನು ಕೊಡುತ್ತೇನೆ ಎಂದಾಗ ನಚಿಕೇತ ಧನ-ಕನಕವನ್ನು ಬೇಡದೆ, ಯಾವುದೇ ಪ್ರಲೋಭನೆಗೊಳಗಾಗದೆ, ಗಟ್ಟಿಯಾಗಿ ನಿಂತು-ಲೋಕೋದ್ಧಾರಕ್ಕಾಗಿ ಗುರುವಿನಿಂದ ಜ್ಞಾನವನ್ನು ಬೇಡಿದ. ಹೀಗೆ ಉಪನಿಷತ್ತಿನ ಪ್ರತಿಯೊಂದು ನಡೆಯ ಹಿಂದೆ ಕೂಡಾ ಅಪೂರ್ವವಾದ ಸಂದೇಶವಡಗಿರುವುದನ್ನು ನಾವು ಗಮನಿಸಬೇಕು. ಬನ್ನಿ ನಚಿಕೇತನ ಮೂರನೇ ಪ್ರಶ್ನೆಗೆ ಉತ್ತರವಾಗಿ ಬಂದಿರುವ ಉಪದೇಶವನ್ನು ಮುಂದಿನ ಭಾಗದಲ್ಲಿ ಧರ್ಮರಾಯನಿಂದಲೇ ನೇರವಾಗಿ ಆಲಿಸೋಣ.

॥ ಇತಿ ಕಾಠಕೋಪನಿಷದಿ ಪ್ರಥಮಾಧ್ಯಾಯೇ ಪ್ರಥಮಾ ವಲ್ಲೀ ॥

ಇಲ್ಲಿಗೆ ಕಾಠಕೋಪನಿಷತ್ತಿನ ಮೊದಲ ಅಧ್ಯಾಯದ ಮೊದಲ ಬಳ್ಳಿ(ವಲ್ಲೀ) ಮುಗಿಯಿತು.

*******

# ವಲ್ಲೀ-೨

ನಚಿಕೇತನ ಅಧ್ಯಾತ್ಮನಿಷ್ಠೆ, ತಿಳಿಯಲೇಬೇಕು ಎನ್ನುವ ಛಲವನ್ನು ಕಂಡು ಯಮನಿಗೆ ಬಹಳ ಸಂತೋಷವಾಯಿತು. ಇಷ್ಟು ನಿಸ್ಪೃಹತೆಯಿಂದ ಕೇವಲ 'ಜ್ಞಾನಕ್ಕೋಸ್ಕರ ಜ್ಞಾನ ಬೇಕು', ಇನ್ನೇನೂ ಬೇಡ ಎನ್ನುವ ಇಂತಹ ವಿದ್ಯಾರ್ಥಿಯನ್ನು ಕಂಡ ಯಮ ಬಹಳ ಸುಂದರವಾದ ಮಾತೊಂದನ್ನು ಹೇಳುತ್ತಾನೆ:

ಅನ್ಯಚ್ಛ್ರೇಯೋಽನ್ಯದುತೈವ ಪ್ರೇಯಸ್ತೇ ಉಭೇ ನಾನಾರ್ಥೇ ಪುರುಷಂ ಸಿನೀತಃ ।
ತಯೋಃ ಶ್ರೇಯ ಆದದಾನಸ್ಯ ಸಾಧು ಭವತಿ ಹೀಯತೇಽರ್ಥಾದ್ಯ ಉ ಪ್ರೇಯೋ ವೃಣೀತೇ ॥೧॥

ಯಮ ಹೇಳುತ್ತಾನೆ: ಮನುಷ್ಯನನ್ನು ಮುಖ್ಯವಾಗಿ ಕಾಡುವ ಸಂಗತಿಗಳು ಎರಡು. ಒಂದು ಶ್ರೇಯಸ್ಸು ಹಾಗೂ ಇನ್ನೊಂದು ಪ್ರೇಯಸ್ಸು. ನಮಗೆ ಒಳಿತನ್ನುಂಟುಮಾಡುವುದು ಮತ್ತು ಹಿತವಾದುದ್ದು ಶ್ರೇಯಸ್ಸು. ನಮಗೆ ಪ್ರಿಯವಾದುದ್ದು ಆದರೆ ನಶ್ವರವಾದುದ್ದು ಪ್ರೇಯಸ್ಸು. ಉದಾಹರಣೆಗೆ ಒಬ್ಬ ಸಕ್ಕರೆ ಖಾಯಿಲೆಯುಳ್ಳ ರೋಗಿಗೆ ಕಹಿ ಮದ್ದು ಶ್ರೇಯಸ್ಸು, ಆದರೆ ಸಿಹಿ ತಿಂಡಿ ಪ್ರೇಯಸ್ಸು. ಈ ಶ್ರೇಯಸ್ಸು ಮತ್ತು ಪ್ರೇಯಸ್ಸು ಮನುಷ್ಯನನ್ನು ಕಟ್ಟಿಹಾಕುತ್ತವೆ. ಮನುಷ್ಯ ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು ಎನ್ನುವ ದ್ವಂದ್ವದಲ್ಲಿ ಬದುಕುತ್ತಾನೆ. ಕೆಲವರು ಶ್ರೇಯಸ್ಸಿನ ದಾರಿಯನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಅವರಿಗೆ ಸುಖಮಯವಾದ ಮೋಕ್ಷಾಂತವಾದ ಫಲ ಸಿಗುತ್ತದೆ. ಇದನ್ನು ಬಿಟ್ಟು ಚಪಲಕ್ಕೆ ಬಿದ್ದು ಶ್ರೇಯಸ್ಸಿನ ಬದಲು ಪ್ರೇಯಸ್ಸಿನ ಮಾರ್ಗವನ್ನು ತುಳಿದವನು ತನ್ನ ಜೀವನದ ಅರ್ಥವನ್ನು ಕಳೆದುಕೊಳ್ಳುತ್ತಾನೆ ಮತ್ತು ಇಡೀ ಜೀವನವನ್ನು ವ್ಯರ್ಥ ಮಾಡಿಕೊಳ್ಳುತ್ತಾನೆ.

ಶ್ರೇಯಶ್ಚ ಪ್ರೇಯಶ್ಚ ಮನುಷ್ಯಮೇತಸ್ತೌ ಸಂಪರೀತ್ಯ ವಿವಿನಕ್ತಿ ಧೀರಃ ।
ಶ್ರೇಯೋ ಹಿ ಧೀರೋಽಭಿಪ್ರೇಯಸೋ ವೃಣೀತೇ ಪ್ರೇಯೋ ಮಂದೋ ಯೋಗಕ್ಷೇಮಾದ್ವೃಣೀತೇ ॥೨॥

ಸಾಮಾನ್ಯವಾಗಿ ಈ ಶ್ರೇಯಸ್ಸು ಮತ್ತು ಪ್ರೇಯಸ್ಸು ಮನುಷ್ಯನ ತಲೆಯಲ್ಲಿ ಕೂತು ಆತನನ್ನು ಕಾಡುತ್ತವೆ. ಆಗ ಬುದ್ಧಿವಂತನಾದವನು, ಯಾವುದು ಬೇಕು, ಯಾವುದು ಬೇಡ ಎಂದು ಚೆನ್ನಾಗಿ ವಿಶ್ಲೇಷಣೆ ಮಾಡಿ ವಿವೇಕದಿಂದ ತೀರ್ಮಾನ ತೆಗೆದುಕೊಳ್ಳುತ್ತಾನೆ. ಈತ ಧೈರ್ಯಶಾಲಿಯಾಗಿರುತ್ತಾನೆ. ನನಗೆ ಹಿತವಾದುದ್ದು ಬೇಕು, ಇಷ್ಟವಾದುದ್ದು ಬೇಡ, ನಾನು ಈ ಆಕರ್ಷಣೆಗೆ ಒಳಗಾಗಬಾರದು ಎನ್ನುವ ವಿವೇಕ ಈತನಲ್ಲಿರುತ್ತದೆ. ಇದು ಬಹಳ ಕಷ್ಟ. ಸಾಮಾನ್ಯವಾಗಿ ಮನುಷ್ಯನಿಗೆ ಕೆಟ್ಟದ್ದು ಯಾವುದು ಎನ್ನುವುದು ಗೊತ್ತಿರುತ್ತದೆ. ಆದರೆ ಗೊತ್ತಿದ್ದೂ ಆ ದಾರಿಯಲ್ಲಿ ಹೋಗಿ ಬಲಿ ಬೀಳುವವರೇ ಹೆಚ್ಚು. ಇದಕ್ಕೆ ಕಾರಣ ಪ್ರೇಯಸ್ಸಿನ ಸೆಳೆತ. ಜ್ಞಾನಿಯಾದವನು ಇಂತಹ ಸೆಳೆತವನ್ನು ಮೀರಿ ನಾನು ಒಳ್ಳೆಯ ದಾರಿ ಹಿಡಿಯಬೇಕು ಎಂದು ತೀರ್ಮಾನ ಮಾಡಿ, ಧೈರ್ಯದಿಂದ ಶ್ರೇಯಸ್ಸಿನ ಮಾರ್ಗದಲ್ಲಿ ಸಾಗುತ್ತಾನೆ. ಆದರೆ ಬುದ್ಧಿಗೇಡಿ(ಮಂದ) ಪ್ರೇಯಸ್ಸಿನ ತಾತ್ಕಾಲಿಕ ಸೆಳೆತಕ್ಕೆ ಒಳಗಾಗಿ ತನ್ನ ಬಾಳನ್ನು ಹಾಳು ಮಾಡಿಕೊಳ್ಳುತ್ತಾನೆ. ಆತ ಜೀವನವೆಂದರೆ ಆದಾಯ-ವ್ಯಯ, ಗಳಿಸುವುದು-ಗಳಿಸಿದ್ದನ್ನು ಉಳಿಸುವುದು-ಇಷ್ಟೇ ಎಂದು ತಿಳಿದು ಹಿತವಾದದ್ದನ್ನು ಬಿಟ್ಟು ಪ್ರಿಯವಾದುದರ ಬೆನ್ನು ಹತ್ತುತ್ತಾನೆ.

ಇಲ್ಲಿ ಯೋಗ-ಕ್ಷೇಮ ಎನ್ನುವ ಪದ ಬಳಕೆಯಾಗಿದೆ. ಇಲ್ಲದ್ದನ್ನು ಗಳಿಸುವುದು ಯೋಗ, ಗಳಿಸಿದ್ದನ್ನು ಉಳಿಸುವುದು ಕ್ಷೇಮ. ಅಪ್ರಾಪ್ತಸ್ಯ ಪ್ರಾಪ್ತಿಃ ಯೋಗಃ, ಪ್ರಾಪ್ತಸ್ಯ ಪರಿರಕ್ಷಣಂ ಕ್ಷೇಮಃ. ನಾವು 'ಗಳಿಸಿದರೆ ಗಳಿಸಬೇಕು ಜ್ಞಾನವನ್ನು. ಉಳಿಸಿದರೆ ಉಳಿಸಬೇಕು ಯೋಗ ವಿದ್ಯೆಯನ್ನು'. ಇದನ್ನು ಬಿಟ್ಟು ಕೇವಲ ಹಣವನ್ನು ಗಳಿಸುವುದು ಮತ್ತು ಅದನ್ನು ಉಳಿಸುವುದೂ ಮಾಡುತ್ತಾ, ಇದ್ದ ಸುಖವನ್ನು ಮರೆತು, ಸುಖದ ನಿರೀಕ್ಷೆಯಲ್ಲೇ ಬದುಕಿದರೆ ಜೀವನ ವ್ಯರ್ಥ. ಇಲ್ಲಿ ನಚಿಕೇತ ಈ ಎಲ್ಲಾ ವಿಚಾರವನ್ನೂ ತಿಳಿದಿದ್ದ. ಆದ್ದರಿಂದ ಆತ ಯಾವುದೇ ಪ್ರಲೋಭನೆಗೆ ಒಳಗಾಗಲಿಲ್ಲ.

ಸ ತ್ವಂ ಪ್ರಿಯಾನ್ ಪ್ರಿಯರೂಪಾಂಶ್ಚ ಕಾಮಾನ್ ಅಭಿಧ್ಯಾಯನ್ ನಚಿಕೇತೋಽತ್ಯಸ್ರಾಕ್ಷೀಃ ।
ನೈತಾಂ ಸೃಂಕಾಂ ವಿತ್ತಮಯೀಮವಾಪ್ತೋ ಯಸ್ಯಾಂ ಮಜ್ಜಂತಿ ಬಹವೋ ಮನುಷ್ಯಾಃ ॥೩॥

ಯಮ ಹೇಳುತ್ತಾನೆ: ಹೇಗೆ ಹೆಚ್ಚಿನ ಮನುಷ್ಯರು ಪ್ರಿಯವಾದುದರ ಹಿಂದೆ ಹೋಗುತ್ತಾರೋ ಹಾಗೇ ನೀನು ಹೋಗಲಿಲ್ಲ. ಪ್ರಿಯರೂಪವಾದ ಕಾಮನೆಗಳನ್ನು ಒಳ-ಹೊರಗೂ ಯೋಚನೆ ಮಾಡಿ, ಅದರಲ್ಲಿರುವ ಗುಣದೋಷವನ್ನು ಧ್ಯಾನ ಮಾಡಿ, ಪ್ರೇಯಸ್ಸನ್ನು ಗುರುತಿಸಿ ಅದನ್ನು ತೊರೆದುಬಿಟ್ಟೆ. ನಾನು ಕೊಟ್ಟ ಬಂಗಾರದ ಹಾರವನ್ನೂ ಕೂಡಾ ನೀನು ಬೇಡವೆಂದೆ. ಮೆಚ್ಚತಕ್ಕಂತಹ ಹಿರಿಮೆ ನಿನ್ನದು-ಎಂದು ಯಮ ನಚಿಕೇತನನ್ನು ಪ್ರಶಂಸಿಸುತ್ತಾನೆ.

ದೂರಮೇತೇ ವಿಪರೀತೇ ವಿಷೂಚೀ ಅವಿದ್ಯಾ ಯಾ ಚ ವಿದ್ಯೇತಿ ಜ್ಞಾತಾ ।
ವಿದ್ಯಾಭೀಪ್ಸಿನಂ ನಚಿಕೇತಸಂ ಮನ್ಯೇ ನ ತ್ವಾ ಕಾಮಾ ಬಹವೋಽಲೋಲುಪಂತ ॥೪॥

ಬಹಳ ಮಂದಿ ತತ್ಕಾಲದ ಚಪಲಕ್ಕೆ ಬಿದ್ದು ಶ್ರೇಯಸ್ಸಿನ ದಾರಿಯನ್ನು ಬಿಟ್ಟು ಪ್ರೇಯಸ್ಸಿನ ದಾರಿಯನ್ನೇಕೆ ಹಿಡಿಯುತ್ತಾರೆ ಎನ್ನುವುದನ್ನು ಇಲ್ಲಿ ಯಮ ವಿವರಿಸಿದ್ದಾನೆ. ಮುಖ್ಯವಾಗಿ ಮಾನವನಿಗಿರುವುದು ಎರಡು ದಾರಿಗಳು. ಒಂದು ಶ್ರೇಯಸ್ಸಿನ ಕಡೆಗೆ ಹೋಗುವ ಜ್ಞಾನದ ದಾರಿ ಹಾಗೂ ಇನ್ನೊಂದು ತತ್ಕಾಲದ ಸೆಳತಕ್ಕೆ ಬಲಿಯಾಗುವಂತೆ ಮಾಡುವ ಅಜ್ಞಾನದ ದಾರಿ. ಜಗತ್ತಿನಲ್ಲಿ ವ್ಯಾಪಿಸಿರುವುದು ಜ್ಞಾನಕ್ಕಿಂತ ಹೆಚ್ಚು ಅಜ್ಞಾನ. ಅಜ್ಞಾನಿಗಳಿಗೆ ತಮಗೆ ಏನೂ ತಿಳುವಳಿಕೆ ಇಲ್ಲಾ ಎನ್ನುವ ವಿಷಯವೂ ತಿಳಿದಿರುವುದಿಲ್ಲ. ಹಾಗಾಗಿ ಅಜ್ಞಾನಿ ಸುಲಭವಾಗಿ ಪ್ರೇಯಸ್ಸಿನ ಸೆಳತಕ್ಕೆ ಬಲಿಯಾಗುತ್ತಾನೆ. ಆದರೆ ತಿಳುವಳಿಕೆಯುಳ್ಳವ ಎಷ್ಟೇ ಆಕರ್ಷಣೆ ಇದ್ದರೂ, ಅದಕ್ಕೆ ಬಲಿಯಾಗದೆ, ಗಟ್ಟಿಯಾಗಿ ನಿಂತುಬಿಡುತ್ತಾನೆ. ಆದ್ದರಿಂದ ಮೂಲಭೂತವಾಗಿ ಶ್ರೇಯಸ್ಸು-ಪ್ರೇಯಸ್ಸು ಎನ್ನುವುದರ ಆಯ್ಕೆ ಜ್ಞಾನ-ಅಜ್ಞಾನ, ವಿದ್ಯೆ-ಅವಿದ್ಯೆಗೆ ಸಂಬಂಧಪಟ್ಟದ್ದು. ಇವು ಪರಸ್ಪರ ವಿರುದ್ಧ ಸ್ವಭಾವವುಳ್ಳ ಹಾಗೂ ವಿರುದ್ಧ ಫಲವನ್ನು ಕೊಡುವ, ವಿರುದ್ಧ ದಿಕ್ಕಿಗೆ ಸಾಗುವಂತವು. ಇಲ್ಲಿ ಯಮ ನಚಿಕೇತನನ್ನು ಪ್ರಶಂಸಿಸುತ್ತಾ ಹೇಳುತ್ತಾನೆ: "ನೀನು ಅವಿದ್ಯೆಯ ಬೆನ್ನು ಹತ್ತಿದ್ದರೆ ಪ್ರೇಯಸ್ಸಿನ ಕಡೆ ಸಾಗುತ್ತಿದ್ದೆ, ಆದರೆ ನೀನು ಹಾಗೆ ಮಾಡದೇ ವಿದ್ಯೆಯ ಬೆನ್ನು ಹತ್ತಿದ್ದುದರಿಂದ ನಿನಗೆ ಶ್ರೇಯಸ್ಸು ಇಷ್ಟವಾಯಿತು. ಈ ಕಾರಣದಿಂದ ಯಾವ ಕಾಮನೆಗಳೂ ನಿನ್ನನ್ನು ಮರಳುಗೊಳಿಸಲಿಲ್ಲ" ಎಂದು

ಅವಿದ್ಯಾಯಾಮಂತರೇ ವೇಷ್ಟ್ಯಮಾನಾಃ ಸ್ವಯಂ ಧೀರಾಃ ಪಂಡಿತಂಮನ್ಯಮಾನಾಃ ।
ದಂದ್ರಮ್ಯಮಾಣಾಃ ಪರಿಯಂತಿ ಮೂಢಾ ಅಂಧೇನೈವ ನೀಯಮಾನಾ ಯಥಾಂಧಾಃ ॥೫॥

[ಇತ್ತೀಚೆಗೆ ಪ್ರಕಟವಾಗುತ್ತಿರುವ ಹೆಚ್ಚಿನ ಪುಸ್ತಕಗಳಲ್ಲಿ ಈ ಶ್ಲೋಕದ ಮೊದಲ ಸಾಲು "ಅವಿದ್ಯಾಯಾಮಂತರೇ ವರ್ತಮಾನಾಃ" ಎಂದು ಮುದ್ರಣವಾಗಿರುವುದನ್ನು ಕಾಣುತ್ತೇವೆ. ಆದರೆ ಇದು ಕಠೋಪನಿಷತ್ತಿನ ಪಾಠವಲ್ಲ. ಇದು ಮುಂಡಕ ಉಪನಿಷತ್ತಿನ ಪಾಠ[೧-೨-೮]. "ಅವಿದ್ಯಾಯಾಮಂತರೇ ವೇಷ್ಟ್ಯಮಾನಾಃ" ಎನ್ನುವುದು ಕಠೋಪನಿಷತ್ತಿನ ಪಾಠ. ಅದೇ ರೀತಿ "ದಂದ್ರಮ್ಯಮಾಣಾಃ ಪರಿಯಂತಿ ಮೂಢಾ" ಎನ್ನುವುದು ಕಠೋಪನಿಷತ್ತಿನ ಪಾಠವಾದರೆ "ಜಂಘನ್ಯಮಾನಾಃ ಪರಿಯಂತಿ ಮೂಢಾ" ಎನ್ನುವುದು ಮುಂಡಕ ಉಪನಿಷತ್ತಿನ ಪಾಠ.]

ಮನುಷ್ಯನ ವ್ಯಕ್ತಿತ್ವವನ್ನು ಸುಂದರವಾಗಿ ಮತ್ತು ಕರಾರುವಕ್ಕಾಗಿ ಯಮ ಇಲ್ಲಿ ಚಿತ್ರಿಸಿದ್ದಾನೆ. ಇಂದು ಪ್ರತಿಯೊಬ್ಬನೂ ಕೂಡಾ ಅಜ್ಞಾನದಲ್ಲಿ ಮುಳುಗಿದ್ದಾನೆ. ಸತ್ಯದ ಜ್ಞಾನ ಯಾರಿಗೂ ಇಲ್ಲ. ನಾವು ಎಷ್ಟೇ ಓದಿದ್ದರೂ ಕೂಡಾ, ಜಗತ್ತಿನ ಮೂಲ ರಹಸ್ಯ ಅರಿಯುವುದು ನಮ್ಮಿಂದ ಸಾಧ್ಯವಿಲ್ಲ. ಅಮೆರಿಕಾದ ಭೌತಶಾಸ್ತ್ರಜ್ಞ ಮತ್ತು ವಿಜ್ಞಾನಿ **Fritjof Capra[author of 'The Tao of Physics']**ಹೇಳುವಂತೆ: "ಜಗತ್ತಿನ ಮೂಲ ಸತ್ಯ ಎಂದೂ ವಿಜ್ಞಾನಕ್ಕೆ ತಿಳಿಯುವುದಿಲ್ಲ. ಅದು ಎಂದೆಂದೂ ಅವೇದ್ಯವಾಗಿಯೇ ಉಳಿಯುತ್ತದೆ." ಮಹಾಭಾರತದ ದ್ರೌಪದೀ ವಸ್ತ್ರಾಪಹರಣ ಇದೇ ಸಂದೇಶವನ್ನು ಕೊಡುತ್ತದೆ. ಅಲ್ಲಿ ದುರ್ಯೋಧನ ಮತ್ತು ದುಶ್ಯಾಸನ ಸತ್ಯವನ್ನು ನಿರಾಕರಣೆ ಮಾಡಿ ಪ್ರಕೃತಿ [ದ್ರೌಪದಿ] ಯನ್ನು ಬತ್ತಲೆ ಮಾಡಬೇಕೆಂದು ಪ್ರಯತ್ನಿಸಿದರೂ, ರಹಸ್ಯ ಭೇಧನೆ ಅವರಿಂದ ಅಸಾಧ್ಯವಾಯಿತು. ಆದ್ದರಿಂದ ನಾವು ತಿಳಿಯಬೇಕಾದ ಮೂಲ ಸತ್ಯ ಏನೆಂದರೆ: "ಜಗತ್ತಿನ ಮೂಲ ಸತ್ಯ ನಮಗೆ ತಿಳಿದಿಲ್ಲ" ಎನ್ನುವ ಸತ್ಯ. ಇಲ್ಲಿ ಯಮ ಹೇಳುತ್ತಾನೆ: "ಇಂದು ಪ್ರತಿಯೊಬ್ಬರೂ ಅಜ್ಞಾನದ ಬೇಲಿ ಹಾಕಿಕೊಂಡು ತಾವು ಸುಭದ್ರರು ಎಂದು ತಿಳಿದು ಕುಳಿತಿದ್ದಾರೆ. ಆದರೆ ಅವರು ಮೂಲತಃ ಅಜ್ಞಾನವೆಂಬ ಬೇಲಿಯಿಂದ ತಮ್ಮನ್ನೇ ತಾವು ಸುತ್ತಿಕೊಂಡವರು" ಎಂದು. ಈ ರೀತಿ ಬದುಕುವವರನ್ನು ಇಲ್ಲಿ "ದಂದ್ರಮ್ಯಮಾಣಾಃ" ಎಂದು ವರ್ಣಿಸಲಾಗಿದೆ. ಅಂದರೆ ಮರದಂತೆ ಬದುಕುವವರು ಎಂದರ್ಥ. ಮರವಾಗಿ ಹುಟ್ಟುವ ಜೀವ ಇನ್ನೊಬ್ಬರಿಗೆ ಆಸರೆಯಾಗಿರಬಹುದು. ಆದರೆ ಅಲ್ಲಿ ಆ ಜೀವಕ್ಕೆ ನೂರಾರು ವರ್ಷ ಯಾವ ಭೌದ್ಧಿಕ ವಿಕಾಸವೂ ಇಲ್ಲ. ಹಾಗೇ ಏನೂ ಗೊತ್ತಿಲ್ಲದಿದ್ದರೂ ಕೂಡಾ ಎಲ್ಲಾ ಗೊತ್ತಿದೆ ಎಂದು ತಿಳಿಯುವ ಜನರು ಕುರುಡರ ಬೆನ್ನು ಹತ್ತಿದ ಕುರುಡರ ಸಂತೆಯಂತೆ. ಹಿಂದಿನವರು 'ಕಂಡವರ ಬೆನ್ನು ಹತ್ತು' ಎಂದರೆ -ಇಂದು ನಾವು 'ಕಂಡವರು' ಯಾರು ಎಂದು ಅರಿಯದೇ ಕಂಡಕಂಡವರ ಬೆನ್ನುಹತ್ತಿ ಅಧಃಪಾತವನ್ನು ಹೊಂದುತ್ತಿದ್ದೇವೆ. ಹೀಗೆ ಈ ಶ್ಲೋಕದಲ್ಲಿ ಬಹಳ ರೋಚಕವಾಗಿ ಮನುಷ್ಯ ಸ್ವಭಾವದ ದುರಂತವನ್ನು ಯಮ ವಿವರಿಸಿದ್ದಾನೆ.

> ನ ಸಾಂಪರಾಯಃ ಪ್ರತಿಭಾತಿ ಬಾಲಂ ಪ್ರಮಾದ್ಯಂತಂ ವಿತ್ತಮೋಹೇನ ಮೂಢಮ್ ।
> ಅಯಂ ಲೋಕೋ ನಾಸ್ತಿ ಪರ ಇತಿ ಮಾನೀ ಪುನಃ ಪುನರ್ವಶಮಾಪದ್ಯತೇ ಮೇ ॥೬॥

ಮುಂದುವರಿದು ಯಮ ಹೇಳುತ್ತಾನೆ: ಯಾರು ಬಾಲಿಷರೋ ಅವರಿಗೆ ಸತ್ಯ ತಿಳಿಯುವುದಿಲ್ಲ. ಅವರು ಸದಾ ಕೆಳಕ್ಕೆ ಜಾರುತ್ತಿರುತ್ತಾರೆ. ದುಡ್ಡಿನ ಆಸೆಯಿಂದ ಸದಾ ತಪ್ಪು ಮಾಡುತ್ತಿರುತ್ತಾರೆ. ಯಾರಿಗೆ ವೇದಾಂತ ಹಿಡಿಸುವುದಿಲ್ಲಾ ಅವರು ಬಾಲಿಷರಿರುತ್ತಾರೆ ಮತ್ತು ಬಾಲಿಷರಾದವರಿಗೆ ವೇದಾಂತ ಹಿಡಿಸುವುದಿಲ್ಲ. ಇವರು ದೇವರನ್ನು ಒಪ್ಪಿದರೂ ಕೂಡಾ, ದೇವರ ಬಗ್ಗೆ ಕಾಳಜಿ ಹೊಂದಿರುವುದಿಲ್ಲ. ಇವರು ದುಡ್ಡಿನ ಆಸೆಯಿಂದ ಪರಲೋಕ, ಭಗವಂತ, ಮೋಕ್ಷ ಇತ್ಯಾದಿ ನಂಬಿಕೆಯನ್ನು ಕಳೆದುಕೊಂಡು, ಭ್ರಮೆಗೆ ಬಲಿಬಿದ್ದು, ನನಗೆ ಕಾಣುವುದಷ್ಟೇ ಪ್ರಪಂಚ, ಅದರಿಂದಾಚೆಗೆ

ಏನೂ ಇಲ್ಲಾ ಎಂದು ತಿಳಿದಿರುತ್ತಾರೆ[ಅಥವಾ ಈ ಲೋಕವೂ ಮಿಥ್ಯ, ಪರಲೋಕವೂ ಮಿಥ್ಯ, ನಾನೊಬ್ಬನೇ ಸತ್ಯ ಎಂದು ತಿಳಿದಿರುತ್ತಾರೆ]. ಇದರ ಪರಿಣಾಮ ಇವರು ಹುಟ್ಟು ಸಾವಿನ ಚಕ್ರಭ್ರಮಣದಲ್ಲಿ ಸದಾ ಸುತ್ತುವಂತಾಗುತ್ತದೆ.

ಶ್ರವಣಾಯಾಪಿ ಬಹುಭಿರ್ಯೋ ನ ಲಭ್ಯಃ ಶೃಣ್ವಂತೋಽಪಿ ಬಹವೋ ಯಂ ನ ವಿದ್ಯುಃ ।
ಆಶ್ಚರ್ಯೋ ವಕ್ತಾ ಕುಶಲೋಽಸ್ಯ ಲಬ್ಧಾ ಆಶ್ಚರ್ಯೋ ಜ್ಞಾತಾ ಕುಶಲಾನುಶಿಷ್ಟಃ ॥೭॥

ವೇದಾಂತ ಕೇಳಿ ಸಾಧನೆ ಸಾಧ್ಯ ಎಂದುಕೊಂಡರೆ ಅದು ಅಷ್ಟು ಸುಲಭದ ವಿಷಯವಲ್ಲ. ಇಲ್ಲಿ ಯಮ ಹೇಳುತ್ತಾನೆ: "ಬಹಳ ಸಂದರ್ಭದಲ್ಲಿ ಅಧ್ಯಾತ್ಮವನ್ನು ತಿಳಿಯಬೇಕು ಎಂದುಕೊಂಡರೂ ಹೇಳುವವರು ಸಿಗುವುದಿಲ್ಲ ಮತ್ತು ಹೇಳುವವರಿದ್ದಾಗ ಕೇಳಬೇಕು ಎನಿಸುವುದಿಲ್ಲ" ಎಂದು. ಹೀಗಾಗಿ ಕೇಳುವ ಅವಕಾಶವೇ ಬಹಳ ಮಂದಿಗೆ ಇಡೀ ಜೀವಮಾನದಲ್ಲೇ ಸಿಗುವುದಿಲ್ಲ. ಕೆಲವರಿಗೆ ಕೇಳುವ ಯೋಗವಿರುವುದಿಲ್ಲ, ಇನ್ನು ಕೆಲವರಿಗೆ ಕೇಳಿದರೂ ಅರ್ಥವಾಗುವುದಿಲ್ಲ. ಯಾರಾದರೊಬ್ಬರು ಆಧ್ಯಾತ್ಮದ ಬಗ್ಗೆ, ವೇದೋಪನಿಷತ್ತುಗಳ ಬಗ್ಗೆ ಮಾತನಾಡುತ್ತಾರೆ ಅಂದರೆ ಅದೊಂದು ವಿಸ್ಮಯ. ಅಂತಹ ಶಕ್ತಿ ದೇವರು ಯಾರಿಗಾದರೂ ಕೊಟ್ಟಿದ್ದರೆ ಅದು ಅವನ ಭಾಗ್ಯ. ಹೇಳಿದ್ದನ್ನು ಕೇಳಿಸಿಕೊಳ್ಳುವುದೂ ಒಂದು ಭಾಗ್ಯ, ಕೇಳಿದ್ದು ಅರ್ಥವಾದರೆ ಅದು ಅದ್ಭುತ. ಒಬ್ಬ ನುರಿತ ಶಾಸ್ತ್ರಜ್ಞನಿಂದ ಕೇಳಿ ತಿಳಿದುಕೊಳ್ಳುವುದು ಇನ್ನೊಂದು ಆಶ್ಚರ್ಯ.

ನ ನರೇಣಾವರೇಣ ಪ್ರೋಕ್ತ ಏಷ ಸುವಿಜ್ಞೇಯೋ ಬಹುಧಾ ಚಿಂತ್ಯಮಾನಃ ।
ಅನನ್ಯಪ್ರೋಕ್ತೇ ಗತಿರತ್ರ ನಾಸ್ತಿ ಅಣೀಯಾನ್ ಹ್ಯತರ್ಕ್ಯಮಣುಪ್ರಮಾಣಾತ್ ॥೮॥

ದೇವರ ಬಗ್ಗೆ ಏನೂ ತಿಳುವಳಿಕೆ ಇಲ್ಲದೇ ಮಾತನಾಡುವ ಅನೇಕ ಮಂದಿಯನ್ನು ನಾವು ಪ್ರಪಂಚದಲ್ಲಿ ಕಾಣುತ್ತೇವೆ. ಇವರಿಗೆ ದೇವರ ಬಗ್ಗೆ ಅನುಭೂತಿ ಇರುವುದಿಲ್ಲ. ದೇವರ ಎತ್ತರವನ್ನು ತಿಳಿಯದ ಇವರು ದೇವರನ್ನು ಅವನ ಎತ್ತರಕ್ಕಿಂತ ಕೆಳಗೆಳೆದು ತಪ್ಪಾಗಿ ತಿಳಿಸುತ್ತಾರೆ. ಪ್ರಪಂಚದಲ್ಲಿ ದೇವರ ಬಗ್ಗೆ ಒಬ್ಬೊಬ್ಬರು ಒಂದೊಂದು ರೀತಿ ಮಾತನಾಡುವುದನ್ನು ಕಾಣುತ್ತೇವೆ. ಕಾರಣವೇನೆಂದರೆ ಅವರು ದೇವರನ್ನು ಕಂಡು ಮಾತನಾಡುವವರಲ್ಲ. ಇವರು ದೇವರ ವ್ಯಕ್ತಿತ್ವವನ್ನು ಕುಗ್ಗಿಸಿ ದೇವರನ್ನು ತಮ್ಮ ಸೀಮೆಯಲ್ಲಿ ಕಟ್ಟಿಹಾಕಿ ವಿವರಿಸುತ್ತಾರೆ. ಇಂಥವರಿಂದ ಭಗವಂತನನ್ನು ಅರಿಯಲು ಸಾಧ್ಯವಿಲ್ಲ. ದೇವರ ಬಗ್ಗೆ ಸರಿಯಾದ ತಿಳುವಳಿಕೆ ಇಲ್ಲದೇ 'ನನ್ನಿಂದ ಭಗವಂತ ಅನ್ಯನಲ್ಲ' ಎಂದು ಹೇಳುವವರಿಂದ ಪಾಠ ಕೇಳಿದರೆ ತಿಳುವಳಿಕೆ ಬರುವುದಿಲ್ಲ. ಮಹತೋಮಯನಾದ ಭಗವಂತ ಅಣೋರಣೀಯನೂ ಹೌದು. ಇಂತಹ ಭಗವಂತ ನಮ್ಮ ತರ್ಕಕ್ಕೆ ಎಟುಕುವವನಲ್ಲ.

ನೈಷಾ ತರ್ಕೇಣ ಮತಿರಾಪನೇಯಾ ಪ್ರೋಕ್ತಾಽನ್ಯೇನೈವ ಸುಜ್ಞಾನಾಯ ಪ್ರೇಷ್ಠ ।
ಯಾಂ ತ್ವಮಾಪಃ ಸತ್ಯಧೃತಿರ್ಬತಾಸಿ ತ್ವಾದೃಙ್ನೋ ಭೂಯಾನ್ನಚಿಕೇತಃ ಪ್ರಷ್ಟಾ ॥೯॥

ಭಗವಂತನನ್ನು ತರ್ಕದಿಂದ 'ಇಲ್ಲಾ' ಎಂದು ನಿರಾಕರಣೆ ಮಾಡುವುದಾಗಲೀ, 'ಇದ್ದಾನೆ' ಎಂದು ಸಾಧಿಸಿ ತೋರಿಸುವುದಾಗಲೀ ಸಾಧ್ಯವಿಲ್ಲ. ಆತ್ಮಜ್ಞಾನವನ್ನು ತರ್ಕದಿಂದ ಪಡೆಯುವುದು ಅಸಾಧ್ಯ. ಇದು ಭಗವಂತನ

ಹಿರಿಮೆಯನ್ನರಿತ ಜ್ಞಾನಿಗಳಿಂದ ತಿಳಿಯಲ್ಪಡುವಂತಹದ್ದು ಮತ್ತು ಅನುಭವದಿಂದ ತಿಳಿಯುವಂತಹದ್ದು. ಓ ನಚಿಕೇತಾ, ನೀನು ತರ್ಕದ ಬೆನ್ನು ಹತ್ತಿದವನಲ್ಲ. ಭಗವಂತನ ಬಗೆಗೆ ಭರವಸೆ ಉಳ್ಳವನು ನೀನು. ನಿನ್ನಂತೆ ಅನುಭವದಿಂದ ಆಧ್ಯಾತ್ಮ ತಿಳಿಯಬೇಕು ಎನ್ನುವ ಅಭಿಲಾಷೆಯುಳ್ಳ ವಿದ್ಯಾರ್ಥಿಗಳು ನಮಗೆ ಸಿಗಲಿ ಎಂದು ಯಮ ನಚಿಕೇತನನ್ನು ಪ್ರಶಂಶಿಸಿತ್ತಾನೆ.

ಜಾನಾಮ್ಯಹಂ ಶೇವಧಿರಿತ್ಯನಿತ್ಯಂ ನ ಹ್ಯಧ್ರುವೈಃ ಪ್ರಾಪ್ಯತೇ ಹಿ ಧ್ರುವಂ ತತ್ ।
ತತೋ ಮಯಾ ನಾಚಿಕೇತಶ್ಚಿತೋಽಗ್ನಿಃ ಅನಿತ್ಯೈರ್ದ್ರವ್ಯೈಃ ಪ್ರಾಪ್ತವಾನಸ್ಮಿ ನಿತ್ಯಮ್ ॥೧೦॥

"ಹಣದ ರಾಶಿ ದೊಡ್ಡ ಸಂಪತ್ತಲ್ಲ. ಅದು ನಮ್ಮನ್ನು ಸಾರ್ವಕಾಲಿಕವಾಗಿ ರಕ್ಷಣೆ ಮಾಡುವುದಿಲ್ಲ. ಇನ್ನೊಬ್ಬರಿಗೆ ಕೊಟ್ಟು ಕರಗದ ನಿತ್ಯವಾದ, ನಿರಂತರವಾದ ಶಾಶ್ವತವಾದ ಸಂಪತ್ತೆಂದರೆ ಭಗವಂತನ ಜ್ಞಾನ. ಅದು ಮಾತ್ರ ತಾರಕ ಅನ್ನುವುದು ನನಗೆ ತಿಳಿದಿದೆ" ಎನ್ನುತ್ತಾನೆ ಯಮ. ನಿತ್ಯನಾದ ಭಗವಂತನನ್ನು ಮರೆತವರು, ಭಗವಂತನಲ್ಲಿ ನಂಬಿಕೆ ಇಲ್ಲದೇ ಇದ್ದವರಿಗೆ ಎಷ್ಟು ಶಾಸ್ತ್ರ ಓದಿದರೂ ಭಗವಂತನ ಅರಿವು ಬರುವುದಿಲ್ಲ. ದೇವರನ್ನು ತಿಳಿದುಕೊಳ್ಳಬೇಕು ಅನ್ನುವ ಕಳಕಳಿ ಇಲ್ಲದ ನಾಸ್ತಿಕರು ಯಾವ ಧರ್ಮಗ್ರಂಥ ಓದಿದರೂ ಭಗವಂತ ಅವರಿಗೆ ತಿಳಿಯುವುದಿಲ್ಲ. ದೇವರೇ ಇಲ್ಲಾ ಎಂದು ಸಿದ್ಧಾಂತ ಮಾಡಿಕೊಂಡು ಯಾವ ಅಧ್ಯಯನ ಮಾಡಿದರೂ ಅದನ್ನು ಗ್ರಹಿಸಲು ಸಾಧ್ಯವಿಲ್ಲ. ನಿತ್ಯವಾದ ಸತ್ಯ ಭಗವಂತ. ಅವನನ್ನು ತಿಳಿದುಕೊಳ್ಳಬೇಕು ಎನ್ನುವ ಎಚ್ಚರ ಇಲ್ಲದಿದ್ದರೆ ಆ ನಿತ್ಯಸತ್ಯದ ಅರಿವು ಮೂಡುವುದಿಲ್ಲ. ಆದ್ದರಿಂದ ಭಗವಂತನಲ್ಲಿ ಶ್ರದ್ಧೆ ಇದ್ದವನಿಗೆ ಮಾತ್ರ ಭಗವಂತ ಅರ್ಥವಾಗುವುದು ಸಾಧ್ಯ. ಹಾಗಾಗಿ ನಮಗೆ ಮೊದಲು ನಂಬಿಕೆ ಬೇಕು, ಅದರಿಂದ ತಿಳಿದುಕೊಳ್ಳಬೇಕು ಎನ್ನುವ ಅಭಿಲಾಷೆ, ತಿಳಿದಾಗ ನಮ್ಮ ನಂಬಿಕೆ ಗಟ್ಟಿಯಾಗುತ್ತದೆ. ಇದರಿಂದ ಇನ್ನಷ್ಟು ತಿಳಿಯಲು ಸಾಧ್ಯವಾಗುತ್ತದೆ. "ನಾನೂ ಕೂಡಾ ನಿನಗೆ ಉಪದೇಶ ಮಾಡಿದ ಅಗ್ನಿ ವಿದ್ಯೆಯಿಂದ ಭಗವಂತನನ್ನು ಆರಾಧಿಸಿದೆ. 'ಅ'-ಕಾರ ವಾಚ್ಯನಾದ ಭಗವಂತನನ್ನು ಸದಾ ನನ್ನ ಮನಸ್ಸಿನಲ್ಲಿ ತುಂಬಿಕೊಂಡು, ನನ್ನ ಇಂದ್ರಿಯಗಳನ್ನು ಭಗವಂತನ ಸೇವೆಗೆ ಮೀಸಲಿಟ್ಟೆ. ಇದರಿಂದಾಗಿ ನನ್ನ ಇಂದ್ರಿಯಗಳು ಭಗವಂತನ ಕಡೆಗೆ ಸಾಗಿದವು. ಹೀಗೆ ಅನಿತ್ಯವಾದ ರಥದಲ್ಲಿ ಕುಳಿತು ನಾನು ನಿತ್ಯದತ್ತ ಸಾಗಿ, ಭಗವಂತನ ಅರಿವನ್ನು ಪಡೆದೆ" ಎನ್ನುತ್ತಾನೆ ಯಮ.

ಕಾಮಸ್ಯಾಪ್ತಿಂ ಜಗತಃ ಪ್ರತಿಷ್ಠಾಂ ಕ್ರತೋರಾನಂತ್ಯಮಭಯಸ್ಯ ಪಾರಮ್ ।
ಸ್ತೋಮಂ ಮಹದುರುಗಾಯಂ ಪ್ರತಿಷ್ಠಾಂ ದೃಷ್ಟ್ವಾ ಧೃತ್ಯಾ ಧೀರೋ ನಚಿಕೇತೋಽತ್ಯಸ್ರಾಕ್ಷೀಃ ॥೧೧॥

"ಸತ್ಯವನ್ನು ಪಡೆಯಲು ಬೇಕಾಗಿರುವುದು 'ಜ್ಞಾನವಲ್ಲದೆ ಇನ್ನೇನೂ ಬೇಡ' ಎನ್ನುವ ತನ್ಮಯತೆ. ಅದು ನಿನ್ನಲ್ಲಿದೆ. ನಿನಗೆ ಏನು ಬೇಕೋ ಅದನ್ನು ಕೊಡುತ್ತೇನೆ ಎಂದಾಗ, ನಿನ್ನ ಕಾಲ ಬುಡದಲ್ಲಿ ಎಲ್ಲಾ ಭೋಗಗಳು ಸಿಗುವಂತಿದ್ದರೂ ಸಹ, ಜಗತ್ತನ್ನು ಧಾರಣೆ ಮಾಡಿದ ಆ ಮೂಲಶಕ್ತಿ ಭಗವಂತನನ್ನು ತಿಳಿದುಕೊಳ್ಳುವುದಕ್ಕೋಸ್ಕರ, ಎಲ್ಲಾ ಬಯಕೆಗಳನ್ನು ತೊರೆದೆ ನೀನು" ಎನ್ನುತ್ತಾನೆ ಯಮ.

ಜೀವನವೆಂದರೆ ಭಯದ ಸರಮಾಲೆ. ಪ್ರತಿಯೊಬ್ಬ ಮಾನುಷ್ಯನೂ ಭಯದಿಂದ ಮುಕ್ತಿ ಪಡೆಯಲು ಬಯಸುತ್ತಾನೆ. ಆದರೆ ಆತ ಜೀವನಪರ್ಯಂತ ಭಯದಲ್ಲೇ ಬದುಕುತ್ತಿರುತ್ತಾನೆ. ಭಗವದ್ ವಿಷಯಕವಾದ ಜ್ಞಾನ ಮಾತ್ರ ನಮಗೆ

ಭಯದಿಂದ ಮುಕ್ತಿ ಕೊಡಬಲ್ಲದು. ನಾವು ಎಷ್ಟೇ ವೇದಾಧ್ಯಯನ ಮಾಡಿದರೂ ಭಗವಂತನನ್ನು ಪೂರ್ಣವಾಗಿ ತಿಳಿಯುವುದು ಸಾಧ್ಯವಿಲ್ಲ. ಅಂತಹ ಜಗತ್ತಿಗೆಲ್ಲಾ ಆಸರೆಯಾಗಿರುವ ಭಗವಂತ ನನಗೆ ಆಸರೆಯಾಗಿ ನನ್ನೊಳಗಿದ್ದಾನೆ ಎಂದು ತಿಳಿದಾಗ ಭಯ ದೂರವಾಗಿ ಧೈರ್ಯ ಬರುತ್ತದೆ. ನಾವು ಮಾಡುವ ಪ್ರತಿಯೊಂದು ಕರ್ಮವನ್ನು ಭಗವಂತನ ಅರಿವಿನಿಂದ ಮಾಡಿದಾಗ, ಆ ಕರ್ಮ ಅನಂತ ಫಲವನ್ನು ಕೊಡುತ್ತದೆ. "ಈ ಸತ್ಯವನ್ನು ಅರಿತುದರಿಂದ ನಿನಗೆ ಇಂತಹ ಧೈರ್ಯ ಬಂತು" ಎನ್ನುತ್ತಾನೆ ಯಮ.

ತಂ ದುರ್ದರ್ಶಂ ಗೂಢಮನುಪ್ರವಿಷ್ಟಂ ಗುಹಾಹಿತಂ ಗಹ್ವರೇಷ್ಠಂ ಪುರಾಣಮ್ ।
ಅಧ್ಯಾತ್ಮಯೋಗಾಧಿಗಮೇನ ದೇವಂ ಮತ್ವಾ ಧೀರೋ ಹರ್ಷಶೋಕೌ ಜಹಾತಿ ॥೧೨॥

ಭಗವಂತ ಜ್ಞಾನಾನಂದಗಳ ಮೊತ್ತ. ಅವನನ್ನು ನಮ್ಮ ಹೊರಗಣ್ಣಿನಿಂದ ಕಾಣಲು ಅಸಾಧ್ಯ. ಆತ ಸಮಸ್ತ ಜೀವಗಳ ಹೃದಯಗುಹೆಯಲ್ಲಿ ಗೂಢವಾಗಿ ನೆಲೆಸಿದ್ದಾನೆ. ಇಂತಹ ಭಗವಂತ ಅತ್ಯಂತ ಪುರಾತನ(ಪುರಾಣ). ಅಂದರೆ ಎಲ್ಲಕ್ಕಿಂತ ಪ್ರಾಚೀನ. ಎಲ್ಲವೂ ಇಲ್ಲದಿದ್ದಾಗ ಅವನಿದ್ದ ಹಾಗೂ ಈ ಸೃಷ್ಟಿಯಾದ ಮೇಲೆ ಬ್ರಹ್ಮಾಂಡ-ಪಿಂಡಾಂಡದೊಳಗೆ ಅಂತರ್ಯಾಮಿಯಾಗಿ ಆತ ತುಂಬಿದ. ಇಂತಹ ಅಂತರ್ಯಾಮಿ ಭಗವಂತನನ್ನು ತಿಳಿಯಲು ಇರುವ ಒಂದೇ ಒಂದು ಉಪಾಯವೆಂದರೆ ಅಧ್ಯಾತ್ಮದ ಅರಿವು. ಒಮ್ಮೆ ಭಗವಂತನ ಅರಿವು ಬಂತೆಂದರೆ ಆಗ ನಾವು ಲೌಕಿಕ ಹರ್ಷ-ಶೋಕವನ್ನು ಮೀರಿ ನಿಲ್ಲಬಹುದು. ಇಂತಹ ಸ್ಥಿತಿಯಲ್ಲಿ ಸ್ವರೂಪಾನಂದದ ಸುಖ ಸಿಗುತ್ತದೆ. "ಅಂತಹ ಸ್ಥಿತಿಯನ್ನು ನೀನು ಪಡೆದಿದ್ದೀಯ" ಎಂದು ನಚಿಕೇತನನ್ನು ಯಮ ಪ್ರಶಂಸಿಸುತ್ತಾನೆ.

ಏತಚ್ಛ್ರುತ್ವಾ ಸಂಪರಿಗೃಹ್ಯ ಮರ್ತ್ಯಃ ಪ್ರವೃಹ್ಯ ಧರ್ಮ್ಯಮಣುಮೇತಮಾಪ್ಯ ।
ಸ ಮೋದತೇ ಮೋದನೀಯಂ ಹಿ ಲಬ್ಧ್ವಾ ವಿವೃತಂ ಸದ್ಮ ನಚಿಕೇತಸಂ ಮನ್ಯೇ ॥೧೩॥

ಈ ಶ್ಲೋಕದಲ್ಲಿ 'ಸಂಪರಿಗೃಹ' ಎನ್ನುವ ಪದ ಬಳಕೆಯಾಗಿದೆ. ಪರಿಗ್ರಹ ಎಂದರೆ 'ಆತ್ಮಸಾತ್' ಮಾಡಿಕೊಳ್ಳುವುದು. ಎಲ್ಲವನ್ನೂ ಕೇಳಿ ತಿಳಿದುಕೊಂಡು, ನಿಜವಾದ ದಾರಿ ಯಾವುದೆಂದು ಗುರುತಿಸಿಕೊಂಡು, ಆ ದಾರಿಯಲ್ಲಿ ಹೋಗುವುದು. ಯಾವುದು ಸಮೀಚೀನವಾದದ್ದು ಅದನ್ನು ಗ್ರಹಣ ಮಾಡುವುದು ಸಂಪರಿಗ್ರಹ. ಇದೇ ರೀತಿ ಇಲ್ಲಿ 'ಪ್ರವೃಹ್ಯ' ಎನ್ನುವ ಇನ್ನೊಂದು ಪದ ಬಳಕೆಯಾಗಿದೆ. ಪ್ರವೃಹ್ಯ ಎಂದರೆ ಬೇರ್ಪಡಿಸಿ ತಿಳಿಯುವುದು. ನಮಗೆ ಗೊತ್ತಿರುವ ಪ್ರಪಂಚಕ್ಕಿಂತ ಬೇರೆಯಾದ ಸತ್ಯವನ್ನು ಅರಸುವ ಪ್ರಯತ್ನ; ಜೀವಕ್ಕಿಂತ ಬೇರೆಯಾದ, ಜೀವನನ್ನು ನಿಯಂತ್ರಿಸುವ ಒಂದು ಶಕ್ತಿ ಇದೆ ಎಂದು ಗುರುತಿಸುವುದು ಪ್ರವೃಹ್ಯ.

ಅಧ್ಯಾತ್ಮದ ಸಂಗತಿಯನ್ನು ಕೇಳಿ ತಿಳಿದು, ನಿಜವಾದ ದಾರಿಯನ್ನು ಗುರುತಿಸಿ, ನಮ್ಮ ಮನಸ್ಸು ಗ್ರಹಿಸಬಲ್ಲಂತಹ ಎಲ್ಲಾ ಭೌತಿಕ ಪ್ರಪಂಚವನ್ನು ಬೇರ್ಪಡಿಸಿ, ಅಪ್ರಾಕೃತವಾದ, ಅಭೌತಿಕವಾದ, ನನ್ನ ಜೀವ ಸ್ವರೂಪಕ್ಕಿಂತಲೂ ವಿಲಕ್ಷಣವಾದ ಒಂದು ಶಕ್ತಿಯನ್ನು, ಇಡೀ ಪ್ರಪಂಚವನ್ನು ಧಾರಣೆ ಮಾಡಿರುವ ಭಗವಂತನನ್ನು, ಜ್ಞಾನಿಗಳ ಒಡನಾಟ ಮತ್ತು ಸೇವೆಯಿಂದ ತಿಳಿದಾಗ-ಭಗವಂತನ ಸಾಕ್ಷಾತ್ಕಾರವಾಗುತ್ತದೆ. ಇದು ನಿಜವಾದ ಆನಂದದ ಅನುಭವ. "ನಚಿಕೇತನಿಗೆ ಇಂತಹ ಆನಂದದ ಮನೆಯ ಬಾಗಿಲು ತೆರೆದಿದೆ" ಎನ್ನುತ್ತಾನೆ ಯಮ.

ಅನ್ಯತ್ರ ಧರ್ಮಾದನ್ಯತ್ರಾಧರ್ಮಾ ದನ್ಯತ್ರಾಸ್ಮಾತ್ಕೃತಾಕೃತಾತ್ ।
ಅನ್ಯತ್ರ ಭೂತಾಚ್ಚ ಭವ್ಯಾಚ್ಚ ಯತ್ತತ್ಪಶ್ಯಸಿ ತದ್ವದ ॥೧೪॥

ಇಲ್ಲಿಯ ತನಕ ಯಮನ ಹೊಗಳಿಕೆಯ ಮಾತನ್ನು ಕೇಳಿದ ನಚಿಕೇತ ಹೇಳುತ್ತಾನೆ: ನನಗೆ ನಿನ್ನ ಯಾವ ಹೊಗಳಿಕೆಯ ಮಾತೂ ಬೇಕಾಗಿಲ್ಲ. ನನಗೆ ನಾನು ಕೇಳಿದ ಪ್ರಶ್ನೆಗೆ ಉತ್ತರಬೇಕು. ಪ್ರಪಂಚದಲ್ಲಿ ಧರ್ಮ ಮತ್ತು ಅಧರ್ಮವನ್ನು ಮೀರಿನಿಂತ, ಪಾಪ ಪುಣ್ಯಗಳ ಗೊಂದಲವೇ ಇಲ್ಲದ ಸ್ಥಿತಿಯನ್ನು ನನಗೆ ವಿವರಿಸು. ಕೃತಾಕೃತಗಳಿಂದ ಅತೀತವಾದ, ಧರ್ಮಾಧರ್ಮಗಳಿಂದ ಅತೀತವಾದ, ನೀನು ಕಂಡಿರುವ ತತ್ವದ ಬಗ್ಗೆ ಹೇಳು ಎನ್ನುತ್ತಾನೆ ನಚಿಕೇತ. ಇಲ್ಲಿ ನಚಿಕೇತ ಯಮನ ಹೊಗಳಿಕೆಯಿಂದ ಯಾವುದೇ ರೀತಿ ವಿಚಲಿತನಾಗದೆ, ತನ್ನ ಜ್ಞಾನ ಪಿಪಾಸುವನ್ನು ನೇರವಾಗಿ ಯಮನಲ್ಲಿ ತೋಡಿಕೊಳ್ಳುವುದು ನಮಗೆ ಸ್ಪಷ್ಟವಾಗಿ ಕಾಣುತ್ತದೆ. ನಚಿಕೇತನ ಈ ಧೃಡ ಮನಸ್ಸನ್ನು ಕಂಡ ಯಮ ನೇರವಾಗಿ ಆತನ ಪ್ರಶ್ನೆಗೆ ಉತ್ತರಿಸುವುದನ್ನು ಮುಂದಿನ ಶ್ಲೋಕದಲ್ಲಿ ಕಾಣಬಹುದು.

ಸರ್ವೇ ವೇದಾ ಯತ್ಪದಮಾಮನಂತಿ ತಪಾಂಸಿ ಸರ್ವಾಣಿ ಚ ಯದ್ವದಂತಿ ।
ಯದಿಚ್ಛಂತೋ ಬ್ರಹ್ಮಚರ್ಯಂ ಚರಂತಿ ತತ್ತೇ ಪದಂ ಸಂಗ್ರಹೇಣ ಬ್ರವೀಮ್ಯೋಮಿತ್ಯೇತತ್ ॥೧೫॥

ನಚಿಕೇತನ ಪ್ರಶ್ನೆಗೆ ಉತ್ತರಿಸುತ್ತಾ ಯಮ ಹೇಳುತ್ತಾನೆ: "ಸರ್ವ ವೇದಗಳು ಯಾರನ್ನು ಪ್ರತಿಪಾದಿಸುತ್ತವೋ, ಎಲ್ಲಾ ತರ್ಕಗಳು ಯಾರಲ್ಲಿ ಅಂತ್ಯವಾಗುತ್ತವೋ, ಯಾರನ್ನು ಇಚ್ಛಿಸುತ್ತಾ ಬ್ರಹ್ಮಚರ್ಯವನ್ನು ಆಚರಿಸುತ್ತಾರೋ-ಆ ಪದವನ್ನು ಅಡಕವಾಗಿ ನಿನಗೆ ಹೇಳುತ್ತೇನೆ: ಅದುವೇ 'ಓಂ' " ಎಂದು.

ಇಲ್ಲಿ ಯಮ "ಸರ್ವ ವೇದಗಳೂ ಅಂತತಃ ಹೇಳುವುದು ಸರ್ವೋತ್ತಮನಾದ ಭಗವಂತನನ್ನಲ್ಲದೇ ಇನ್ನೇನನ್ನೂ ಅಲ್ಲ" ಎಂದಿದ್ದಾನೆ. ವೇದದಲ್ಲಿ ಬರುವ 'ಅಗ್ನಿ, ವರುಣ, ಮಿತ್ರ, ವಾಯು, ಇತ್ಯಾದಿ ನಾಮಗಳು ಮೂಲತಃ ಭಗವಂತನ ನಾಮಗಳು. ಇದನ್ನು ನಮಗೆ ತಿಳಿಸುವುದಕ್ಕೋಸ್ಕರವೇ ವೇದವ್ಯಾಸರು ಸಹಸ್ರನಾಮ ಗ್ರಂಥ ರಚನೆ ಮಾಡಿದರು. ದೇವರ ಕುರಿತು ಅನ್ವೇಷಣೆಗೆ ಹೊರಟ ಎಲ್ಲಾ ಭಾಷೆಯ, ಎಲ್ಲಾ ಜಾತಿಯ, ಎಲ್ಲಾ ಗ್ರಂಥಗಳೂ ಕೂಡಾ, ಒಬ್ಬನೇ ಒಬ್ಬ ದೇವರನ್ನು ಹೇಳುತ್ತವೆ. ಪ್ರಪಂಚದ ಎಲ್ಲಾ ಬುದ್ಧಿಜೀವಿಗಳ, ಎಲ್ಲಾ ತರ್ಕಗಳೂ ಕೂಡಾ ದೇವರ ಅಸ್ತಿತ್ವವನ್ನೇ ರುಜುವಾತು ಮಾಡುತ್ತವೆ. ತರ್ಕದ ಪರಿಸಮಾಪ್ತಿ ಕೇವಲ ಭಗವಂತ. ಈ ಕಾರಣದಿಂದ "ಭಗವಂತನನ್ನು ಬಯಸಿ ಬ್ರಹ್ಮಚರ್ಯದಿಂದ ಭಗವಂತನೆಡೆಗೆ ಸಾಗು" ಎನ್ನುತ್ತಾನೆ ಯಮ. [ಇಲ್ಲಿ ಬ್ರಹ್ಮಚರ್ಯ ಎಂದರೆ: (೧) ದೈಹಿಕವಾಗಿ ಇಂದ್ರಿಯ ನಿಗ್ರಹ; (೨) ಭಗವಂತನನ್ನು ತಿಳಿಸುವ ವೇದಾಧ್ಯಯನಕ್ಕಾಗಿ ಇಂದ್ರಿಯ ನಿಗ್ರಹ (೩) ಅಧ್ಯಯನದಿಂದ ಭಗವಂತನೆಡೆಗೆ ಸಾಗುವುದು. ಇತ್ಯಾದಿ.]

ಇಲ್ಲಿ ಯಮ "ಸಮಸ್ತ ವೈದಿಕ ವಾಙ್ಮಯ ಹೇಳುವ, ಭಗವಂತನ ಮಹಿಮೆಯ ಬಿತ್ತರವನ್ನು ಹೇಳುವ ಬೀಜಾಕ್ಷರವನ್ನು ನಿನಗೆ ಹೇಳುತ್ತೇನೆ: ಅದುವೇ 'ಓಂ' " ಎಂದಿದ್ದಾನೆ. 'ಓಂ' ಅನ್ನುವುದು ಕೇವಲ ಭಗವಂತನಿಗೆ ಮೀಸಲಾದ(exclusive) ಹೆಸರು. ಇದನ್ನು ಯಾವ ವ್ಯಕ್ತಿಗಾಗಲೀ, ದೇವತೆಗಳಿಗಾಗಲೀ ಬಳಸುವುದಿಲ್ಲ. ಇದು ಭಗವಂತನ ವಿಶಿಷ್ಠ ನಾಮಧೇಯ. 'ಓಂ' ಸರ್ವ ವೇದವಾಙ್ಮಯದ ಬೀಜಾಕ್ಷರ. ಅದರಲ್ಲಿ ಸಮಸ್ತ ವೇದದ ಸಮಸ್ತ ಅರ್ಥಗಳೂ ಸೇರಿಕೊಂಡಿದೆ. ಜೈನ, ಬೌದ್ಧ ಧರ್ಮದವರಿಗೆ, ಹಿಂದೂ ಧರ್ಮದ ವಿವಿಧ ಕವಲಿನವರಿಗೂ ಕೂಡಾ 'ಓಂ' ಮೂಲ ಬೀಜಾಕ್ಷರ. ವಿದೇಶದವರು ಬಳಸುವ 'ಆಮಿನ್, ಓಮ್ನಿ', ಇತ್ಯಾದಿ ಕೂಡಾ ಮೂಲತಃ ಸಂಸ್ಕೃತದ 'ಓಂ'ನ

ವಿಕಾರ ರೂಪ. ಹೀಗೆ ವಿಶ್ವವ್ಯಾಪಿ ಓಂಕಾರ ಎಲ್ಲಾ ರೂಪದಲ್ಲೂ ಭಗವಂತನನ್ನು ಹೇಳುವ ಶಬ್ದ. ದೇವರನ್ನು ಕುರಿತು ಧ್ಯಾನ ಮಾಡಲು ಒಂದು ಮಂತ್ರ ಬೇಕು ಎಂದರೆ ಅದರಲ್ಲಿ ಅತ್ಯಂತ ಶ್ರೇಷ್ಠವಾದ ಮಂತ್ರ/ಬೀಜಾಕ್ಷರ ಓಂಕಾರ.

ಇಲ್ಲಿ ನಿಮಗೊಂದು ಪ್ರಶ್ನೆ ಮೂಡಬಹುದು. ಭಗವಂತನ ವಿಶೇಷ ನಾಮವಾದ ಓಂಕಾರವನ್ನು ಸ್ತ್ರೀಯರು ಏಕೆ ಹೇಳಬಾರದು ಎಂದು. ಸ್ತ್ರೀಯರು ಓಂಕಾರ ಹೇಳಬಾರದು ಎನ್ನುವುದು ಪೂರ್ಣ ಅವೈಜ್ಞಾನಿಕ. ಓಂ ಎನ್ನುವುದು ಅಕ್ಷರ ಮಾಲಿಕೆಯಲ್ಲಿ ಒಂದು ಅಕ್ಷರ ಕೂಡಾ ಹೌದು. ಯಾವ ಅಕ್ಷರ ಮಾಲಿಕೆಯೂ ಯಾರಿಗೂ ನಿಷಿದ್ಧವಲ್ಲ. ಆದ್ದರಿಂದ 'ಓಂಕಾರವನ್ನು ಎಲ್ಲರೂ ಹೇಳಬಹುದು. ಆದರೆ ಓಂಕಾರ ಜಪ ಮಾತ್ರ ಎಲ್ಲರೂ ಮಾಡುವಂತಿಲ್ಲ. ಕಾರಣ: ಓಂಕಾರದ ಹಿಂದಿರುವ ಎಲ್ಲಾ ಅರ್ಥಾನುಸಂಧಾನದೊಂದಿಗೆ ಜಪ ಮಾಡಿದರೆ ಅದು ಅತ್ಯಂತ ಪರಿಣಾಮಕಾರಿ. ಸಾಮಾನ್ಯವಾಗಿ ಸನ್ಯಾಸಿಗಳು ಓಂಕಾರ ಜಪವನ್ನು ಮಾಡುತ್ತಾರೆ. ಗ್ರಹಸ್ಥನಾದವನು ನಿರಂತರ ಓಂಕಾರ ಜಪ ಮಾಡುವುದು ಅಷ್ಟು ಸೂಕ್ತವಲ್ಲ. ಗಂಡಸರು ಗರಿಷ್ಠ ಹತ್ತು ಬಾರಿ ಮಾಡಬಹುದಾದರೆ, ಸಂಸಾರ ಜೀವನ ನಡೆಸುವ ಹೆಂಗಸರು ಓಂಕಾರ ಜಪ ಮಾಡದಿರುವುದು ಒಳ್ಳೆಯದು. ಏಕೆಂದರೆ ಓಂಕಾರವನ್ನು ಪೂರ್ಣ ತೊಡಗಿಸಿಕೊಂಡು, ಅರ್ಥಾನುಸಂಧಾನದಿಂದ ಜಪ ಮಾಡುವುದರಿಂದ ಅದು ಮನಸ್ಸಿನ ಮೇಲೆ ಮಹತ್ತರವಾದ ಪರಿಣಾಮವನ್ನು ಬೀರುತ್ತದೆ. ಇದು ಒಂದು ರೀತಿಯ ಧ್ಯಾನವಿದ್ದಂತೆ. ಇದರಿಂದ ಮನಸ್ಸು ಮಗ್ನವಾಗಿ, ಸಾಂಸಾರಿಕ ಜೀವನದಲ್ಲಿ ವೈರಾಗ್ಯ ಬರುವ ಅಪಾಯವಿದೆ. ಆದರೆ ಸನ್ಯಾಸಿಗೆ ಈ ರೀತಿಯ ಯಾವ ಸಮಸ್ಯೆಯೂ ಇಲ್ಲ. ಆತ ತನ್ನ ದೇಹ ತಡೆದುಕೊಳ್ಳುವಷ್ಟು(೧೨,೦೦೦) ಬಾರಿ ಓಂಕಾರ ಜಪ ಮಾಡಬಹುದು.

ಏತದ್ಧ್ಯೇವಾಕ್ಷರಂ ಬ್ರಹ್ಮ ಏತದ್ಧ್ಯೇವಾಕ್ಷರಂ ಪರಮ್ ।
ಏತದ್ಧ್ಯೇವಾಕ್ಷರಂ ಜ್ಞಾತ್ವಾ ಯೋ ಯದಿಚ್ಛತಿ ತಸ್ಯ ತತ್ ॥೧೬॥

ಅರ್ಥಗಳಲ್ಲೇ ಮಹಾ ಅರ್ಥವಾದ, ಅಕ್ಷರ ಶಬ್ದ ವಾಚ್ಯನಾದ, ಆ ಪರಬ್ರಹ್ಮ ಭಗವಂತನನ್ನು ಹೇಳುವ ಓಂಕಾರ ಅಕ್ಷರಗಳಲ್ಲೇ ಶ್ರೇಷ್ಠ ಅಕ್ಷರ. ಈ ಶ್ಲೋಕದಲ್ಲಿ ಬಂದ 'ಅಕ್ಷರ' ಪದಕ್ಕೆ ವಿಶೇಷ ಅರ್ಥವಿದೆ. ಭಗವದ್ ಪರವಾಗಿ ನೋಡಿದಾಗ: ಅಶ್ನುತೇ ಇತಿ ಅಕ್ಷರಃ. ಅಂದರೆ ಎಲ್ಲಾ ಕಡೆ ವ್ಯಾಪಿಸಿರುವವ; ಅ+ಕ್ಷರ-ಅಕ್ಷರ. ಅಂದರೆ ನಾಶವಿಲ್ಲದ ತತ್ವ; ಅಧಿಕಂ ಕ್ಷರತಿ ಇತಿ ಅಕ್ಷರಃ. ಅಂದರೆ ಸರ್ವಾಭೀಷ್ಟಪ್ರದ; ಅಕ್ಷ+ರ-ಅಕ್ಷರ. ಅಂದರೆ ಅಕ್ಷಗಳಲ್ಲಿ(ಇಂದ್ರಿಯಗಳಲ್ಲಿ)ದ್ದು, ಅವುಗಳನ್ನು ನಿಯಂತ್ರಿಸುತ್ತಾ ರಮಿಸುವವ; ಅ+ಕ್ಷ+ರ-ಅಕ್ಷರ. ಇಲ್ಲಿ ಅ ಅಂದರೆ ಅಲ್ಲ/ಇಲ್ಲ. ಭಗವಂತನಲ್ಲಿ ಯಾವುದೇ ದೋಷವಿಲ್ಲ. ಅವನು ಈ ಜಗತ್ತಿನಲ್ಲಿ ಕಾಣುವ ಯಾವ ವಸ್ತುವಿನಂತೆಯೂ ಇಲ್ಲ( ಸರ್ವವಿಲಕ್ಷಣ ಹಾಗೂ ಸರ್ವದೋಷ ದೂರ); 'ಕ್ಷ' ಅಂದರೆ ಕ್ಷತಿ ಅಥವಾ ಆಶ್ರಯದಾತ. ಭಗವಂತ ಎಲ್ಲವುದಕ್ಕೂ ಆಶ್ರಯದಾತ; 'ರ' ಅಂದರೆ ರಮಿಸುವುದು. ಸೃಷ್ಟಿ ಮತ್ತು ಸಂಹಾರ ಕರ್ತನಾದ ಭಗವಂತ ಸದಾ ಆನಂದಮಯ. ಇಂತಹ ಓಂಕಾರವಾಚ್ಯ ಭಗವಂತನನ್ನು ತಿಳಿದು ತನ್ಮಯತೆಯಿಂದ ಉಪಾಸನೆ ಮಾಡುವವರು ಬಯಸಿದ್ದನ್ನು ಪಡೆಯುತ್ತಾರೆ.

ಓಂಕಾರ ಬಯಸಿದ್ದನ್ನು ಕೊಡುವ ಕಲ್ಪವೃಕ್ಷ. ಮಂತ್ರಗಳಲ್ಲಿ ಇದಕ್ಕೆ ಸಮನಾದ ಇನ್ನೊಂದು ಪದವಿಲ್ಲ. ಆದರೆ ಇಲ್ಲಿ ಶುದ್ಧ ಮನಸ್ಸು, ಏಕಾಗ್ರತೆ ಬಹಳ ಮುಖ್ಯ. ಫಲ ಕೊಡುವುದು ತುಟಿಯ ಉಚ್ಚಾರವಲ್ಲ, ಮನಸ್ಸಿನ ತನ್ಮಯತೆ. ಇಲ್ಲಿ ಒಂದು ಮುಖ್ಯವಾದ ವಿಚಾರವೆಂದರೆ: ಅನಂತ ಫಲವನ್ನು ಕೊಡುವ ಕಲ್ಪವೃಕ್ಷವಾದ ಓಂಕಾರವನ್ನು ಅಲ್ಪ ಫಲ ಬಯಸಿ ಉಪಾಸನೆ ಮಾಡುವುದು ಸರಿಯಲ್ಲ.

ಏತದಾಲಂಬನಂ ಶ್ರೇಷ್ಠಮೇತದಾಲಂಬನಂ ಪರಮ್ ।
ಏತದಾಲಂಬನಂ ಜ್ಞಾತ್ವಾ ಬ್ರಹ್ಮಲೋಕೇ ಮಹೀಯತೇ ॥೧೭॥

ಸರ್ವಶ್ರೇಷ್ಠನಾದ ಭಗವಂತನೇ ಜಗತ್ತಿಗೆ ಎಲ್ಲವುದಕ್ಕಿಂತ ವಿಲಕ್ಷಣವಾದ, ಸರ್ವಶ್ರೇಷ್ಠ ಆಧಾರ. ಓಂಕಾರದಿಂದ ಉಪಾಸನೆ ಮಾಡಿ, ಈ ಜಗತ್ತಿನ ಆಧಾರಭೂತನಾದ ಭಗವಂತನನ್ನು ಕೃತಜ್ಞತೆಯಿಂದ ತಿಳಿದರೆ "ನಿನ್ನೆಲ್ಲಾ ಸಂಸಾರ ಬಂಧವನ್ನು ಕಳಚಿಕೊಂಡು ವೈಕುಂಠದಲ್ಲಿ ಭಗವಂತನನ್ನು ಸೇರುತ್ತೀಯ" ಎಂದಿದ್ದಾನೆ ಯಮ.

ನ ಜಾಯತೇ ಮ್ರಿಯತೇ ವಾ ವಿಪಶ್ಚಿನ್ನಾಯಂ ಕುತಶ್ಚಿನ್ನ ಬಭೂವ ಕಶ್ಚಿತ್ ।
ಅಜೋ ನಿತ್ಯಃ ಶಾಶ್ವತೋಽಯಂ ಪುರಾಣೋ  ನ ಹನ್ಯತೇ ಹನ್ಯಮಾನೇ ಶರೀರೇ ॥೧೮॥

ಭಗವಂತನನ್ನು ಜ್ಞಾನದ ಕಣ್ಣಿನಿಂದ ಕಂಡ ಅಪರೋಕ್ಷ ಜ್ಞಾನಿ ಹುಟ್ಟು ಸಾವಿನಿಂದ ಮುಕ್ತನಾಗುತ್ತಾನೆ. ಮೋಕ್ಷವನ್ನು ಪಡೆದ ಜೀವ ಮುಂದೆಂದೂ ದೈಹಿಕವಾಗಿ ಹುಟ್ಟು-ಸಾವಿಗೊಳಗಾಗುವುದಿಲ್ಲ. ನಮ್ಮ ಹೃತ್ಕಮಲದಲ್ಲಿ ನೆಲೆಸಿರುವ ಭಗವಂತನಿಗೆ ಹುಟ್ಟು-ಸಾವುಗಳಿಲ್ಲ. ಆದ್ದರಿಂದ ಭಗವಂತನನ್ನು ಸಾಕ್ಷಾತ್ಕರಿಸಿಕೊಂಡವನೂ ಕೂಡಾ, ದೇಹದಿಂದಲೂ ಹುಟ್ಟು-ಸಾವು ಹೊಂದುವುದಿಲ್ಲ. ಅಸಾಧಾರಣವಾದ ಈ ಸ್ಥಿತಿ ಸಿಗುವುದು  ಭೌತಿಕ ದೇಹ ತ್ಯಾಗ ಮಾಡಿ ಮೋಕ್ಷವನ್ನು ಸೇರಿದಾಗ ಮಾತ್ರ.

ವಸ್ತುತಃ ಜೀವಸ್ವರೂಪಕ್ಕೆ ಎಂದೂ ಹುಟ್ಟು-ಸಾವುಗಳಿಲ್ಲ. ನಾವು ಕಾಣುವ ಹುಟ್ಟು-ಸಾವು ಕೇವಲ ಭೌತಿಕ ಶರೀರಕ್ಕೆ ಸಂಬಂಧಪಟ್ಟಿದ್ದು. ಹುಟ್ಟುವುದು ಒಂದು ವಿಕಾರ, ಸಾಯುವುದು ಇನ್ನೊಂದು ಬದಲಾವಣೆ ಅಷ್ಟೇ. ಒಬ್ಬ ವ್ಯಕ್ತಿ ಸತ್ತಾಗ ಅವನ ದೇಹ ನಾಶವಾಗುವುದೇ ಹೊರತು ಆತನ ಜೀವ ನಾಶವಾಗುವುದಿಲ್ಲ. ಅನಾದಿ-ಅನಂತವಾಗಿರುವ ಜೀವ ತನ್ನ ಪುರವನ್ನು(ದೇಹವನ್ನು) ಬದಲಿಸುವುದೇ ನಾವು ಕಾಣುವ ಹುಟ್ಟು-ಸಾವು.  ಮೋಕ್ಷದಲ್ಲಿ ಇಂತಹ ನಾಶವಾಗುವ ದೇಹವಿಲ್ಲ. ಆದ್ದರಿಂದ ದೇಹ ನಾಶವೂ ಇಲ್ಲದ ಸ್ಥಿತಿ ಮೋಕ್ಷ.

ಹಂತಾ ಚೇನ್ಮನ್ಯತೇ ಹಂತುಂ ಹತಶ್ಚೇನ್ಮನ್ಯತೇ ಹತಮ್ ।
ಉಭೌ ತೌ ನ ವಿಜಾನೀತೋ ನಾಯಂ ಹಂತಿ ನ ಹನ್ಯತೇ ॥೧೯॥

ಒಬ್ಬ ಕೊಲೆಗಡುಕ ಇನ್ನೊಬ್ಬನನ್ನು ಕೊಂದೆ ಎಂದುಕೊಂಡರೆ, ಯಾರೋ ಒಬ್ಬ ಸತ್ತಾಗ ಇನ್ನೊಬ್ಬ ಇವನು ಸತ್ತ ಎಂದು ತಿಳಿದುಕೊಂಡರೆ- ಇವರೆಲ್ಲರನ್ನೂ ಭ್ರಮೆಗೊಳಗಾದವರು ಎನ್ನಬಹುದು. ಕೇವಲ ದೇಹ ನಾಶವಾದಾಗ ಆ ಜೀವವೇ ನಾಶವಾಯಿತು ಎಂದು ತಿಳಿದುಕೊಳ್ಳುವುದು ನಮ್ಮ ಭ್ರಮೆ. ದೇಹ ನಾಶ ಕೂಡಾ ಭಗವಂತನ ಇಚ್ಛೆ ಇಲ್ಲದೇ ಸಾಧ್ಯವಿಲ್ಲ. ಏಕೆಂದರೆ ನಮ್ಮ ಜೀವಸ್ವರೂಪದೊಳಗೆ ಭಗವಂತನಿದ್ದಾನೆ.

ಅಣೋರಣೀಯಾನ್ ಮಹತೋ ಮಹೀಯಾನ್ ಆತ್ಮಾಸ್ಯ ಜಂತೋರ್ನಿಹಿತೋ ಗುಹಾಯಾಮ್ ।
ತಮಕ್ರತುಃ ಪಶ್ಯತಿ ವೀತಶೋಕೋ  ಧಾತುಪ್ರಸಾದಾನ್ಮಹಿಮಾನಮಾತ್ಮನಃ ॥೨೦॥

ಮಹತೋಮಯನಾದ ಭಗವಂತ ಅಣೋರಣೀಯನಾಗಿ ಜೀವ ಸ್ವರೂಪದ ಹೃದಯಗುಹೆಯಲ್ಲಿ ನೆಲೆಸಿದ್ದಾನೆ. ದೈಹಿಕವಾಗಿ ಪದೇ ಪದೇ ಹುಟ್ಟಿ ಸಾಯುವ ಜೀವ, ಸಾವನ್ನು ಗೆಲ್ಲಬೇಕಾದರೆ ಮೊದಲು ತನ್ನ ಅಂತರಾತ್ಮದಲ್ಲಿರುವ ಆ ಪರಮಾತ್ಮನನ್ನು ಕಾಣಬೇಕು. ಯಾರ ಮನಸ್ಸು ನಿಶ್ಚಯವಾಗಿ ಅ-ಕಾರವಾಚ್ಯನಾದ ಭಗವಂತನಲ್ಲಿ ನೆಲೆಗೊಳ್ಳುತ್ತದೋ ಅವನು ಎಲ್ಲಾ ಶೋಕಗಳಿಂದಲೂ ಮುಕ್ತನಾಗುತ್ತಾನೆ. ಆದ್ದರಿಂದ ಪ್ರಾಪಂಚಿಕ ವಿಷಯದಲ್ಲಿ ಮನಸ್ಸನ್ನು ನೆಟ್ಟು ದುಃಖಿಸುವುದಕ್ಕಿಂತ, ಭಗವಂತನಲ್ಲಿ ಮನಸ್ಸನ್ನು ನೆಲೆಗೊಳಿಸಿ ಚಿಂತೆಯಿಂದ ಪಾರಾಗಬಹುದು. ನಮ್ಮೊಳಗಿದ್ದು ನಮ್ಮನ್ನು ಧಾರಣೆ ಮಾಡಿರುವ ಆ ಭಗವಂತ ಅನುಗ್ರಹಿಸಿದರೆ ಮಾತ್ರ ನಾವು ಅವನನ್ನು ತಿಳಿಯಲು ಸಾಧ್ಯ. ಈ ರೀತಿ ಭಗವಂತನನ್ನು ತಿಳಿದವನು ಭಗವಂತನನ್ನು ಸೇರಬಲ್ಲ. "ಭಗವಂತನ ಅನುಗ್ರಹದಿಂದ ಒಳಗಣ್ಣಿನಿಂದ ಆತನನ್ನು ನೋಡು, ಅದರಿಂದ ದುಃಖರಹಿತ ಮೋಕ್ಷ ಸಿಗುತ್ತದೆ" ಎಂದು ಯಮ ನಚಿಕೇತನಿಗೆ ಉಪದೇಶ ಮಾಡುತ್ತಾನೆ.

ಆಸೀನೋ ದೂರಂ ವ್ರಜತಿ ಶಯಾನೋ ಯಾತಿ ಸರ್ವತಃ ।
ಕಸ್ತಂ ಮದಾಮದಂ ದೇವಂ ಮದನ್ಯೋ ಜ್ಞಾತುಮರ್ಹತಿ ॥೨೧॥

ಭಗವಂತ ಎಲ್ಲಿಯೋ ಒಂದು ಕಡೆ ಇರುತ್ತಾನೆ. ಆದರೆ ಅಲ್ಲಿರುವುದು ಮಾತ್ರವಲ್ಲ, ಅಲ್ಲಿಂದ ದೂರ ಹೋದರೆ ಅಲ್ಲಿಯೂ ಇರುತ್ತಾನೆ. ಸ್ಥೂಲವಾಗಿ ನೋಡಿದರೆ ಆಕಾಶದಂತೆ. ಮೂಲರೂಪದಲ್ಲಿ ನಿತ್ಯ ದೃಷ್ಟನಾಗಿ ವೈಕುಂಠಾದಿ ಸ್ಥಾನಗಳಲ್ಲಿ ಆಸೀನ. ಆದರೆ ಅಲ್ಲಿದ್ದುಕೊಂಡೇ ಇನ್ನೊಂದು ಕಡೆ ಹೋಗುತ್ತಾನೆ ಭಗವಂತ. ಇದು ಭಗವಂತನ ಸರ್ವಶಕ್ತ, ಮತ್ತು ಸರ್ವವ್ಯಾಪ್ತ ಗುಣವನ್ನು ಹೇಳುತ್ತದೆ.[ಇಲ್ಲಿ ಆಕಾಶ ಕೇವಲ ಸ್ಥೂಲ ದೃಷ್ಟಾಂತ ಅಷ್ಟೇ. ಆಕಾಶ ಕೇವಲ ಸರ್ವವ್ಯಾಪ್ತ ಆದರೆ ಸರ್ವಸಮರ್ಥವಲ್ಲ]. ನಮ್ಮ ಹೃದಯಗುಹೆಯೊಳಗೆ ಅಣೋರಣೀಯನಾಗಿ ಮಲಗಿರುವ ಭಗವಂತ, ಮಹತೋಮಯನಾಗಿ ಎಲ್ಲೆಡೆ ತುಂಬಿದ್ದಾನೆ. ಜೀವಜಾತಗಳಿಗೆ ಜೀವಸ್ವಭಾವದ ಯೋಗ್ಯತೆಗೆ ತಕ್ಕಂತೆ ಆನಂದ ಮತ್ತು ದುಃಖ ಕೊಡುವವನು ಭಗವಂತ. ಇಂತಹ ಭಗವಂತನ ಈ ವಿಶೇಷ ಗುಣವನ್ನು ನನ್ನಿಂದ ಕೆಳಗಿರುವ ಯಾವ ಮಾನವನೂ ತಿಳಿದಿರಲು ಸಾಧ್ಯವಿಲ್ಲ. [ಇಲ್ಲಿ ಬಂದಿರುವ 'ಕಃ' ಪದ ಬ್ರಹ್ಮ, ವಾಯುವನ್ನು ಸೂಚಿಸುತ್ತದೆ. "ನನ್ನಿಂದ ಎತ್ತರದಲ್ಲಿರುವ ದೇವತೆಗಳಷ್ಟೇ ತಿಳಿದಿರಲು ಸಾಧ್ಯ" ಎನ್ನುವುದು ಇಲ್ಲಿ ಕಾಣುವ ಇನ್ನೊಂದು ಅರ್ಥ]. "ನಿನಗೆ ಈ ಜ್ಞಾನವನ್ನು ತಿಳಿಯುವ ಭಾಗ್ಯವಿತ್ತು ಆದ್ದರಿಂದ ನೀನು ನನ್ನ ಬಳಿ ಬಂದೆ. ನೀನು ಭಾಗ್ಯಶಾಲಿ. ಮನುಷ್ಯ ಲೋಕದಲ್ಲಿ ಇದಕ್ಕಿಂತ ಹೆಚ್ಚಿನ ರಹಸ್ಯವನ್ನು ಅರ್ಥ ಮಾಡಿಕೊಳ್ಳುವುದು ಸಾಧ್ಯವಿಲ್ಲ. ಸಾಮಾನ್ಯವಾಗಿ ಯಾರಿಗೂ ಅರಿವಾಗದ ರಹಸ್ಯವನ್ನು ನಾನು ತಿಳಿದುಕೊಂಡೆ ಹಾಗೂ ನಿನಗೆ ಕೊಟ್ಟೆ. ಮನುಷ್ಯಲೋಕದಲ್ಲಿ ಇಂತಹ ಅರಿವನ್ನು ಮೊದಲು ತಿಳಿದವನು ನೀನು, ಕೊಟ್ಟವನು ನಾನು ಎನ್ನುತ್ತಾನೆ ಯಮ.

ಅಶರೀರಂ ಶರೀರೇಷ್ವನವಸ್ಥೇಷ್ವವಸ್ಥಿತಮ್ ।
ಮಹಾಂತಂ ವಿಭುಮಾತ್ಮಾನಂ ಮತ್ವಾ ಧೀರೋ ನ ಶೋಚತಿ ॥೨೨॥

ಎಲ್ಲರನ್ನೂ ಕಾಡುವ ಒಂದು ಸರ್ವೇ ಸಾಮಾನ್ಯವಾದ ಪ್ರಶ್ನೆ ಎಂದರೆ: ದೇವರಿಗೆ ಶರೀರ/ಆಕಾರವಿದೆಯೋ ಎನ್ನುವುದು. ಈ ಶ್ಲೋಕ ನಮ್ಮ ಪ್ರಶ್ನೆಗೆ ಉತ್ತರ ರೂಪದಲ್ಲಿದೆ:

ದೇವರಿಗೆ ಶರೀರವಿಲ್ಲ, ಆಕಾರವಿಲ್ಲ. ಆದರೆ ಆತ ಎಲ್ಲರ ಶರೀರದೊಳಗೂ ಇದ್ದಾನೆ. ನಮಗೆ ಒಂದು ಶರೀರವಾದರೆ – ಎಲ್ಲಾ ಶರೀರವೂ ಅವನ ಶರೀರ! ಈ ರೀತಿ ಎಲ್ಲಾ ಶರೀರದಲ್ಲೂ ಇರುವ ಭಗವಂತನಿಗೆ ಆ ಶರೀರದ ಲೋಪವಾಗಲೀ, ದುಃಖಾನುಭವವಾಗಲೀ, ಅಭಿಮಾನವಾಗಲೀ ಇಲ್ಲ. ಆದ್ದರಿಂದ ಭಗವಂತ ಅಶರೀರ. ನಮ್ಮ ಶರೀರಕ್ಕೆ ನೆಲೆ ಇಲ್ಲ. ಒಂದು ದಿನ ಬಿದ್ದು ಹೋಗುವ ಈ ಶರೀರ ಗಟ್ಟಿಯಾಗಿ ನಿಲ್ಲುವಂತಹುದಲ್ಲ. ಇಂತಹ ನೆಲೆ ಇಲ್ಲದ ಶರೀರದಲ್ಲಿ ನೆಲೆಸಿ, ಅದಕ್ಕೊಂದು ನೆಲೆ ಕೊಟ್ಟು, ನಿಲ್ಲಲಾಗದ ದೇಹವನ್ನು ನಿಲ್ಲುವಂತೆ ಮಾಡಿ, ಚಲಿಸಲಾಗದ ದೇಹವನ್ನು ಚಲಿಸುವಂತೆ ಮಾಡುವವ ಆ ಭಗವಂತ. ಇಂತಹ ಭಗವಂತ ದೇಹದಿಂದ ಹೊರಟು ಹೋದಾಗ ಈ ಶರೀರ ಬಿದ್ದು ಹೋಗುತ್ತದೆ.

ಶರೀರದಲ್ಲಿ ವಾಸಿಸುವ ಭಗವಂತ ಶರೀರದ ಪರಿಮಿತಿಯಲ್ಲಿಲ್ಲ. ಅವನು 'ಮಹಾಂತ'. ದೇಹದೊಳಗಿರುವ ಭಗವಂತ ದೇಹ ಬಿದ್ದು ಹೋದಾಗ ಬಿದ್ದು ಹೋಗುವುದಿಲ್ಲ. ಏಕೆಂದರೆ ದೇಹ ಬಿದ್ದು ಹೋದಾಗ ದೇಹದ ಒಳಗಿರುವ ಭಗವಂತ ಮತ್ತು ಹೊರಗಿರುವ ಭಗವಂತ ಏಕರೂಪನಾಗುತ್ತಾನೆ ಅಷ್ಟೇ. "ಇಂತಹ ಭಗವಂತ ವಿಭುಃ" ಎನ್ನುತ್ತಾನೆ ಯಮ. ಅಂದರೆ ಆತ ಸರ್ವಗತ, ಸರ್ವಸಮರ್ಥ ಮತ್ತು ಅನೇಕ ರೂಪ(ವಿವಿದೋ ಭವತಿ). ಆತ ಎಲ್ಲಾ ಜೀವ ಜಂತುಗಳಲ್ಲೂ ನಿಂತು ನಡೆಸುತ್ತಿದ್ದಾನೆ. ನಮ್ಮೊಳಗೆ ಅಂತರ್ಯಾಮಿಯಾಗಿದ್ದು, ನಮ್ಮನ್ನು ನಿಯಮಿಸುವ ನಮ್ಮ ಸ್ವಾಮಿ ಆ ಭಗವಂತನ ಅರಿವು ಯಾರಿಗಿದೆಯೋ, ಅವನಿಗೆ ಎಂದೂ ಭಯ-ಶೋಕವಿರುವುದಿಲ್ಲ.

ಇಂತಹ ಭಗವಂತನನ್ನು ಸಾಮಾನ್ಯ ಮಾನವ ಹೇಗೆ ತಿಳಿಯಬೇಕು ಎನ್ನುವುದನ್ನು ಮುಂದಿನ ಶ್ಲೋಕದಲ್ಲಿ ಯಮ ಬಹಳ ಸುಂದರವಾಗಿ ವರ್ಣಿಸಿದ್ದಾನೆ.

ನಾಯಮಾತ್ಮಾ ಪ್ರವಚನೇನ ಲಭ್ಯೋ ನ ಮೇಧಯಾ ನ ಬಹುನಾ ಶ್ರುತೇನ ।
ಯಮೇವೈಷ ವೃಣುತೇ ತೇನ ಲಭ್ಯಃ ತಸ್ಯೈಷ ಆತ್ಮಾ ವಿವೃಣುತೇ ತನುಂ ಸ್ವಾಮ್ ॥೨೩॥

ಕೇವಲ ಪ್ರವಚನ ಮಾಡುವುದರಿಂದ, ಪ್ರವಚನ ಕೇಳುವುದರಿಂದ, ಅಸಾಧಾರಣ ಸ್ಮರಣಶಕ್ತಿ ಹೊಂದಿರುವುದರಿಂದ ಭಗವಂತನ ಸಾಕ್ಷಾತ್ಕಾರವಾಗುವುದಿಲ್ಲ. ಅಧ್ಯಯನದ ಅಹಂಕಾರವಿದ್ದಲ್ಲಿ ಭಗವಂತ ಎಂದೂ ತೆರೆದುಕೊಳ್ಳುವುದಿಲ್ಲ. ಯಾರನ್ನು ಭಗವಂತ "ಇವನು ನನ್ನ ಭಕ್ತ, ನನ್ನ ಆತ್ಮೀಯ, ಇವನಿಗೆ ತತ್ವಜ್ಞಾನದ ಅರಿವು ಬರಲಿ" ಎಂದು ಸ್ವೀಕಾರ ಮಾಡುವುದಿಲ್ಲವೋ, ಅಲ್ಲಿಯ ತನಕ ಭಗವಂತ ಅವರಿಗೆ ತಿಳಿಯಲಾರ. ಯಾವಾಗ ಭಗವಂತ ಪ್ರಸನ್ನನಾಗುತ್ತಾನೋ, ಆಗ ಆತ ನಮ್ಮ ತಲೆಯಲ್ಲಿ ಬಂದು ಕೂರುತ್ತಾನೆ. ಅಹಂಕಾರವಿಲ್ಲದ ತನ್ಮಯತೆ, ಭಕ್ತಿಗೆ ಭಗವಂತ ತೆರೆದುಕೊಳ್ಳುತ್ತಾನೆ. ಆಗ ಆತನ ಜ್ಞಾನಾನಂದಮಯವಾದ ಸ್ವರೂಪ ದರ್ಶನ ನಮ್ಮ ಆತ್ಮಸ್ವರೂಪಕ್ಕಾಗುತ್ತದೆ.

ನಾವಿರತೋ ದುಶ್ಚರಿತಾನ್ನಾಶಾಂತೋ ನಾಸಮಾಹಿತಃ ।
ನಾಶಾಂತಮಾನಸೋ ವಾಽಪಿ ಪ್ರಜ್ಞಾನೇನೈನಮಾಪ್ನುಯಾತ್ ॥೨೪॥

ಇಲ್ಲಿ ವಿವರಿಸಿದ ಈ ವಿದ್ಯೆಯನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಉಪಾಸನೆ ಮಾಡಿ ಎತ್ತರಕ್ಕೇರಬೇಕಾದರೆ ನಮ್ಮಲ್ಲಿರಬೇಕಾದ ಅರ್ಹತೆಗಳೇನು ಎನ್ನುವುದನ್ನು ಯಮ ಇಲ್ಲಿ ವಿವರಿಸಿದ್ದಾನೆ. ಒಬ್ಬ ಮನುಷ್ಯ ಜ್ಞಾನವನ್ನು ಗಳಿಸಿ,

ದೊಡ್ಡ ವಿಜ್ಞಾನಿ(ವಿಶಿಷ್ಠ ಜ್ಞಾನಿ)ಯಾಗಿ, ಜ್ಞಾನದ ಎತ್ತರಕ್ಕೇರಿದರೂ(ಪ್ರಜ್ಞಾನ) ಕೂಡಾ, ಅಲ್ಲಿ ಭಕ್ತಿ ಇಲ್ಲದಿದ್ದರೆ ಭಗವಂತನನ್ನು ಸೇರಲು ಸಾಧ್ಯವಿಲ್ಲ. ಎಷ್ಟೇ ಶಾಸ್ತ್ರ ಪಾರಾಂಗತರಾದರೂ ಕೂಡಾ, ನಮ್ಮ ಜೀವನದಲ್ಲಿ ಕೆಲವು ನಿಯತ್ತು/ಶಿಸ್ತನ್ನು ಅಳವಡಿಸಿಕೊಳ್ಳದೇ ನಾವು ಭಗವಂತನ ಅನುಗ್ರಹಕ್ಕೆ ಪಾತ್ರರಾಗಲು ಸಾಧ್ಯವಿಲ್ಲ. ಯಾವುದು ಸಾಮಾಜಿಕವಾಗಿ ಅನ್ಯಾಯವೋ, ಯಾವುದನ್ನು ಶಾಸ್ತ್ರಗಳು ಅಧರ್ಮ ಎಂದು ಕರೆಯುತ್ತವೋ, ಅದನ್ನು ನಾವು ಮೊದಲು ಬಿಡಬೇಕು. ನಮ್ಮ ನಡತೆ ಸ್ವಚ್ಛವಿಲ್ಲದಿದ್ದರೆ ನಮ್ಮ ಯಾವ ಪಾಂಡಿತ್ಯವೂ ನಮ್ಮನ್ನು ಉದ್ಧಾರ ಮಾಡುವುದಿಲ್ಲ. ಜೀವನದಲ್ಲಿ ನಾವು ತಪ್ಪು ಮಾಡಿರಬಹುದು, ಆದರೆ ಆ ತಪ್ಪಿನ ಅರಿವಾದಾಗ, ಹಿಂದಿನ ಘಟನೆಗಳನ್ನು ಮೆಲುಕು ಹಾಕುತ್ತಾ ಕುಳಿತುಕೊಳ್ಳುವ ಬದಲು, ಮುಂದೆ ನಮ್ಮಿಂದ ಅಂತಹ ತಪ್ಪು ಘಟಿಸದಂತೆ ಎಚ್ಚರವಹಿಸಿ ಬದುಕಬೇಕು. ಎಲ್ಲಿಯ ತನಕ ನಾವು ನಮ್ಮ ನಡತೆಯಲ್ಲಿನ ದೋಷವನ್ನು ತಿದ್ದಿಕೊಳ್ಳುವುದಿಲ್ಲವೋ, ಅಲ್ಲಿಯ ತನಕ ಭಗವಂತ ಅನುಗ್ರಹಿಸುವುದಿಲ್ಲ.

ಎಲ್ಲಕ್ಕೂ ಮಿಗಿಲಾಗಿ ನಮಗೆ ದೇವರ ಮೇಲೆ ನಂಬಿಕೆ ಇರಬೇಕು. ಮೊದಲು ನಾವು ಭಗವಂತನನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಬೇಕು. ಪ್ರಾಮಾಣಿಕ ನಡೆ, ಅಂತರಂಗದಲ್ಲಿ ನಿಶ್ಚಲವಾದ ಭಗವನ್ ನಿಷ್ಠೆ - ಇವು ಅಧ್ಯಾತ್ಮ ಸಾಧನೆ ಮಾಡುವವರಲ್ಲಿ ಇರಬೇಕಾದ ಮೂಲ ಅರ್ಹತೆ.

ಶಾಂತವಾದ, ದೃಡವಾದ, ಗೊಂದಲಕ್ಕೊಳಗಾಗದ, ಸ್ಥಿರವಾದ ಮನಸ್ಸು; ಅಚಲವಾದ ಭಗವನ್ ನಿಷ್ಠೆ; ಪ್ರಾಮಾಣಿಕ ನಡತೆ-ಇವು ಭಗವಂತನ ಅನುಗ್ರಹ ಪಡೆಯಲು ಬೇಕಾದ ಅರ್ಹತೆಗಳು. ಇದಿಲ್ಲದಿದ್ದರೆ ಅಧ್ಯಾತ್ಮದಲ್ಲಿ ತತ್ವಜ್ಞಾನ ಸಿದ್ಧಿಸುವುದಿಲ್ಲ.

ಯಸ್ಯ ಬ್ರಹ್ಮ ಚ ಕ್ಷತ್ರಂ ಚ ಉಭೇ ಭವತ ಓದನಃ ।
ಮೃತ್ಯುರ್ಯಸ್ಯೋಪಸೇಚನಂ ಕಃ ಇತ್ಥಾ ವೇದ ಯತ್ರ ಸಃ ॥೨೫॥

ಭಗವಂತನಿಗೆ ಇಡೀ ವಿಶ್ವ ಪ್ರಳಯ ಕಾಲದಲ್ಲಿ ಒಂದು ತುತ್ತು ಅನ್ನವಿದ್ದಂತೆ. ಬ್ರಾಹ್ಮಣ ವರ್ಣದ ಅಭಿಮಾನಿ ದೇವತೆ ಚತುರ್ಮುಖ ಬ್ರಹ್ಮ, ಕ್ಷತ್ರೀಯ ವರ್ಣದ ಅಭಿಮಾನಿ ದೇವತೆಯಾದ ವಾಯುದೇವರು ಭಗವಂತನಿಗೆ ಪ್ರಳಯಕಾಲದಲ್ಲಿ ಒಂದು ತುತ್ತು ಅನ್ನ. ಮೃತ್ಯು(ಗರುಡ-ಶೇಷ-ರುದ್ರರು), ಭೂಲೋಕದಲ್ಲಿರುವ ಎಲ್ಲಾ ಜೀವರಿಗೂ ಮೃತ್ಯುವಾಗಿರುವ ಯಮ- ಪ್ರಳಯಕಾಲದಲ್ಲಿ ಭಗವಂತನಿಗೆ ಊಟಕ್ಕೆ ಕಲಸಿಕೊಳ್ಳುವ ವ್ಯಂಜನವಿದ್ದಂತೆ. "ಇಂತಹ ಭಗವಂತನ ಎತ್ತರವನ್ನು ಅರಿತವರು ಯಾರಿದ್ದಾರೆ ?" ಎನ್ನುತ್ತಾನೆ ಯಮ. ಭಗವಂತನ ಸಮಗ್ರ ದರ್ಶನದ ಕಿಂಚಿತ್ ಅರಿವು ಇರುವುದಾದರೆ ಆ ಬ್ರಹ್ಮ-ವಾಯುವಿಗೆ(ಕಃ) ಮಾತ್ರ. "ಇಂತಹ ಭಗವಂತನ ಬಗೆಗೆ ನನಗೆ ತಿಳಿದಿರುವುದನ್ನು ನಿನಗೆ ಹೇಳುತ್ತೇನೆ" ಎನ್ನುವ ಭಾವ ಈ ಶ್ಲೋಕದಲ್ಲಿ ವ್ಯಕ್ತವಾಗಿದೆ.

॥ ಇತಿ ಕಾಠಕೋಪನಿಷದಿ ಪ್ರಥಮಾಧ್ಯಾಯೇ ದ್ವಿತೀಯಾ ವಲ್ಲೀ ॥
ಇಲ್ಲಿಗೆ ಕಾಠಕೋಪನಿಷತ್ತಿನ ಮೊದಲ ಅಧ್ಯಾಯದ ಎರಡನೇ ಬಳ್ಳಿ(ವಲ್ಲೀ) ಮುಗಿಯಿತು.

# ವಲ್ಲೀ-೩

ಋತಂ ಪಿಬಂತೌ ಸುಕೃತಸ್ಯ ಲೋಕೇ ಗುಹಾಂ ಪ್ರವಿಷ್ಟೌ ಪರಮೇ ಪರಾರ್ಧೇ ।
ಛಾಯಾತಪೌ ಬ್ರಹ್ಮವಿದೋ ವದಂತಿ ಪಂಚಾಗ್ನಯೋ ಯೇ ಚ ತ್ರಿಣಾಚಿಕೇತಾಃ ॥೧॥

ಈ ಶ್ಲೋಕದಲ್ಲಿ "ಗುಹಾಂ ಪ್ರವಿಷ್ಟೌ" ಎಂದರೆ ಗುಹೆಯ ಒಳಗೆ ಇಬ್ಬರಿದ್ದಾರೆ ಎಂದರ್ಥ. ಈ ಇಬ್ಬರು ಯಾರು ಎನ್ನುವುದನ್ನು ಉಪನಿಷತ್ತು ಎಲ್ಲೂ ಸ್ಪಷ್ಟವಾಗಿ ಹೇಳುವುದಿಲ್ಲ. ಹಾಗಾಗಿ ಹೆಚ್ಚಿನವರು ಈ ಶ್ಲೋಕವನ್ನು ಗೊಂದಲ ಮಾಡಿಕೊಳ್ಳುತ್ತಾರೆ. ಈ ಮಂತ್ರ ನಿರ್ಣಯಕ್ಕಾಗಿ ವೇದವ್ಯಾಸರು ಒಂದು ಸೂತ್ರವನ್ನು ರಚಿಸಿದ್ದಾರೆ. ಅಲ್ಲಿ ಹೀಗೆ ಹೇಳಲಾಗಿದೆ : ಗುಹಾಂ ಪ್ರವಿಷ್ಟೌ ಆತ್ಮಾನೌ ತದ್ ದರ್ಶನಾತ್ (ವೇದಾಂತ ಸೂತ್ರ ೧.೨.೧೧). ಇದರಿಂದ ನಮಗೆ ಸ್ಪಷ್ಟವಾಗುವುದೇನೆಂದರೆ: ಹೃದಯ ಗುಹೆಯಲ್ಲಿ ಭಗವಂತ ಎರಡು ರೂಪದಲ್ಲಿ ನೆಲೆಸಿದ್ದಾನೆ ಎಂದು. ಶಾಸ್ತ್ರಕಾರರು ಹೇಳುವಂತೆ: ಆತ್ಮಾಂತರಾತ್ಮೇತಿ ಹರಿಃ ಏಕ ಏವ ದ್ವಿದಾಸ್ಥಿತಃ. ಅಂದರೆ ಭಗವಂತ ನಮ್ಮ ಹೃದಯ ಗುಹೆಯಲ್ಲಿ 'ಆತ್ಮ' ಮತ್ತು 'ಅಂತರಾತ್ಮ' ನಾಮಕನಾಗಿ ಎರಡು ರೂಪದಲ್ಲಿ ನೆಲೆಸಿದ್ದಾನೆ.

ಇಲ್ಲಿ ಗುಹೆ ಎಂದರೆ ನಮ್ಮ ಹೃದಯ ಗುಹೆ. ಅದು ಹೃತ್ಕಮಲ ಮಧ್ಯದಲ್ಲಿನ ಅನಾಹತ ಚಕ್ರ(thymus gland)ವೆಂಬ ಶಕ್ತಿ ಕೇಂದ್ರ. ಅಲ್ಲಿ ಜೀವಸ್ವರೂಪವನ್ನು ಧಾರಣೆ ಮಾಡಿಕೊಂಡು ಜೀವಸ್ವರೂಪದ ಹೊರಗೆ ಆತ್ಮ ನಾಮಕನಾಗಿ, ಮತ್ತು ಜೀವ ಸ್ವರೂಪದ ಒಳಗೆ ಅಂತರಾತ್ಮ ನಾಮಕನಾಗಿ ಭಗವಂತ ನೆಲೆಸಿದ್ದಾನೆ. ಆತ ಎಲ್ಲಾ ಯಥಾರ್ಥ ಕ್ರಿಯೆಗಳಿಂದ ಬರುವ ಪುಣ್ಯಫಲ ಮತ್ತು ಆನಂದವನ್ನು ಪಾನ ಮಾಡಿಕೊಂಡು, ಇಂದ್ರಿಯಗಳ ಅನುಭವವನ್ನು ಸುಖಮಯನಾಗಿ ಆಸ್ವಾದಿಸಿಕೊಂಡು, ಆ ಆನಂದದ ಭಾಗವನ್ನು ನಮಗೂ ಪಾನ ಮಾಡಿಸುತ್ತಾ ನೆಲೆಸಿದ್ದಾನೆ. ಪುಣ್ಯ ಫಲವಾಗಿ ಬಂದಿರುವ ಮನುಷ್ಯ ಶರೀರ ಭಗವಂತನ ಮನೆ. ಅಲ್ಲಿ ದೇಹದ ಮಧ್ಯಭಾಗವಾದ ಹೃತ್ಕಮಲ ಭಗವಂತನ ಅಂತಃಪುರ. ಅದು ಆತನ ವಾಸಸ್ಥಾನ.

ಈ ಶ್ಲೋಕವನ್ನು ಉಪಾಸನೆಯ ಇನ್ನೊಂದು ಮುಖದಲ್ಲಿ ನೋಡಬಹುದು. ಪುಣ್ಯದಿಂದ ನಿರ್ಮಿತವಾದ ಶರೀರ ಎಂದರೆ ಪ್ರಾಣದೇವರು. ಜೀವನ ಜೊತೆಗೆ ಪ್ರಾಣ ತತ್ವವಿದೆ. ಆ ಪ್ರಾಣತತ್ವದ ಒಳಗೆ ಭಗವಂತ ಎರಡು ರೂಪದಲ್ಲಿ ನೆಲೆಸಿದ್ದಾನೆ. ಇಂತಹ ಭಗವಂತನ ಎರಡು ರೂಪಗಳನ್ನು ಜ್ಞಾನಿಗಳು 'ಛಾಯ' ಮತ್ತು 'ಆತಪ' ಎಂದು ಕರೆದಿದ್ದಾರೆ. ಅಂದರೆ ನೆರಳು ಮತ್ತು ಬಿಸಿಲು ಅಥವಾ ಕತ್ತಲು ಮತ್ತು ಬೆಳಕು. ಭಗವಂತ ಜ್ಞಾನಿಗಳಿಗೆ ಬೆಳಕು, ಸಂಸಾರ ತಾಪದಿಂದ ಒದ್ದಾಡುತ್ತಿರುವವರಿಗೆ ನೆರಳು. ಆತ ಭಕ್ತರಿಗೆ ಬೆಳಕು, ಅಭಕ್ತರಿಗೆ ಕತ್ತಲು.

ನಮ್ಮ ದೇಹದಲ್ಲಿ ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನ ನಾಮಕನಾಗಿರುವ ಪ್ರಾಣತತ್ವದಲ್ಲಿ ಭಗವಂತ ಪಂಚಾತ್ಮಕ (ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ, ನಾರಾಯಣ) ರೂಪನಾಗಿ ನೆಲೆಸಿದ್ದಾನೆ. ದೇಹದ ಹೊರಗೆ ಉಪಾಸನೆ ಮಾಡುವ ಪಂಚ ಯಾಗಾಗ್ನಿ (ಗಾರ್ಹಪತ್ಯ, ಆಹವನೀಯ, ದಕ್ಷಿಣಾಗ್ನಿ, ಸಭ್ಯ, ಅವಸಥ್ಯ)ಯಲ್ಲಿ ಪಂಚರೂಪನಾಗಿ ಭಗವಂತ ನೆಲೆಸಿದ್ದಾನೆ.

ನಮ್ಮ ಹೃದಯ ಗುಹೆಯಲ್ಲಿ ನೆಲೆಸಿರುವ ಭಗವಂತನೇ ಅಗ್ನಿಮುಖದಲ್ಲಿ ಉಪಾಸನೆ ಮಾಡುವವರಿಗೆ ಹಾಗೂ ಎಲ್ಲರಿಗೂ ಆಶ್ರಯಧಾತ. ಅದುವೇ ಎಲ್ಲೆಡೆ ತುಂಬಿರುವ ನಾಶವಿಲ್ಲದ ಪರತತ್ವ. ಅಂತಹ ಪರತತ್ವದ ಬಗೆಗೆ "ನನಗೆ ತಿಳಿದಿರುವುದರಲ್ಲಿ ನಿನಗೆ ಗ್ರಹಣ ಮಾಡಲು ಸಾಧ್ಯವಾಗುವಷ್ಟನ್ನು ಹೇಳುತ್ತೇನೆ" ಎಂದಿದ್ದಾನೆ ಯಮ.

ಯಃ ಸೇತುರೀಜಾನಾನಾಮಕ್ಷರಂ ಬ್ರಹ್ಮ ಯತ್ ಪರಮ್ ।
ಅಭಯಂ ತಿತೀರ್ಷತಾಂ ಪಾರಂ ನಾಚಿಕೇತಂ ಶಕೇಮಹಿ ॥೨॥

ಯಾರು ಸಂಸಾರ ಸಾಗರದ ಸೇತುವೆಯೋ, ಯಾರನ್ನು 'ಅಕ್ಷರ', 'ಪರಬ್ರಹ್ಮ' ಎಂದು ಶ್ರುತಿಗಳು ಹೇಳುತ್ತವೋ, ಅವನೇ ಎರಡು ರೂಪದಲ್ಲಿ ನಮ್ಮ ಹೃದಯ ಗುಹೆಯಲ್ಲಿ ನೆಲೆಸಿರುವವನು. ನಮ್ಮ ಭಯವನ್ನು ಪರಿಹರಿಸುವವ ಆ ಭಗವಂತನೊಬ್ಬನೇ. ಅವನನ್ನು ಮೋಕ್ಷದಲ್ಲಿ ಸೇರಿದಾಗ ಜೀವ 'ಅಭಯ'ವನ್ನು ಪಡೆಯುತ್ತಾನೆ. ಭಯಕಾರಕವಾದ, ಅಜ್ಞಾನದಿಂದ ತುಂಬಿದ ಈ ಸಂಸಾರವೆಂಬ ಕಡಲನ್ನು ದಾಟಬಯಸುವವರಿಗೆ ಆಚೆಯ ದಡ ಆ ಭಗವಂತ.

ಯಾರು ನಮ್ಮೊಳಗೆ ಆತ್ಮ-ಅಂತರಾತ್ಮ ನಾಮಕನಾಗಿ ಎರಡು ರೂಪದಲ್ಲಿ ನೆಲೆಸಿದ್ದಾನೋ, ಯಾರು ಪಂಚಾಗ್ನಿಯಲ್ಲಿ ಉಪಾಸನೆ ಮಾಡುವವರಿಗೆ ಸನ್ನಿಹಿತನಾಗುತ್ತಾನೋ, ಯಾರು ನಾಚಿಕೇತಾಗ್ನಿಯಲ್ಲಿ ಹವನ ಮಾಡುವವರಲ್ಲಿ ಉಪಾಸ್ಯನಾಗಿದ್ದಾನೋ, ಅಂತಹ ಭಗವಂತನ ಬಗೆಗೆ ನಿನಗೆ ಎಷ್ಟು ಜೀರ್ಣಿಸಿಕೊಳ್ಳಲು ಸಾಧ್ಯವೋ ಅಷ್ಟನ್ನು ಹೇಳುತ್ತೇನೆ ಎನ್ನುತ್ತಾನೆ ಯಮ.

ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವ ಚ ।
ಬುದ್ಧಿಂ ತು ಸಾರಥಿಂ ವಿದ್ಧಿ ಮನಃ ಪ್ರಗ್ರಹಮೇವ ಚ ॥೩॥

ಇಂದ್ರಿಯಾಣಿ ಹಯಾನಾಹುರ್ವಿಷಯಾಂಸ್ತೇಷು ಗೋಚರಾನ್ ।
ಆತ್ಮೇಂದ್ರಿಯಮನೋಯುಕ್ತಂ ಭೋಕ್ತೇತ್ಯಾಹುರ್ಮನೀಷಿಣಃ ॥೪॥

ಭಗವಂತನ ಸ್ವರೂಪದ ಚಿತ್ರಣವನ್ನು ಕೊಟ್ಟ ಯಮ, ಇಲ್ಲಿ ಭಗವಂತನ ಕಡೆಗೆ ಸಾಗುವ ಬಗೆಯನ್ನು ಸುಂದರವಾಗಿ ವಿವರಿಸಿದ್ದಾನೆ. " 'ಜೀವ' ಭಗವಂತನ ಕಡೆಗೆ ಸಾಗುವ ಪಯಣಿಗ. ಸಾಧನಾ ಶರೀರವೇ ಅವನ ರಥ" ಎನ್ನುತ್ತಾನೆ ಯಮ. ಇಲ್ಲಿ ಸಾಧನಾ ಶರೀರ ಎಂದರೆ ಮನುಷ್ಯ ಶರೀರ. ಮಾನವ ಜನ್ಮ ಬಾರದೇ, ಮರವೋ, ಪ್ರಾಣಿಯೋ ಆಗಿ ಹುಟ್ಟಿದರೆ ಆ ಶರೀರ ಭಗವಂತನೆಡೆಗೆ ಸಾಗುವ ರಥವಾಗುವುದಿಲ್ಲ. ಆ ಶರೀರದ ಮೂಲಕ ಜೀವಕ್ಕೆ ಸಾಧನೆ ಸಾಧ್ಯವಿಲ್ಲ. ಹಾಗಾಗಿ ಮನುಷ್ಯ ಜನ್ಮ ಬಹಳ ಶ್ರೇಷ್ಠ ಜನ್ಮ. ಈ ಅರಿವು ಇಲ್ಲದ ನಾವು ಇಂದು ನಮಗೆ ಭಗವಂತ ನೀಡಿದ ಶ್ರೇಷ್ಠ ಜನ್ಮವನ್ನು ಯಾವುದೋ ಲೌಕಿಕ ವಿನೋದದಲ್ಲಿ ಕಳೆಯುತ್ತಾ ವ್ಯರ್ಥ ಮಾಡಿಕೊಳ್ಳುತ್ತಿದ್ದೇವೆ. ಇದರಿಂದಾಗಿ ನಮಗೆ ಭಗವಂತ ನೀಡಿದ ರಥವನ್ನು ನಾವು ಸರಿಯಾದ ದಿಕ್ಕಿನಲ್ಲಿ ಬಳಸುತ್ತಿಲ್ಲ. ಹೀಗೆ ಬೇಜವಾಬ್ದಾರಿಯುತವಾಗಿ ಸಾಗುವ ಮನುಷ್ಯನ ಜೀವನ ಪ್ರಾಣಿ ಜೀವನಕ್ಕಿಂತ ಕಡೆ. ಭಗವಂತ 'ನನ್ನೆಡೆಗೆ ಬಾ' ಎಂದು ಕಳುಹಿಸಿಕೊಟ್ಟ ಈ ಶರೀರವೆಂಬ ರಥದಲ್ಲಿ ಕೂತು, ಭಗವಂತನೆಡೆಗೆ ಸಾಗಬೇಕು ಎನ್ನುವ ಸಂದೇಶವನ್ನು ಯಮ ನಚಿಕೇತನ ಮೂಲಕ ನಮಗೆ ನೀಡಿದ್ದಾನೆ.

ನಮ್ಮ ರಥ ದಾರಿ ತಪ್ಪದೇ ಸೇರಬೇಕಾದ ಗುರಿಯನ್ನು ತಲುಪಲು ನಮಗೆ ಒಬ್ಬ ಸಾರಥಿ ಬೇಕು. ನಮಗೆ ಆ ಸಾರಥಿಯನ್ನೂ ಕೂಡಾ ಭಗವಂತ ಕೊಟ್ಟಿದ್ದಾನೆ. "ಯಾವುದು ಸರಿ, ಯಾವುದು ತಪ್ಪು ಎಂದು ನಿರ್ಣಯಿಸುವ ವಿವೇಕ ಪ್ರಜ್ಞೆಯೇ ಸಾರಥಿ ಹಾಗೂ ಮನಸ್ಸೇ ಕಡಿವಾಣ" ಎನ್ನುತ್ತಾನೆ ಯಮ.

ಭಗವಂತನೆಡೆಗೆ 'ಜೀವ' ಸಾಗಲು ಭಗವಂತ ಕೊಟ್ಟ ರಥಕ್ಕೆ ಐದು ಕುದುರೆಗಳು. ಎರಡು ಕಿವಿ, ಎರಡು ಕಣ್ಣು ಹಾಗೂ ಒಂದು ಬಾಯಿ-ಇವೇ ಆ ಐದು ಕುದುರೆಗಳು. ಶಬ್ದ, ರೂಪ ಮತ್ತು ಮಾತು ಈ ಕುದುರೆಗಳು ಮೇಯುವ ಹುಲ್ಲುಗಾವಲು. ಹಾಗಾಗಿ ನಾವು ನಮ್ಮ ಕಣ್ಣನ್ನು ಭಗವಂತನ ಕ್ಷೇತ್ರವನ್ನು ನೋಡುವುದಕ್ಕೆ ಉಪಯೋಗಿಸಬೇಕು, ಕಿವಿಯನ್ನು ಭಗವಂತನ ಮಹಿಮೆಯನ್ನು ಕೇಳಿ ತಿಳಿದುಕೊಳ್ಳುವುದಕ್ಕಾಗಿ ಹಾಗೂ ಮಾತು ಭಗವಂತನ ಮಹಿಮೆಯನ್ನು ಇನ್ನೊಬ್ಬರಿಗೆ ಹೇಳುವುದಕ್ಕಾಗಿ ಉಪಯೋಗಿಸಬೇಕು.

ಈ ಶ್ಲೋಕದಲ್ಲಿ ನಾವು ಗಮನಿಸಬೇಕಾದ ಒಂದು ಅಂಶವೆಂದರೆ ಇಲ್ಲಿ ವಿವರಿಸಿದ ಇಂದ್ರಿಯಗಳು, ಮನಸ್ಸು, ಬುದ್ಧಿ ಎಂದರೆ ಅದರ ಅಭಿಮಾನಿ ದೇವತೆಗಳು ಕೂಡಾ ಹೌದು. ಉದಾಹರಣೆಗೆ ನಮ್ಮ ಮನಸ್ಸು. ಮನೋಭಿಮಾನಿಯಾದ ಶಿವನ ಅನುಗ್ರಹ ಇಲ್ಲದೇ ಏಕಾಗ್ರತೆ ಸಾಧ್ಯವಿಲ್ಲ. ಇಂದ್ರಿಯಾಭಿಮಾನಿಗಳಾದ ಸೂರ್ಯ ಚಂದ್ರರ ನೆರವಿಲ್ಲದೇ ಭಗವಂತನತ್ತ ಪಯಣ ಸಾಧ್ಯವಿಲ್ಲ. ಹಾಗಾಗಿ ದೇವತೆಗಳ ನೆರವಿನಿಂದ, ಸಾಧನಾ ಶರೀರವನ್ನು ಬಳಸಿ, ಭಗವಂತನತ್ತ ಪಯಣಿಸಬೇಕು ಎನ್ನುವುದು ಈ ಶ್ಲೋಕದ ಅಂತರಂಗದ ಇನ್ನೊಂದು ಅರ್ಥ.

ನಮಗೆ ತಿಳಿದಂತೆ ಸಶರೀರವಾಗಿ ಭಗವಂತನನ್ನು ಸೇರಲು ಸಾಧ್ಯವಿಲ್ಲ. ಹಾಗಾಗಿ ಇಲ್ಲಿ ಯಮ ಹೇಳುತ್ತಾನೆ: ಭಗವಂತನ ಒಳಮನೆಯನ್ನು ಸೇರಲು ನಾವು ನಮ್ಮ ಆತ್ಮಸ್ವರೂಪವನ್ನೇ ರಥವನ್ನಾಗಿ ಬಳಸಬೇಕು ಎಂದು. ಇದು ನಾವು ಧ್ಯಾನದಲ್ಲಿ ತಿಳಿದಿರಬೇಕಾದ ಬಹಳ ಮುಖ್ಯ ವಿಚಾರ. ಇಂದ್ರಿಯಗಳ ಮೂಲಕ ಭಗವಂತನ ನಿರಂತರ ಚಿಂತನೆ, ಬುದ್ಧಿಯೆಂಬ ಸಾರಥಿಯಿಂದ ಮನಸ್ಸನ್ನು ಏಕಾಗ್ರಗೊಳಿಸಿ, ಸಾಧನ ಶರೀರದ ಮೂಲಕ ಭಗವಂತನ ಧ್ಯಾನ ಮಾಡುತ್ತಾ, ಕೊನೆಗೆ ಭೌತಿಕವಾದ ಶರೀರದಿಂದಾಚೆಗೆ ಬಂದು, ಜ್ಞಾನಾನಂದಸ್ವರೂಪಭೂತವಾದ ಇಂದ್ರಿಯದಿಂದ, ಜ್ಞಾನಾನಂದಸ್ವರೂಪಭೂತನಾದ ಭಗವಂತನನ್ನು ಕಂಡು, ಆತನನ್ನು ಸೇರಬೇಕು. ಮನಸ್ಸು-ಬುದ್ಧಿಯನ್ನು ದಾಟಿ, ತುರಿಯಾವಸ್ಥೆಯಲ್ಲಿ ಭಗವಂತನನ್ನು ಕಾಣುವುದೇ ನಿಜವಾದ ಸಾಕ್ಷಾತ್ಕಾರ. ಆತ್ಮಸ್ವರೂಪದಿಂದ ಭಗವಂತನ ಸ್ವರೂಪಾನಂದವನ್ನು ಅನುಭವಿಸುವವನೇ ನಿಜವಾದ ಭೋಕ್ತ. ಆದ್ದರಿಂದ ನಿಜವಾದ ಆನಂದದ ಭೋಗ ಸಿಗುವುದು ಭಗವಂತನ ಸಾಕ್ಷಾತ್ಕಾರವಾದಾಗ ಮತ್ತು ಮೋಕ್ಷ ಸ್ಥಿತಿಯಲ್ಲಿ ಮಾತ್ರ.

ಯಮನ ಈ ಎಲ್ಲಾ ವಿವರಣೆಯನ್ನು ಕೇಳಿದಾಗ ನಮ್ಮಲ್ಲಿ ಒಂದು ಪ್ರಶ್ನೆ ಮೂಡಬಹುದು. ಅದೇನೆಂದರೆ: ಈ ಹಿಂದೆ ಹೇಳಿದ ರಥ, ಸಾರಥಿ, ಕುದುರೆ, ಲಗಾಮು ಎಲ್ಲವೂ ಎಲ್ಲರಲ್ಲೂ ಇದ್ದರೂ ಕೂಡಾ, ಏಕೆ ಎಲ್ಲರಿಗೂ ಭಗವಂತನೆಡೆಗೆ ಸಾಗಲು ಸಾಧ್ಯವಾಗುವುದಿಲ್ಲ? ಅದನ್ನು ಏಕೆ ನಾವು ಬೇರೆ ವ್ಯವಹಾರಕ್ಕಾಗಿ ಉಪಯೋಗಿಸಿ ಭಗವಂತನನ್ನು ಮರೆತುಬಿಡುತ್ತೇವೆ? ಈ ಪ್ರಶ್ನೆಗೆ ಯಮ ಮುಂದಿನ ಎರಡು ಶ್ಲೋಕಗಳಲ್ಲಿ ಉತ್ತರಿಸಿದ್ದಾನೆ.

ಯಸ್ತ್ವವಿಜ್ಞಾನವಾನ್ ಭವತ್ಯಯುಕ್ತೇನ ಮನಸಾ ಸದಾ ।
ತಸ್ಯೇಂದ್ರಿಯಾಣ್ಯವಶ್ಯಾನಿ ದುಷ್ಟಾಶ್ವಾ ಇವ ಸಾರಥೇಃ ॥೫॥

ಯಾರ ಮನಸ್ಸು ಬುದ್ಧಿಯ ಹಿಡಿತದಲ್ಲಿಲ್ಲವೋ, ಯಾರಿಗೆ ಸರಿಯಾದ ಬುದ್ಧಿಯೇ ಇಲ್ಲವೋ, ಅಂತವನ ಇಂದ್ರಿಯಗಳು ನಿಯಂತ್ರಣದಲ್ಲಿರುವುದಿಲ್ಲ. ಅವುಗಳ ನಡೆ ಪಳಗದ ಕೆಟ್ಟ ಕುದುರೆಗಳನ್ನು ರಥಕ್ಕೆ ಕಟ್ಟಿ ಓಡಿಸಿದಾಗ ಹೇಗೆ ದಿಕ್ಕೆಟ್ಟು ಓಡುತ್ತವೋ ಹಾಗಿರುತ್ತದೆ. ಕುದುರೆಗಳನ್ನು ನಿಯಂತ್ರಿಸಬೇಕು ಎನ್ನುವ ಅರಿವು, ಅದಕ್ಕೆ ಬೇಕಾದ ಸರಿಯಾದ ಕಡಿವಾಣ ಇಲ್ಲದೇ ಭಗವಂತನಡೆಗೆ ಪಯಣ ಅಸಾಧ್ಯ. ಅಂದರೆ ಮನಸ್ಸು ಮತ್ತು ಬುದ್ಧಿ ನಮ್ಮ ನಿಯಂತ್ರಣದಲ್ಲಿಲ್ಲದಿದ್ದರೆ ಇಂದ್ರಿಯಗಳು ದಾರಿ ತಪ್ಪುತ್ತವೆ. ಹಾಗಾಗಿ ರಥ ಇದ್ದರೂ ಕೂಡಾ, ಆ ರಥದಲ್ಲಿ

ಭಗವಂತನೆಡೆಗೆ ಸಾಗಲು ಸಾಧ್ಯವಾಗುವುದಿಲ್ಲ. ಸಾರಥಿ, ಕಡಿವಾಣ ಸರಿ ಇಲ್ಲದ ರಥವುಳ್ಳವನು ಅಧ್ಯಾತ್ಮ ಸಾಧನೆಯಲ್ಲಿ ಮುಂದೆ ಸಾಗಲಾರ.

ಯಸ್ತು ವಿಜ್ಞಾನವಾನ್ ಭವತಿ ಯುಕ್ತೇನ ಮನಸಾ ಸದಾ ।
ತಸ್ಯೇಂದ್ರಿಯಾಣಿ ವಶ್ಯಾನಿ ಸದಶ್ವಾ ಇವ ಸಾರಥೇಃ ॥೬॥

ಮೊದಲು ನಮ್ಮಲ್ಲಿ ಸರಿಯಾದ ಅರಿವು ಇರಬೇಕು. ವಿಶಿಷ್ಟವಾದ ಜ್ಞಾನವಿದ್ದು, ಯಾವುದು ಸರಿ ಯಾವುದು ತಪ್ಪು ಎಂದು ಅರ್ಥ ಮಾಡಿಕೊಂಡು ನಡೆಸುವಂತಹ ಒಬ್ಬ ಸಾರಥಿ ಯಾರಲ್ಲಿದ್ದಾನೋ ಮತ್ತು ಮನಸ್ಸು ಎನ್ನುವ ಕಡಿವಾಣದ ನಿಯಂತ್ರಣ ಯಾರಲ್ಲಿದೆಯೋ, ಅವರು ಸಾಧನಾ ಮಾರ್ಗದಲ್ಲಿ ಉತ್ತಮವಾದ ಪಳಗಿದ ಕುದುರೆಗಳನ್ನು ಹೊಂದಿದ ರಥಿಕನಂತೆ ಮುನ್ನೆಡೆಯಬಲ್ಲರು. ಹಾಗಾಗಿ ಅಧ್ಯಾತ್ಮದ ಸಾಧನೆಗೆ ಮೊದಲು ಬೇಕಾಗಿರುವುದು ವಿವೇಕ ಜ್ಞಾನ(ವಿಜ್ಞಾನ). ಯಾವುದು ಸರಿ ಯಾವುದು ತಪ್ಪು ಎಂದು ತಿಳಿದು ಸರಿಯಾದ ದಾರಿಯಲ್ಲೇ ಸಾಗಬೇಕು ಎನ್ನುವ ತೀರ್ಮಾನ ಮಾಡಿದಾಗ, ಪಳಗಿದ ಕುದುರೆಗಳಂತೆ ನಮ್ಮ ಇಂದ್ರಿಯ ನಮ್ಮ ನಿಯಂತ್ರಣದಲ್ಲಿರುತ್ತವೆ.

ಯಸ್ತ್ವವಿಜ್ಞಾನವಾನ್ ಭವತ್ಯಮನಸ್ಕಃ ಸದಾಽಶುಚಿಃ ।
ನ ಸ ತತ್ಪದಮಾಪ್ನೋತಿ ಸಂಸಾರಂ ಚಾಧಿಗಚ್ಛತಿ ॥೭॥

ಯಾರಲ್ಲಿ ವಿವೇಕಪ್ರಜ್ಞೆ ಇಲ್ಲ, ಶುದ್ಧವಾದ ಮನಸ್ಸಿಲ್ಲ, ಅವರು ಸದಾ 'ಅಶುಚಿ' ಎನ್ನುತ್ತಾನೆ ಯಮ. ನಾವು ನಮ್ಮ ಮನಸ್ಸಿನಲ್ಲಿ ಕೊಳೆ ತುಂಬಿಸಿಕೊಂಡು ಯಾವುದೇ ಬಾಹ್ಯ ಶುಚಿತ್ವ ಪಾಲಿಸಿದರೂ, ಅದರಿಂದ ಮಡಿಯಾಗಲು ಸಾಧ್ಯವಿಲ್ಲ. ಇಂತವರು ಎಷ್ಟೇ ಅನುಷ್ಠಾನ ಮಾಡಿದರೂ, ಯಾವ ಪುಣ್ಯಕ್ಷೇತ್ರ ಯಾತ್ರೆ ಮಾಡಿದರೂ, ಅದರಿಂದ ಉಪಯೋಗವಿಲ್ಲ. ಅಂತವರು ಈ ಸಂಸಾರ ಚಕ್ರದಲ್ಲೇ ಸುತ್ತುತ್ತಿರುತ್ತಾರೆಯೇ ಹೊರತು ಮರಳಿಬಾರದ ಭಗವಂತನ ಬಳಿ ಸಾಗುವುದಿಲ್ಲ.

ಯಸ್ತು ವಿಜ್ಞಾನವಾನ್ ಭವತಿ ಸಮನಸ್ಕಃ ಸದಾ ಶುಚಿಃ ।
ಸ ತು ತತ್ಪದಮಾಪ್ನೋತಿ ಯಸ್ಮಾದ್ಭೂಯೋ ನ ಜಾಯತೇ ॥೮॥

ಯಾರಲ್ಲಿ ಒಳ್ಳೆಯದ್ಯಾವುದು, ಕೆಟ್ಟದ್ದಾವುದು ಎಂದು ನಿರ್ಧಾರ ಮಾಡಿ ಮುನ್ನೆಡೆಯುವ ವಿವೇಕಪ್ರಜ್ಞೆ ಇರುತ್ತದೋ, ಯಾರ ಮನಸ್ಸು ಬುದ್ಧಿಯ ಅಧೀನದಲ್ಲಿದ್ದು ಏಕಾಗ್ರವಾಗಿರುತ್ತದೋ, ಅವರು ಸದಾ ಶುಚಿ(ಮಡಿ). ಇಂತವರು ಎಲ್ಲಿಗೆ ಹೋದರೆ ಮರಳಿ ಹುಟ್ಟುವ ಅಗತ್ಯವಿಲ್ಲವೋ ಅಂತಹ ತಾಣವನ್ನು ಸೇರುತ್ತಾರೆ.

ಈ ಮೇಲಿನ ಎರಡು ಶ್ಲೋಕಗಳಲ್ಲಿ ನಿಜವಾದ ಮಡಿ ಎಂದರೇನು ಎನ್ನುವುದರ ಸ್ಪಷ್ಟ ವಿವರಣೆ ಕಾಣಬಹುದು. ಮಡಿ ಎಂದರೆ ಅದು ನಮ್ಮ ಅಂತರಂಗ ಶುದ್ಧಿ ಹೊರತು ಬಾಹ್ಯಶುದ್ಧಿ ಅಲ್ಲ. ಬಾಹ್ಯ ಶುದ್ಧಿ ಕೇವಲ ಅಂತರಂಗ ಶುದ್ಧಿಗೆ ಪೂರಕ. ಮನಃ ಶುದ್ಧಿ ಇಲ್ಲದೇ ಮಾಡುವ ಯಾವ ಬಾಹ್ಯ ಶುದ್ಧಿಯೂ ಶುಚಿ ಎನಿಸಲಾರದು.

ವಿಜ್ಞಾನಸಾರಥಿರ್ಯಸ್ತು ಮನಃ ಪ್ರಗ್ರಹವಾನ್ ನರಃ ।
ಸೋಽಧ್ವನಃ ಪಾರಮಾಪ್ನೋತಿ ತದ್ವಿಷ್ಣೋಃ ಪರಮಂ ಪದಮ್ ॥೯॥

ನಾವು ಎಚ್ಚರದಿಂದ ನಿಯಂತ್ರಿಸಬೇಕಾದದ್ದು ಮನಸ್ಸು ಮತ್ತು ಬುದ್ಧಿಯನ್ನು. ಈ ಎರಡು ಹಿಡಿತದಲ್ಲಿದ್ದಾಗ ಇಂದ್ರಿಯಗಳು ತಾನೇ ತಾನಾಗಿ ಹಿಡಿತಕ್ಕೆ ಬರುತ್ತವೆ. ಈ ಹಿಂದೆ ಹೇಳಿದಂತೆ, ಮನಸ್ಸಿನ ಅಭಿಮಾನಿ ದೇವತೆ ಶಿವ. ಆದ್ದರಿಂದ ನಾವು "ನಮ್ಮ ಮನಸ್ಸು ದಾರಿ ತಪ್ಪದಂತೆ ಮಾಡು" ಎಂದು ಶಿವನಲ್ಲಿ ಪ್ರಾರ್ಥಿಸಬೇಕು. ನಂತರ "ನನಗೆ ವಿವೇಕಪ್ರಜ್ಞೆಯನ್ನು ಕೊಡು ತಾಯೇ" ಎಂದು ಸರಸ್ವತಿಯನ್ನು ಪ್ರಾರ್ಥಿಸಬೇಕು. ಇದರಿಂದ ನಮ್ಮ ಮನಸ್ಸು ಮತ್ತು ಬುದ್ಧಿ ಹಿಡಿತಕ್ಕೆ ಬರುತ್ತದೆ. ಒಮ್ಮೆ ಮನಸ್ಸು-ಬುದ್ಧಿ ಹಿಡಿತಕ್ಕೆ ಬಂದಿತೆಂದರೆ ಮತ್ತೆ ಇನ್ನೇನೂ ಸಮಸ್ಯೆ ಇಲ್ಲ. ಇದರಿಂದ ನಾವು ನಮ್ಮ ಪಯಣದ ಕೊನೇಯ ಗುರಿಯಾದ ವಿಷ್ಣುವಿನ ಪರಮಪದವನ್ನು ತಲುಪಬಹುದು.

ಇಲ್ಲಿ 'ವಿಷ್ಣುಃ' ಎನ್ನುವ ಭಗವಂತನ ನಾಮವನ್ನು ಬಳಸಲಾಗಿದೆ. ಸಾಮಾನ್ಯವಾಗಿ ವಿಷ್ಣುಃ ಅನ್ನುವ ನಾಮ ಒಬ್ಬ ವ್ಯಕ್ತಿಗೆ ಸಂಬಂಧಿಸಿದ್ದು ಎಂದು ತಿಳಿಯುವವರೇ ಹೆಚ್ಚು. ಆದರೆ ಹಿಂದೂ-ಮುಸ್ಲಿಂ-ಕ್ರೈಸ್ತ ಧರ್ಮದಲ್ಲಿ ದೇವರು ಎನ್ನುವುದಕ್ಕೆ ಯಾವ ವಿಶ್ಲೇಷಣೆ ಇದೆಯೋ, ಅದರ ಸಂಸ್ಕೃತ ಪದ ವಿಷ್ಣು. ವಿಷ್ಣು ಎಂದರೆ ಸರ್ವಶಬ್ದವಾಚ್ಯನಾದ, ಸರ್ವಗತನಾದ ಭಗವಂತ (omnipotent and omnipresent) ಎಂದರ್ಥ. ಇದು ಜಾತಿ ಧರ್ಮವನ್ನು ಮೀರಿ ಎಲ್ಲರೂ ಒಪ್ಪುವಂತಹ ಅರ್ಥ. ಇನ್ನು ಈ ಪದವನ್ನು ಒಡೆದು ನೋಡಿದರೆ ವಿ-ಷ-ಣು ಆಗುತ್ತದೆ. ವಿಷಣು ಎಂದರೆ-ವಿಶಿಷ್ಟವಾದ ಜ್ಞಾನ(ವಿ) ಕೊಡುವವನು. ಒಳಗೆ ಇದ್ದು, ಸಂಸಾರ ವಿಷವನ್ನು ಪರಿಹರಿಸಿ, ನಮ್ಮ ಕ್ರಿಯೆಯನ್ನು ನಿಯಂತ್ರಿಸುವ ಪರಿಪೂರ್ಣವಾದ (ಷ) ಪ್ರಾಣಶಕ್ತಿ . ಎಲ್ಲರನ್ನೂ ರಕ್ಷಿಸುವ ಬಲ ಇರುವ (ಣ)ಸರ್ವಶಕ್ತ ಭಗವಂತ ವಿಷ್ಣುಃ.

ಇಂದ್ರಿಯೇಭ್ಯಃ ಪರಾ ಹ್ಯರ್ಥಾ ಅರ್ಥೇಭ್ಯಶ್ಚ ಪರಂ ಮನಃ ।
ಮನಸಸ್ತು ಪರಾ ಬುದ್ಧಿರ್ಬುದ್ಧೇರಾತ್ಮಾ ಮಹಾನ್ ಪರಃ ॥೧೦॥

ಮಹತಃ ಪರಮವ್ಯಕ್ತಮವ್ಯಕ್ತಾತ್ ಪುರುಷಃ ಪರಃ ।
ಪುರುಷಾನ್ನ ಪರಂ ಕಿಂಚಿತ್ ಸಾ ಕಾಷ್ಠಾ ಸಾ ಪರಾ ಗತಿಃ ॥೧೧॥

ಭಗವಂತನ ಕಡೆಗೆ ಪಯಣಿಸುವ ಕುರಿತ ಉಪದೇಶದ ಉಪಸಂಹಾರ ರೂಪದಲ್ಲಿ ಈ ಎರಡು ಶ್ಲೋಕಗಳಿವೆ. ಇಲ್ಲಿ ಯಮ ಹೇಳುತ್ತಾನೆ: ಭಗವಂತನ ಕಡೆಗೆ ಪಯಣಿಸಲು ಮೊದಲು ಬೇಕಾಗಿರುವುದು ಸಾಧನ ಶರೀರ. ಸಾಧನಾ ಶರೀರಕ್ಕಿಂತ ಇಂದ್ರಿಯಗಳು ಮುಖ್ಯ, ಇಂದ್ರಿಯಗಳಿಗಿಂತ ಇಂದ್ರಿಯ ವಿಷಯಗಳು ಮುಖ್ಯ, ವಿಷಯಗಳಿಗಿಂತ ಅದನ್ನು ಗ್ರಹಿಸುವ ಮನಸ್ಸು ಮುಖ್ಯ, ಮನಸ್ಸಿಗಿಂತ ಬುದ್ಧಿ ಮುಖ್ಯ, ಬುದ್ಧಿಗಿಂತ ಆತ್ಮ ಮುಖ್ಯ. ಈ ಎಲ್ಲಾ ಪರಿಕರಗಳೊಂದಿಗೆ ಭಗವಂತನನ್ನು ಸೇರಲು ತಾಯಿ-ತಂದೆಯ ಅನುಗ್ರಹ ಬಹಳ ಮುಖ್ಯ. ಪ್ರಕೃತಿ ಮಾತೆಯಾದ ಲಕ್ಷ್ಮಿ, ಪುರುಷನಾದ ನಾರಾಯಣ –ಇವರ ಅನುಗ್ರಹ ಇಚ್ಛೆ ಇಲ್ಲದೇ ನಮ್ಮ ರಥ ಗುರಿಯನ್ನು ಸೇರುವುದಿಲ್ಲ.

ಈ ಶ್ಲೋಕಗಳಲ್ಲಿ ದೇವತಾತಾರತಮ್ಯ ವಿವರಣೆ ಕೂಡಾ ಅಡಗಿದೆ. ಇಲ್ಲಿ ಹೇಳಿರುವ ಪ್ರತಿಯೊಂದು ವಿಷಯದ ಅಭಿಮಾನಿ ದೇವತೆಗಳನ್ನು ನೋಡಿದರೆ ಈ ವಿಚಾರ ತಿಳಿಯುತ್ತದೆ. ಮೊದಲಿಗೆ ಇಂದ್ರಿಯಗಳು. ಇಂದ್ರಿಯಗಳಲ್ಲಿ ಮುಖ್ಯವಾಗಿ ಎರಡು ಗುಂಪು. ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯ. ಕಣ್ಣು, ಕಿವಿ, ಮೂಗು, ನಾಲಿಗೆ ಮತ್ತು ಚರ್ಮ

ಐದು ಜ್ಞಾನೇಂದ್ರಿಯಗಳು. ಬಾಯಿ, ಕೈ, ಕಾಲು, ಪಾಯು ಮತ್ತು ಉಪಸ್ಥ ಐದು ಕರ್ಮೇಂದ್ರಿಯಗಳು. ಕಿವಿಯ ಅಭಿಮಾನಿ ದೇವತೆ ಚಂದ್ರ (೧೨ನೇ ಕಕ್ಷೆ); ತ್ವಕ್ ಅಭಿಮಾನಿ ದೇವತೆ ಕುಬೇರ(೧೮ನೇ ಕಕ್ಷೆ); ಕಣ್ಣಿನ ಅಭಿಮಾನಿ ದೇವತೆ ಸೂರ್ಯ(೧೨ನೇ ಕಕ್ಷೆ); ನಾಲಿಗೆಯ ಅಭಿಮಾನಿ ದೇವತೆ ವರುಣ (೧೩ನೇ ಕಕ್ಷೆ); ಮೂಗಿನ ಅಭಿಮಾನಿ ದೇವತೆಯರು ಅಶ್ವಿಗಳು(೧೮ನೇ ಕಕ್ಷೆ); ಮಾತಿನ ಅಭಿಮಾನಿ ದೇವತೆ ಅಗ್ನಿ (೧೫ನೇ ಕಕ್ಷೆ); ಕೈ ಯ ಅಭಿಮಾನಿ ದೇವತೆ ಇಂದ್ರ(೮ನೇ ಕಕ್ಷೆ); ಕಾಲಿನ ಅಭಿಮಾನಿ ದೇವತೆ ಇಂದ್ರ ಪುತ್ರ ಜಯಂತ(೧೯ನೇ ಕಕ್ಷೆ); ಪಾಯು ಅಭಿಮಾನಿ ದೇವತೆ ಯಮ(೧೨ನೇ ಕಕ್ಷೆ); ಉಪಸ್ಥ ಅಭಿಮಾನಿ ದೇವತೆ ದಕ್ಷ ಪ್ರಜಾಪತಿ(೧೦ನೇ ಕಕ್ಷೆ). ಒಟ್ಟಿನಲ್ಲಿ ಇಲ್ಲಿ ೮ನೇ ಕಕ್ಷೆಯಿಂದ ೧೯ನೇ ಕಕ್ಷೆಯ ತನಕದ ದೇವತೆಗಳ ಗುಂಪನ್ನು ಕಾಣುತ್ತೇವೆ.

ಇಂದ್ರಿಯಗಳ ನಂತರ ಇಂದ್ರಿಯ ವಿಷಯಗಳು. ಇಂದ್ರಿಯ ವಿಷಯಗಳು ಹತ್ತು. ಗಂಧ, ರಸ, ರೂಪ, ಸ್ಪರ್ಶ, ಶಬ್ದ, ವಾಕ್, ಪಾಣಿ, ಪಾದ, ಪಾಯು(ವಿಸರ್ಗ) ಮತ್ತು ಉಪಸ್ಥ(ಸಂತಾನ). ಶಬ್ದ ಮತ್ತು ಸ್ಪರ್ಶದ ಅಭಿಮಾನಿ ದೇವತೆ ಗರುಡ ಪತ್ನಿ ಸುಪರ್ಣಿ, ರೂಪ ಮತ್ತು ಸ್ಪರ್ಶದ ಅಭಿಮಾನಿ ದೇವತೆ ಶೇಷ ಪತ್ನಿ ವಾರುಣಿ, ಗಂಧದ ಅಭಿಮಾನಿ ದೇವತೆ ಶಿವ ಪತ್ನಿ ಪಾರ್ವತಿ. ಅದೇ ರೀತಿ ವಾಕ್ ಮತ್ತು ಪಾಣಿ ಅಭಿಮಾನಿ ಸುಪರ್ಣಿ, ಪಾದ ಮತ್ತು ವಿಸರ್ಗ ಅಭಿಮಾನಿ ದೇವತೆ ವಾರುಣಿ, ಸಂತಾನದ ಅಭಿಮಾನಿ ದೇವತೆ ಪಾರ್ವತಿ. ಈ ಮೂವರೂ ೭ನೇ ಕಕ್ಷೆಯ ದೇವತೆಗಳು.

ಇಂದ್ರಿಯ ವಿಷಯಗಳ ನಂತರ ವೇದ ವಿದ್ಯೆಯ ಅರಿವಿನ ಅಭಿಮಾನಿ ದೇವತೆ ಗರುಡ; ಇತರ ವಿದ್ಯೆಯ ಅರಿವಿನ ಅಭಿಮಾನಿ ದೇವತೆ ಶೇಷ ಮತ್ತು ಮನೋಭಿಮಾನಿ ದೇವತೆ ಶಿವ. ಈ ಮೂವರೂ ಕೂಡಾ ೫ನೇ ಕಕ್ಷೆಯ ದೇವತೆಗಳು. ಮನಸ್ಸಿನ ನಂತರ ಬುದ್ಧಿ. ಸರಸ್ವತಿ ಮತ್ತು ಭಾರತಿಯರು ಬುದ್ಧಿಯ ಅಭಿಮಾನಿ ದೇವತೆಗಳು. ಇವರು ನಾಲ್ಕನೇ ಕಕ್ಷೆಯ ದೇವತೆಗಳು. ಬುದ್ಧಿಯ ನಂತರ ಆತ್ಮ. ಜೀವ ಸ್ವರೂಪಾಭಿಮಾನಿಯರಾದ ಬ್ರಹ್ಮ-ವಾಯು ಆತ್ಮದ ಅಭಿಮಾನಿ ದೇವತೆಗಳಾಗಿ ಮೂರನೇ ಕಕ್ಷೆಯಲ್ಲಿದ್ದಾರೆ. ಇವರಿಗಿಂತ ಮೇಲೆ ಅವ್ಯಕ್ತ ತತ್ವ, ಪ್ರಕೃತಿ ಮಾತೆ ಶ್ರೀಲಕ್ಷ್ಮಿ. ಲಕ್ಷ್ಮೀಪತಿ ಭಗವಂತ ಸರ್ವೋತ್ತಮ ತತ್ವ. "ಅದಕ್ಕಿಂತ ಎತ್ತರದ ಇನ್ನೊಂದು ತತ್ವವಿಲ್ಲ" ಎಂದಿದ್ದಾನೆ ಯಮ. ಅದು ಎತ್ತರದ ತುತ್ತತುದಿ. ಈ ತಾರತಮ್ಯಕ್ಕೆ ಅನುಗುಣವಾಗಿ ಭಗವಂತನ ಪರಿವಾರದ ಚಿಂತನೆ ಮಾಡಿ, ತುತ್ತತುದಿಯಲ್ಲಿರುವ ಭಗವಂತನ ಉಪಾಸನೆಯೇ ನಮ್ಮ ಧ್ಯಾನವಾಗಬೇಕು.

ಏಷ ಸರ್ವೇಷು ಭೂತೇಷು ಗೂಢೋऽऽತ್ಮಾ ನ ಪ್ರಕಾಶತೇ ।
ದೃಶ್ಯತೇ ತ್ವಗ್ರ್ಯಯಾ ಬುದ್ಧ್ಯಾ ಸೂಕ್ಷ್ಮಯಾ ಸೂಕ್ಷ್ಮದರ್ಶಿಭಿಃ ॥೧೨॥

ಭಗವಂತ ಪ್ರತಿಯೊಬ್ಬನ ಒಳಗೂ, ಜೀವಸ್ವರೂಪದ ಅತ್ಯಂತ ಸಮೀಪದಲ್ಲಿ, ನಿಗೂಢವಾಗಿ ನೆಲೆಸಿದ್ದಾನೆ. ನಮ್ಮೆಲ್ಲರ ಸ್ವಾಮಿ, ಅಂತರ್ಯಾಮಿ ಭಗವಂತನನ್ನು ಭೌತಿಕವಾದ ಯಾವುದೇ ಸಾಧನಗಳಿಂದ ಕಾಣಲು ಸಾಧ್ಯವಿಲ್ಲ. ಭಗವಂತನನ್ನು ಕಾಣಬೇಕಾದರೆ ಮೊದಲು ನಾವು ನಮ್ಮ ಜೀವಸ್ವರೂಪವನ್ನು ತಿಳಿಯಬೇಕು. ಭಗವಂತ ನಮ್ಮ ಜೀವಸ್ವರೂಪದ ಸ್ವರೂಪಭೂತವಾದ ಬುದ್ಧಿಗೆ ಮಾತ್ರ ಗೋಚರವಾಗುತ್ತಾನೆ. ನಮ್ಮ ಸ್ವರೂಪಜ್ಞಾನ ತೆರೆದುಕೊಂಡಾಗ, ಆ ಸ್ವರೂಪದ ತಿಳಿವಿನಿಂದ ಭಗವಂತನನ್ನು ತಿಳಿಯಬಹುದು. "ಸೂಕ್ಷ್ಮಕ್ಕಿಂತ ಸೂಕ್ಷ್ಮನಾದ ಅಂತರ್ಯಾಮಿ ಭಗವಂತನನ್ನು, ಆತ್ಮಸ್ವರೂಪಭೂತವಾದ ಬುದ್ಧಿ ತೆರೆದುಕೊಂಡಾಗ ಕಾಣಬಹುದು" ಎಂದಿದ್ದಾನೆ ಯಮ. ಎಲ್ಲಕ್ಕಿಂತ ಸೂಕ್ಷ್ಮವಾದ ಜೀವಸ್ವರೂಪವನ್ನು ಕಂಡವರಿಗೆ, ಜೀವಸ್ವರೂಪದಲ್ಲಿರುವ ಜ್ಞಾನ ಆವಿರ್ಭಾವವಾಗುತ್ತದೆ ಹಾಗೂ ಆ ಜ್ಞಾನದ ಕಣ್ಣಿನಿಂದ ಅವರು ಭಗವಂತನನ್ನು ಕಾಣಬಲ್ಲರು. ಇದಕ್ಕಾಗಿ ಮೊದಲು

ನಾವು ನಮ್ಮ ಜೀವಸ್ವರೂಪದ ಗ್ರಹಣ ಮಾಡಬೇಕು. ಜೀವಸ್ವರೂಪದ ದರ್ಶನವಾದರೆ, ಜೀವಸ್ವರೂಪದ ಜ್ಞಾನಾನಂದಮಯವಾದ ಕಣ್ಣಿನಿಂದ, ಜ್ಞಾನಾನಂದಮಯನಾದ ಭಗವಂತನನ್ನು ಕಾಣಬಹುದು.

ಯಚ್ಛೇದ್ವಾಙ್ಮನಸೀ ಪ್ರಾಜ್ಞಸ್ತದ್ಯಚ್ಛೇಜ್ಜ್ಞಾ ನ ಆತ್ಮನಿ ।
ಜ್ಞಾನಮಾತ್ಮನಿ ಮಹತಿ ನಿಯಚ್ಛೇತ್ ತದ್ಯಚ್ಛೇಚ್ಛಾಂತ ಆತ್ಮನಿ ॥೧೩॥

ಒಮ್ಮೆಂದೊಮ್ಮೆಗೆ ಭಗವಂತನ ದರ್ಶನವಾಗಬೇಕು ಎಂದರೆ ಅದು ಸಾಧ್ಯವಿಲ್ಲ. ಅದಕ್ಕಾಗಿ ಇಲ್ಲಿ ಯಮ ಕೆಲವು ಹಂತಗಳನ್ನು ವಿವರಿಸಿದ್ದಾನೆ. ಮೊದಲು ನಮ್ಮನ್ನು ನಿಯಂತ್ರಿಸತಕ್ಕ ಉಚ್ಛ ಶಕ್ತಿಗಳನ್ನು ಅಂತರಂಗದಲ್ಲಿ ಧ್ಯಾನ ಮಾಡಬೇಕು. ಇಂದ್ರನ ತನಕ ಇರುವ ನಮ್ಮ ಎಲ್ಲಾ ಇಂದ್ರಿಯಾಭಿಮಾನಿ ದೇವತೆಗಳೂ ಕೂಡಾ ವಾಗ್ದೇವತೆ ಪಾರ್ವತಿಗೆ ಅಧೀನ ದೇವತೆಗಳು. ಹಾಗಾಗಿ ಇಂದ್ರಿಯಾಭಿಮಾನಿ ದೇವತೆಗಳನ್ನು ವಾಗ್ದೇವತೆ ಪಾರ್ವತಿಯಲ್ಲಿ ಚಿಂತನೆ ಮಾಡಬೇಕು. ಪಾರ್ವತಿ ಮನೋಭಿಮಾನಿ ದೇವತೆ ಶಿವನ ಅಧೀನ ದೇವತೆ. ಶಿವ ಮತ್ತು ಪಾರ್ವತಿ ದಂಪತಿಗಳು. ಇವರದ್ದು ಅನ್ಯೋನ್ಯ ದಾಂಪತ್ಯ. ಮನಸ್ಸು ಏನನ್ನು ಯೋಚಿಸುತ್ತದೋ ಅದನ್ನೇ ಬಾಯಿ ನುಡಿಯುತ್ತದೆ. ಆದ್ದರಿಂದ ಅಧ್ಯಾತ್ಮ ಸಾಧನೆಯಲ್ಲಿ ಮೊಟ್ಟಮೊದಲು ನಮ್ಮಿಂದ 'ನುಡಿಸುವ' ಪಾರ್ವತಿ ಮತ್ತು ಅದನ್ನು ಪ್ರೇರಣೆ ಮಾಡುವ ಶಿವನ ಧ್ಯಾನ ಬಹಳ ಮುಖ್ಯ. ಶಿವ-ಪಾರ್ವತಿಯರ ಅನುಗ್ರಹವಿಲ್ಲದೇ ಮುಂದಿನ ಪಯಣ ಸಾಧ್ಯವಿಲ್ಲ. [ಈ ಶ್ಲೋಕದಲ್ಲಿ ವಾಕ್ ನ್ನು ಮನಸ್ಸಿನಲ್ಲಿ ನಿಯಂತ್ರಣ ಮಾಡಬೇಕು ಎಂದು ಹೇಳಲಾಗಿದೆ. ಇದರ ಅರ್ಥ ಮೇಲೆ ವಿವರಿಸಿದ ಅಭಿಮಾನಿ ದೇವತೆಯರ ತಾರತಮ್ಯ ಚಿಂತನೆ.]

ಮನೋಭಿಮಾನಿಯಾದ ಶಿವನಿಗಿಂತ ಎತ್ತರದಲ್ಲಿ ಬುದ್ಧಿಯ ಅಭಿಮಾನಿ ದೇವತೆಯರಾದ ಸರಸ್ವತಿ-ಭಾರತಿಯರಿದ್ದಾರೆ. ಅವರು ನಮ್ಮೊಳಗಿರುವ, ನಮ್ಮ ನಿಯಾಮಕ ಶಕ್ತಿಗಳಾದ ಜ್ಞಾನಾತ್ಮರು. ಜ್ಞಾನ ಸ್ವರೂಪಭೂತರಾಗಿರುವ ಸರಸ್ವತಿ-ಭಾರತಿಯರನ್ನು ಮಹತತ್ವದ ದೇವತೆಗಳಾದ ಬ್ರಹ್ಮ-ವಾಯುವಿನಲ್ಲಿ ಚಿಂತನೆ ಮಾಡಬೇಕು. ಸರಸ್ವತಿ-ಭಾರತಿಯರು ಜ್ಞಾನವನ್ನು ಕೊಡಬೇಕು, ಬ್ರಹ್ಮ-ವಾಯು ಭಕ್ತಿಯನ್ನು ಕೊಡಬೇಕು. ಇಂತಹ ಬ್ರಹ್ಮ-ವಾಯುವನ್ನು ಸ್ವರೂಪಸುಖದ ಪರಾಕಾಷ್ಠೆಯಾದ ಭಗವಂತನಲ್ಲಿ ಚಿಂತನೆ ಮಾಡಬೇಕು. ಹೀಗೆ ಭಗವದ್ ಚಿಂತನೆ ಮಾಡುತ್ತಾ ಭಗವಂತನೆಡೆಗೆ ಹೆಜ್ಜೆ ಇಡಬೇಕು.

ಉತ್ತಿಷ್ಠತ ಜಾಗ್ರತ ಪ್ರಾಪ್ಯ ವರಾನ್ ನಿಬೋಧತ ।
ಕ್ಷುರಸ್ಯ ಧಾರಾ ನಿಶಿತಾ ದುರತ್ಯಯಾ ದುರ್ಗಂ ಪಥಸ್ತತ್ ಕವಯೋ ವದಂತಿ ॥೧೪॥

ಯಮನ ಉಪದೇಶವನ್ನು ನಚಿಕೇತನ ಜೊತೆಗೆ ಕೇಳುತ್ತಿರುವ ಎಲ್ಲರನ್ನು ಉದ್ದೇಶಿಸಿ ಯಮ ಹೇಳುತ್ತಾನೆ: "ಏಳಿ, ಎದ್ದೇಳಿ, ಅಜ್ಞಾನವೆಂಬ ಹೊದಿಕೆಯನ್ನು ಹೊದ್ದುಕೊಂಡು ನಿಮ್ಮ ಜೀವನವನ್ನು ಹಾಳು ಮಾಡಿಕೊಳ್ಳಬೇಡಿ; ಜ್ಞಾನಿಗಳಲ್ಲಿ ತಿಳುವಳಿಕೆಯ ವರವನ್ನು ಕೇಳಿ ಪಡೆಯಿರಿ" ಎಂದು. ಭಗವಂತನ ಕಡೆಗೆ ಸಾಗುವ ಮಾರ್ಗ ಬಹಳ ದುರ್ಗಮ. ಅದು ಕತ್ತಿಯ ಅಲುಗಿನ ಮೇಲಿನ ನಡೆಯಂತೆ. "ಇಂತಹ ಮಾರ್ಗದಲ್ಲಿನ ಕಷ್ಟಗಳನ್ನು ಸಹಿಸಿಕೊಂಡು ಮುನ್ನಡೆಯಬಲ್ಲವರು ಭಗವಂತನನ್ನು ಸೇರಬಲ್ಲರು ಎಂದು ಜ್ಞಾನಿಗಳು ಹೇಳುತ್ತಾರೆ" ಎನ್ನುತ್ತಾನೆ ಯಮ. [ಈ ಶ್ಲೋಕದಲ್ಲಿ ಕವಿಗಳು ಎನ್ನುವ ಪದ ಬಳಕೆಯಾಗಿದೆ. ಇಲ್ಲಿ ಕವಿಗಳು ಎಂದರೆ: ಎಲ್ಲಾ ಶಬ್ದಗಳ ಅರ್ಥವನ್ನು ತಿಳಿದು

ಪ್ರಯೋಗಿಸಬಲ್ಲ ಜ್ಞಾನಿಗಳು ಎಂದರ್ಥ]. ಆದ್ದರಿಂದ "ಅಜ್ಞಾನದ ನಿದ್ರೆ ಸಾಕು, ಮೈಕೊಡವಿ ಎದ್ದೇಳಿ, ಹೋಗುವ ಮಾರ್ಗ ದುರ್ಗಮವಾದರೂ ಹೋಗಿ ಸೇರಲೇಬೇಕಾದ ಆನಂದಸಾಗರದಿಂದ ವಂಚಿತರಾಗದಿರಿ" ಎಂದು ಇಲ್ಲಿ ಯಮ ಇಡೀ ಮಾನವ ಜನಾಂಗವನ್ನು ಎಚ್ಚರಿಸಿದ್ದಾನೆ.

ಅಶಬ್ದಮಸ್ಪರ್ಶಮರೂಪಮವ್ಯಯಂ ತಥಾಽರಸಂ ನಿತ್ಯಮಗಂಧವಚ್ಚ ಯತ್ ।
ಅನಾದ್ಯನಂತಂ ಮಹತಃ ಪರಂ ಧ್ರುವಂ ನಿಚಾಯ್ಯ ತನ್ಮೃತ್ಯುಮುಖಾತ್ ಪ್ರಮುಚ್ಯತೇ ॥೧೫॥

ಈ ಶ್ಲೋಕ ಮೊದಲ ಅಧ್ಯಾಯದ ಉಪಸಂಹಾರ ರೂಪದಲ್ಲಿದೆ. ಭಗವಂತನನ್ನು ಚಿಂತಿಸಲು ಪ್ರಾಕೃತವಾದ ಪ್ರಪಂಚದಿಂದ ಸ್ವಲ್ಪ ಬೇರೆಯಾದ ದೃಷ್ಟಿಕೋನ ಬೇಕು ಎನ್ನುವುದನ್ನು ಈ ಶ್ಲೋಕದಲ್ಲಿ ವಿವರಿಸಲಾಗಿದೆ. ಈ ಪ್ರಪಂಚದಲ್ಲಿ ನಮಗೆ ತಿಳಿದಿರುವುದು ಪಂಚಭೂತಗಳು ಮತ್ತು ಪಂಚತನ್ಮಾತ್ರೆಗಳು(ಗಂಧ, ರಸ, ರೂಪ, ಸ್ಪರ್ಶ, ಶಬ್ದ). ನಮ್ಮ ಎಲ್ಲಾ ಅನುಭವಗಳೂ ಕೂಡಾ ಈ ಐದು ವಿಷಯಗಳ ಸುತ್ತವೇ ಸುತ್ತುತ್ತಿರುತ್ತವೆ. ನಾವು ಈ ಐದು ವಿಷಯಗಳನ್ನು ದಾಟಿ ಹೋಗದೇ ಭಗವಂತ ತಿಳಿಯುವುದಿಲ್ಲ. ಭಗವಂತ ಭೌತಿಕವಾಗಿ ಮೂಸುವ, ರುಚಿಸುವ, ಕಾಣುವ, ಮುಟ್ಟುವ ಮತ್ತು ಕೇಳುವ ಯಾವ ಬಗೆಯಲ್ಲೂ ಇಲ್ಲ. ನಾವು ಭೌತಿಕವಾಗಿ ಕಾಣುವ ಎಲ್ಲಾ ವಸ್ತುಗಳಿಗೂ ಹುಟ್ಟು-ಸಾವಿದೆ. ಆದರೆ ಭಗವಂತ ನಿತ್ಯ-ಸತ್ಯ. ಆತನಿಗೆ ತುದಿ-ಮೊದಲಿಲ್ಲ. ನಮ್ಮೆಲ್ಲರ ತಂದೆ ಆತ, ಆದರೆ ಆತನನ್ನು ಸೃಷ್ಟಿ ಮಾಡಿದ ಹಿರಿದಾದ ಶಕ್ತಿ ಇನ್ನೊಂದಿಲ್ಲ. ಇದಕ್ಕಾಗಿ ಪುರಂದರದಾಸರು "ನನಗೆ ನಿನ್ನಂತಹ ಅಪ್ಪನುಂಟು, ನಿನ್ನ ಅಪ್ಪನ ತೋರೋ" ಎಂದು ಹಾಡಿರುವುದು. ಜೀವಗಳಲ್ಲೇ ಶ್ರೇಷ್ಠತತ್ವವಾದ ಬ್ರಹ್ಮ-ವಾಯುವಿಗಿಂತಲೂ ಆಚೆಗಿರುವ, ಎಂದೂ ಬದಲಾಗದ ಅಂತಹ ಭಗವಂತನನ್ನು ನಿಶ್ಚಯವಾಗಿ ಅರ್ಥಮಾಡಿಕೊಂಡು, ಸಾಕ್ಷಾತ್ಕರಿಸಿಕೊಂಡು, ಉಪಾಸನೆ ಮಾಡುವವರು ಎಂದೂ ಮೃತ್ಯುವಿನ ಸುಳಿಗೆ ಸಿಗುವುದಿಲ್ಲ. ಭಗವದ್ ಭಕ್ತರನ್ನು ತಡೆಯುವ ಅಧಿಕಾರ ನನಗೂ ಇಲ್ಲ ಎಂದಿದ್ದಾನೆ ಯಮ. ಭಾಗವತದಲ್ಲಿ ಬರುವ ಅಜಾಮಿಳನ ಕಥೆ ಇದಕ್ಕೆ ಶ್ರೇಷ್ಠ ದೃಷ್ಟಾಂತ.

ಮೊದಲ ಅಧ್ಯಾಯದ ಕೊನೆಯಲ್ಲಿ ಯಮ ಇಲ್ಲಿ ವಿವರಿಸಿದ ಭಗವಂತನ ಜ್ಞಾನವನ್ನು ತಿಳಿದು ಉಪಾಸನೆ ಮಾಡುವುದರ ಫಲವನ್ನು ವಿವರಿಸಿದ್ದಾನೆ. ಮುಂದಿನ ಎರಡು ಶ್ಲೋಕ ಈ ಅಧ್ಯಾಯದ ಫಲಶ್ರುತಿ ರೂಪದಲ್ಲಿದೆ.

ನಾಚಿಕೇತಮುಪಾಖ್ಯಾನಂ ಮೃತ್ಯುಪ್ರೋಕ್ತಂ ಸನಾತನಮ್ ।
ಉಕ್ತ್ವಾ ಶ್ರುತ್ವಾ ಚ ಮೇಧಾವೀ ಬ್ರಹ್ಮಲೋಕೇ ಮಹೀಯತೇ ॥೧೬॥

ಯಮ ಹೇಳುತ್ತಾನೆ: ಇದು ನಚಿಕೇತನಿಗೆ ಉಪದೇಶ ಮಾಡಿರುವ, ನಾಚಿಕೇತಾಗ್ನಿಯಲ್ಲಿ ಸನ್ನಿಹಿತನಾಗಿರುವ ಭಗವಂತನ ಉಪಾಖ್ಯಾನ(ಶ್ರೇಷ್ಠವಾದ ವಿವರಣೆ). ಮೃತ್ಯು ದೇವತೆಯಾದ ನಾನು ಹೇಳಿರುವ ಈ ಉಪಾಖ್ಯಾನ ಸನಾತನವಾದುದ್ದು. ಅನಾದಿ-ಅನಂತ ಕಾಲದಲ್ಲೂ ಜ್ಞಾನಿಗಳು ಈ ಉಪಾಸನೆಯಿಂದಲೇ ಭಗವಂತನನ್ನು ಪಡೆದರು. ಎಂದೆಂದೂ ಇರುವ ಈ ಉಪಾಖ್ಯಾನದಲ್ಲಿ, ಈ ಉಪಾಸನೆಯಲ್ಲಿ ಬದಲಾವಣೆ ಇಲ್ಲ. ಎಲ್ಲಾ ಕಾಲದಲ್ಲೂ ಭಗವಂತನನ್ನು ಪಡೆಯಲು ಇರುವ ಏಕಮಾತ್ರ ವಿಧಾನವಿದು. ಇದನ್ನು ಹೇಳಿ ಮತ್ತು ಕೇಳಿ ಯಾರು ಜ್ಞಾನವನ್ನು ಬೆಳೆಸಿಕೊಳ್ಳುತ್ತಾರೋ ಅವರಿಗೆ ಭಗವದ್ ಲೋಕ ಪ್ರಾಪ್ತಿಯಾಗುತ್ತದೆ.

ಯ ಇಮಂ ಪರಮಂ ಗುಹ್ಯಂ ಶ್ರಾವಯೇದ್ ಬ್ರಹ್ಮಸಂಸದಿ ।
ಪ್ರಯತಃ ಶ್ರಾದ್ಧಕಾಲೇ ವಾ ತದಾನಂತ್ಯಾಯ ಕಲ್ಪತೇ ।
ತದಾನಂತ್ಯಾಯ ಕಲ್ಪತ ಇತಿ ॥೧೭॥

ಪರಮ ಗುಹ್ಯವಾದ ಈ ವಿದ್ಯೆ ಯೋಗ್ಯತೆ ಇಲ್ಲದವರಿಗೆ ಮತ್ತು ದುರುಪಯೋಗ ಮಾಡಿಕೊಳ್ಳುವವರಿಗೆ ಹೇಳುವಂತಹದ್ದಲ್ಲ. "ಜ್ಞಾನಿಗಳ ಸಭೆಯಲ್ಲಿ ಈ ವಿದ್ಯೆಯ ಪ್ರವಚನ ಮಾಡಿದರೆ ಅನಂತ ಫಲ" ಎನ್ನುತ್ತಾನೆ ಯಮ. ಶ್ರಾದ್ಧ ಕಾಲದಲ್ಲಿ ಜ್ಞಾನಿಗಳ ಸಮ್ಮುಖದಲ್ಲಿ ಕಾಠಕೋಪನಿಷತ್ತಿನ ಪ್ರವಚನ ಬಹಳ ಶ್ರೇಷ್ಠ.

ಇಲ್ಲಿ ಎರಡು ಬಾರಿ "ತದಾನಂತ್ಯಾಯ ಕಲ್ಪತ" ಎನ್ನುವ ವಾಕ್ಯವನ್ನು ಬಳಸಲಾಗಿದೆ. ಇದು ಹಿಂದಿನ ಕಾಲದ ಸಂಪ್ರದಾಯ. ಒಂದು ಅಧ್ಯಾಯ ಮುಗಿಯಿತು ಎಂದು ತೋರಿಸಲು ಕೊನೆಯ ವಾಕ್ಯವನ್ನು ಎರಡು ಸಲ ಹೇಳುತ್ತಾರೆ. ಮೊದಲ ಅಧ್ಯಾಯ ಇಲ್ಲಿಗೆ ಮುಗಿಯಿತು ಎನ್ನುವುದು ಇದರ ಅರ್ಥ. ಇಲ್ಲಿಗೆ ಯಮನ ಉಪದೇಶದ ಒಂದು ಘಟ್ಟ ಮುಗಿಯಿತು.

॥ ಇತಿ ಕಾಠಕೋಪನಿಷದಿ ಪ್ರಥಮಾಧ್ಯಾಯೇ ತೃತೀಯಾ ವಲ್ಲೀ ॥
ಇಲ್ಲಿಗೆ ಕಾಠಕೋಪನಿಷತ್ತಿನ ಮೊದಲ ಅಧ್ಯಾಯ ಮುಗಿಯಿತು

*******

# ಅಧ್ಯಾಯ-೨

## ವಲ್ಲೀ-೦೧

ಪರಾಂಚಿ ಖಾನಿ ವ್ಯತೃಣತ್ ಸ್ವಯಂಭೂಸ್ತಸ್ಮಾತ್ಪರಾಙ್ಪಶ್ಯತಿ ನಾಂತರಾತ್ಮನ್ ।
ಕಶ್ಚಿದ್ಧೀರಃ ಪ್ರತ್ಯಗಾತ್ಮಾನಮೈಕ್ಷದಾವೃತ್ತಚಕ್ಷುರಮೃತತ್ವಮಿಚ್ಛನ್ ॥೧॥

ಸ್ವತಂತ್ರವಾಗಿ/ತನ್ನಿಚ್ಛೆಯಂತೆ ತಾನಿರುವ ಭಗವಂತ(ಸ್ವಯಂಭೂಃ), ಮೊದಲು ಇಂದ್ರಿಯಗಳನ್ನು ಸೃಷ್ಟಿ ಮಾಡಿದನಂತೆ. ಹೀಗೆ ಸೃಷ್ಟಿ ಮಾಡುವಾಗ ಆತ ಬಹಳ ತಿರಸ್ಕಾರದಿಂದ ಬಹಿರ್ಮುಖವಾಗಿ ಸೃಷ್ಟಿಸಿದನಂತೆ. ಈ ಕಾರಣದಿಂದಾಗಿ ನಮ್ಮ ಯಾವ ಇಂದ್ರಿಯಗಳೂ ಅಂತರಂಗದ ಸತ್ಯವನ್ನು ಗ್ರಹಿಸಲಾರದಾದವು. ಭಗವಂತ ಇಂದ್ರಿಯಗಳನ್ನು ಈ ರೀತಿ ಸೃಷ್ಟಿ ಮಾಡಲು ಕಾರಣವೇನೆಂದರೆ: ಯಾರಿಗೆ ನಿಜವಾದ ಅರ್ಹತೆ ಇದೆಯೋ ಅವರಷ್ಟೇ ಅಂತರಂಗವನ್ನು ತಿಳಿಯಬೇಕು ಎನ್ನುವುದು. ಧೀರನಾದವನಿಗೆ ಅಂತರಂಗವನ್ನು ಕಾಣುವ ಅವಕಾಶವನ್ನು ಭಗವಂತ ಕಲ್ಪಿಸಿದ್ದಾನೆ. ಈ ಹಿಂದೆ ಹೇಳಿದಂತೆ ಭಗವಂತನತ್ತ ಪಯಣ ಮಾಡುವ ಮಾರ್ಗ ಬಹಳ ದುರ್ಗಮ. ಅದು ಕತ್ತಿಯ ಅಲುಗಿನ ನಡೆ. ಅರಿವಿನ ಹಸಿವುಳ್ಳವರಲ್ಲಿ, ಅಧಮ್ಯ ಬಯಕೆಯುಳ್ಳವರಲ್ಲಿ, ಏನೇ ಬರಲಿ ಭಗವಂತನನ್ನು ಸೇರಿಯೇ ಸೇರುತ್ತೇನೆ ಎನ್ನುವ ಛಲ ಉಳ್ಳವರಲ್ಲಿ ಯಾರೋ ಒಬ್ಬ(ಧೀರ) ಹಠದಿಂದ ಮುಂದುವರಿದು ತನ್ನ ಅಂತರಾತ್ಮನಾದ ಭಗವಂತನನ್ನು ಕಾಣುತ್ತಾನೆ.

ಭಗವಂತನನ್ನು ಕಾಣಬೇಕಾದರೆ ಮೊದಲು ನಾವು ನಮ್ಮ ಹೊರಗಣ್ಣನ್ನು ಮುಚ್ಚಿ ನಮ್ಮ ಒಳಗಣ್ಣನ್ನು ತೆರೆಯಬೇಕು. ಇಲ್ಲಿ ಮರಳಿ ಹುಟ್ಟಬಾರದು ಎನ್ನುವ ಅಧಮ್ಯ ಬಯಕೆ ಬಹಳ ಮುಖ್ಯ. ಜ್ಞಾನದಿಂದ ಬರುವ ಸ್ವರೂಪಾನಂದವನ್ನು ಬಯಸುವವನು ಅಂತರ್ಮುಖನಾಗಿ ಕುಳಿತು ತನ್ನೊಳಗಿರುವ ಭಗವಂತನನ್ನು ಕಾಣಬಲ್ಲ. ಈ ಶ್ಲೋಕದಲ್ಲಿ ಮುಖ್ಯವಾಗಿ ಮೂರು ವಿಚಾರಗಳನ್ನು ಸ್ಪಷ್ಟವಾಗಿ ಹೇಳಲಾಗಿದೆ. (೧) ನಮ್ಮ ಬಾಹ್ಯ ಇಂದ್ರಿಯಗಳಿಂದ ದೇವರನ್ನು ಒಲಿಸಿಕೊಳ್ಳುವ ಪ್ರಯತ್ನ ವ್ಯರ್ಥ. (೨) ಭಗವಂತನನ್ನು ಕಾಣಬೇಕಾದರೆ ಹೊರಗಿನ ಇಂದ್ರಿಯಗಳನ್ನು ಮುಚ್ಚಿ ಒಳಗಿನ ಇಂದ್ರಿಯವನ್ನು ತೆರೆಯಬೇಕು. (೩) ಜ್ಞಾನದ ಹಸಿವು ಮತ್ತು ಸಾಧನೆಯ ಹಾದಿಯಲ್ಲಿ ಯಾವುದೇ ವಿಘ್ನ ಬಂದರೂ, ವಿಚಲಿತನಾಗದೇ ಮುನ್ನಡೆಯುವ ಧೈರ್ಯ ನಮ್ಮಲ್ಲಿರಬೇಕು.

ಇಲ್ಲಿ ನಮಗೊಂದು ಪ್ರಶ್ನೆ ಬರಬಹುದು. ಸಾಧನೆಯ ಹಾದಿಯಲ್ಲಿ ಅನೇಕ ವಿಘ್ನಗಳು ಏಕೆ ಬರುತ್ತವೆ ಎಂದು. ಸಾಧನೆಯ ಹಾದಿಯಲ್ಲಿ ಸಾಮಾನ್ಯವಾಗಿ ವಿಘ್ನ ತಂದೊಡ್ಡುವವರು ದೇವತೆಗಳು! ಇದು ಯಾವುದೋ ಹಗೆತನದಿಂದಲ್ಲ. ಕೇವಲ ನಮ್ಮ ಪರೀಕ್ಷೆಗಾಗಿ ಅವರು ತಂದೊಡ್ಡುವ ಸವಾಲುಗಳಿವು. ನಾವು ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಮುಂದೆ ಸಾಗಬೇಕು ಎನ್ನುವುದು ಅವರ ಹಾರೈಕೆಯಾಗಿರುತ್ತದೆ. ಇದಕ್ಕಾಗಿ ನಾವು ಅಧ್ಯಾತ್ಮ ಸಾಧನೆಯಲ್ಲಿ ಎಂದೂ ಧೈರ್ಯಗೆಡಬಾರದು. ಇದಕ್ಕೆ ಉತ್ತಮ ಉದಾಹರಣೆ ಧ್ರುವ. ಐದು ವರ್ಷದ ಮಗು ಭಗವಂತನನ್ನು ಕಾಣಬೇಕು ಎನ್ನುವ ಅದಮ್ಯ ಬಯಕೆಯಿಂದ ಕಾಡಿನಲ್ಲಿ ತಪಸ್ಸನ್ನಾಚರಿಸುತ್ತಿರುವಾಗ ಆತನಿಗೆ ಬ್ರಹ್ಮರಾಕ್ಷಸರಂತಹ ಭೀಕರ ದೃಶ್ಯ ಎದುರಾಗುತ್ತದೆ. ಆದರೆ ಆತ ವಿಚಲಿತನಾಗಲಿಲ್ಲ. ಧೈರ್ಯದಿಂದ ಹಠ ಹಿಡಿದು

ಕುಳಿತಿದ್ದರಿಂದ ಆತನಿಗೆ ಭಗವಂತನ ದರ್ಶನವಾಯಿತು. ಹೀಗೆ ನಮ್ಮ ಮುಂದೆ ಎಂತಹ ಪರೀಕ್ಷೆ ಎದುರಾದರೂ ಕೂಡಾ, ನಾವು ಕಂಗೆಡದೆ ಮುಂದೆ ಸಾಗಿದರೆ ಆಗ ಭಗವಂತನ ದರ್ಶನ ಸಾಧ್ಯ.

ಪರಾಚಃ ಕಾಮಾನನುಯಂತಿ ಬಾಲಾ ಸ್ತೇ ಮೃತ್ಯೋರ್ಯಂತಿ ವಿತತಸ್ಯ ಪಾಶಮ್ ।
ಅಥ ಧೀರಾ ಅಮೃತತ್ವಂ ವಿದಿತ್ವಾ ಧ್ರುವಮಧ್ರುವೇಷ್ವಿಹ ನ ಪ್ರಾರ್ಥಯಂತೇ ॥೨॥

ಸಾಧನೆಯ ಹಾದಿಯಲ್ಲಿ ಬಾಲಿಷರು ಬಹಿರ್ಮುಖಿಗಳಾಗಿ ದಾರಿ ತಪ್ಪುತ್ತಾರೆ. ವಿಶ್ವಾಮಿತ್ರರಂತಹ ಮಹಾಮುನಿಗಳೂ ಇದಕ್ಕೆ ಹೊರತಲ್ಲ. ಸಾಮಾನ್ಯವಾಗಿ ಬಾಲಕರು ಬಾಹ್ಯ ಕಾಮನೆಯ ಬೆನ್ನು ಹತ್ತಿ ಹೋಗುವುದು ಸಹಜ. ಆದರೆ ನಚಿಕೇತನನ್ನು ಯಾವ ಪ್ರಲೋಭನೆಯೂ ಕಾಡಲಿಲ್ಲ. ಕೇವಲ ಬಾಹ್ಯ ಕಾಮನೆಯ ಬೆನ್ನುಹತ್ತುವ ಮಂದಿ ಸುಲಭವಾಗಿ ಮೃತ್ಯುವಿನ ಪಾಶಕ್ಕೆ ಬಲಿಯಾಗುತ್ತಾರೆ. ಅವರೆಂದೂ ಅಮೃತತ್ವವನ್ನು ಪಡೆಯುವುದಿಲ್ಲ. ಧೀರನಾದವನು ಚಂಚಲವಾದ ಈ ಪ್ರಪಂಚದಲ್ಲಿದ್ದುಕೊಂಡೇ, ಅಸ್ಥಿರ, ನಶ್ವರ ಮತ್ತು ಅಶಾಶ್ವತವಾದ ಬಾಹ್ಯ ವಿಷಯಗಳಿಗೆ ಬಲಿಬೀಳದೇ, ಧೈರ್ಯದಿಂದ ಮುನ್ನಡೆಯುತ್ತಾನೆ.
[ಈ ವಲ್ಲಿಯಲ್ಲಿನ ಮುಂದಿನ ಶ್ಲೋಕಕ್ಕೆ ಹೋಗುವ ಮುನ್ನ, ಅರ್ಥಾನುಸಂಧಾನಕ್ಕೆ ಇಲ್ಲಿ ಹೆಚ್ಚು ಅನ್ವಿತವಾಗುವ, ಈ ಅಧ್ಯಾಯದ ಎರಡನೇ ವಲ್ಲಿಯಲ್ಲಿ ಬರುವ ಮೂರು ಮಂತ್ರಗಳ ವಿಶ್ಲೇಷಣೆ ಈ ಕೆಳಗೆ ನೀಡಲಾಗಿದೆ. ಮೊದಲು ಪ್ರತಿಜ್ಞೆ ಮಾಡಿ ಆ ನಂತರ ಉಪದೇಶ ಮಾಡುವುದು ಸಾಮಾನ್ಯವಾದುದರಿಂದ, ಈ ಮೂರು ಶ್ಲೋಕಗಳ ವಿಶ್ಲೇಷಣೆಯನ್ನು ಇಲ್ಲಿ ನೀಡಲಾಗಿದೆ.]

ಹಂತ ತ ಇದಂ ಪ್ರವಕ್ಷ್ಯಾಮಿ ಗುಹ್ಯಂ ಬ್ರಹ್ಮ ಸನಾತನಮ್ ।
ಯಥಾ ಚ ಮರಣಂ ಪ್ರಾಪ್ಯ ಆತ್ಮಾ ಭವತಿ ಗೌತಮ ॥೨-೨-೬॥

ಯಮ ನಚಿಕೇತನ ಅಧ್ಯಾತ್ಮ ಆಸಕ್ತಿಯನ್ನು ಮೆಚ್ಚಿ ಹೇಳುತ್ತಾನೆ: " ಈ ಚಿಕ್ಕ ವಯಸ್ಸಿನಲ್ಲಿ ಅಧ್ಯಾತ್ಮವೇ ಬೇಕು ಎಂದು ನೀನು ಬಯಸುತ್ತಿರುವುದು ಬಹಳ ಆಶ್ಚರ್ಯ(ಹಂತ). ನಿನ್ನಲ್ಲಿ ಇಷ್ಟೊಂದು ಆಸಕ್ತಿ ಇರುವುದರಿಂದ, ಪರಮ ಗುಹ್ಯವೂ, ಸನಾತನವೂ ಆದ ಈ ವಿದ್ಯೆಯನ್ನು ನಿನಗೆ ಪ್ರವಚನ ಮಾಡುತ್ತೇನೆ" ಎಂದು. ಇಲ್ಲಿ 'ಪ್ರವಕ್ಷ್ಯಾಮಿ' ಎನ್ನುವ ಪದ ಬಳಕೆಯಾಗಿದೆ. ಪ್ರವಕ್ಷ್ಯಾಮಿ ಎಂದರೆ ಪ್ರವಚನ ಮಾಡುವುದು. 'ಪ್ರವಚನ ಎನ್ನುವ ಪದಕ್ಕೆ ಬಹಳ ಹಿರಿದಾದ ಅರ್ಥವಿದೆ. ಸರ್ವೋತ್ಕೃಷ್ಟನಾದ ಭಗವಂತನ ಬಗೆಗಿನ ಮಾತು –ಪ್ರವಚನ(ಪ್ರಕೃಷ್ಟಂ ವಚನಮ್); ಪ್ರಾಚೀನರು ಕಂಡ ಭಗವಂತನ ಬಗೆಗಿನ ಮಂತ್ರಗಳನ್ನು ಇಂದಿನ ಜನರಿಗೆ ಅರ್ಥವಾಗುವಂತೆ ಹೇಳುವುದು-ಪ್ರವಚನ(ಪ್ರಥನಂ ವಚನಮ್). "ಸರ್ವಕಾಲದಲ್ಲೂ ಇರತಕ್ಕಂತಹ, ಸರ್ವನಿಯಾಮಕನಾದ, ಎಲ್ಲಕ್ಕಿಂತಲೂ ಹಿರಿದಾದ, ಗುಣಪೂರ್ಣ ಭಗವಂತನ ಬಗೆಗೆ ಹೇಳುತ್ತೇನೆ" ಎನ್ನುತ್ತಾನೆ ಯಮ.
ಮೊದಲ ಅಧ್ಯಾಯದಲ್ಲಿ ನಾವು ಈಗಾಗಲೇ ನೋಡಿದಂತೆ 'ಜೀವ ಕೊನೆಯದಾಗಿ ಸತ್ತ ಮೇಲೆ ಏನಾಗುತ್ತಾನೆ, ಮೋಕ್ಷದಲ್ಲಿ ಜೀವನ ಸ್ಥಿತಿ ಏನು' ಎಂದು ತಿಳಿಯುವ ಜಿಜ್ಞಾಸೆಯನ್ನು ನಚಿಕೇತ ಯಮನ ಮುಂದೆ ಇಟ್ಟಿದ್ದ. ಆತನ ಪ್ರಶ್ನೆಗೆ ಉತ್ತರ ರೂಪವಾಗಿ ಯಮ ಹೇಳುತ್ತಾನೆ: " ಒಬ್ಬ ಮನುಷ್ಯ ಸತ್ತ ನಂತರ ಏನಾಗುತ್ತಾನೆ, ಸಂಸಾರ ಚಕ್ರದಲ್ಲಿ ಸುತ್ತಿ ಕೊನೇಯ ಸಾವು ಬಂದಾಗ ಮೋಕ್ಷದಲ್ಲಿ ಜೀವನ ಸ್ಥಿತಿ ಏನು ಎನ್ನುವುದನ್ನು ನಿನಗೆ ವಿವರಿಸುತ್ತೇನೆ" ಎಂದು.

ಈ ಶ್ಲೋಕದಲ್ಲಿ ಯಮ ನಚಿಕೇತನನ್ನು 'ಗೌತಮನೇ' ಎಂದು ಸಂಬೋಧಿಸಿದ್ದಾನೆ. ನಚಿಕೇತ ಗೌತಮ ಗೋತ್ರದವನಾದ್ದರಿಂದ ಈ ಸಂಬೋಧನೆ. "ಒಳ್ಳೆಯ ಋಷಿ ಪರಂಪರೆಯಲ್ಲಿ ಬಂದಿರುವ ನಿನಗೆ ಅನುವಂಶೀಯವಾಗಿ ವಿಷಯವನ್ನು ಗ್ರಹಣ ಮಾಡುವ ಶಕ್ತಿ ಇದೆ. ಹಾಗಾಗಿ ನಿನಗೆ ಭಗವಂತನ ಬಗೆಗೆ ಹಾಗೂ ಸತ್ತ ನಂತರ ಜೀವದ ಗತಿ ಏನು ಎನ್ನುವುದನ್ನು ವಿವರಿಸುತ್ತೇನೆ" ಎನ್ನುವುದು ಈ ಸಂಬೋಧನೆಯ ಹಿಂದಿರುವ ಧ್ವನಿ.

ಯೋನಿಮನ್ಯೇ ಪ್ರಪದ್ಯಂತೇ ಶರೀರತ್ವಾಯ ದೇಹಿನಃ ।
ಸ್ಥಾಣುಮನ್ಯೇಽನುಸಂಯಂತಿ ಯಥಾಕರ್ಮ ಯಥಾಶ್ರುತಮ್ ॥೨-೨-೭॥

ಸತ್ತಮೇಲೆ ಜೀವ ತನ್ನ ಪುಣ್ಯ-ಪಾಪ ಫಲಕ್ಕನುಗುಣವಾಗಿ ಪುಣ್ಯಲೋಕದಲ್ಲೋ ಅಥವಾ ನರಕ ಲೋಕದಲ್ಲೋ ತಾನು ಪಡೆದ ಫಲವನ್ನು ಅನುಭವಿಸುತ್ತಾನೆ. ಆನಂತರ ಪರ್ಜನ್ಯ ಲೋಕದಿಂದ ವಾತಾವರಣವನ್ನು ಸೇರಿ ಅಲ್ಲಿಂದ ಮಳೆಯೊಂದಿಗೆ ಭೂಮಿಗಿಳಿದು, ಭೂಮಿಯಲ್ಲಿ ಮರಳಿ ಹುಟ್ಟುತ್ತಾನೆ. ಈ ರೀತಿ ಹುಟ್ಟಿನಲ್ಲಿ ಮುಖ್ಯವಾಗಿ ಎರಡು ಬಗೆ. ಒಂದು ನಾವು ತಿನ್ನುವ ಗಿಡ ಬಳ್ಳಿಯಲ್ಲಿ ಸೇರಿಕೊಂಡು ಅದರ ಮೂಲಕ ಗಂಡಿನ ದೇಹವನ್ನು ಪ್ರವೇಶಿಸಿ, ಅಲ್ಲಿಂದ ಹೆಣ್ಣಿನ ಗರ್ಭವನ್ನು ಸೇರಿ, ಅಲ್ಲಿ ದೇಹವನ್ನು ಪಡೆದು ಹುಟ್ಟುವುದು; ಇನ್ನೊಂದು ನೇರವಾಗಿ ಗಿಡ ಬಳ್ಳಿಯಾಗಿ ಹುಟ್ಟುವುದು. ಅವರವರ ಕರ್ಮ ಮತ್ತು ಜ್ಞಾನಕ್ಕನುಗುಣವಾಗಿ ಅವರವರ ಜನನ ನಿರ್ಧಾರವಾಗುತ್ತದೆ. ಕೆಲವೊಮ್ಮೆ ಜೀವ ತಾಯಿಯ ಗರ್ಭವನ್ನು ಸೇರಲು ಅನೇಕ ಯುಗಗಳನ್ನೇ ಕಾಯಬೇಕಾಗಬಹುದು. ನೂರಾರು ಜೀವಾಣುಗಳಲ್ಲಿ ಕೇವಲ ಒಂದು ಜೀವಾಣು ಮಾತ್ರ ತಾಯಿಯ ಗರ್ಭವನ್ನು ಸೇರುವುದರಲ್ಲಿ ಯಶಸ್ವಿಯಾಗುತ್ತದೆ ಹಾಗೂ ಉಳಿದ ಜೀವಾಣುಗಳು ಮರಳಿ ಪ್ರಯತ್ನಿಸಬೇಕಾಗುತ್ತದೆ. ಎಲ್ಲವೂ ನಮ್ಮ ಕರ್ಮಫಲಕ್ಕನುಗುಣವಾಗಿಯೇ ನಡೆಯುತ್ತದೆ.

ಯ ಏಷ ಸುಪ್ತೇಷು ಜಾಗರ್ತಿ ಕಾಮಂ ಕಾಮಂ ಪುರುಷೋ ನಿರ್ಮಿಮಾಣಃ ।
ತದೇವ ಶುಕ್ರಂ ತದ್ಬ್ರಹ್ಮ ತದೇವಾಮೃತಮುಚ್ಯತೇ ।
ತಸ್ಮಿಂಲ್ಲೋಕಾಃ ಶ್ರಿತಾಃ ಸರ್ವೇ ತದು ನಾತ್ಯೇತಿ ಕಶ್ಚನ । ಏತದ್ವೈ ತತ್ ॥೨-೨-೮॥

ಭಗವಂತನ ಕುರಿತು ವಿವರಿಸುತ್ತಾ ಯಮ ಹೇಳುತ್ತಾನೆ: "ಭಗವಂತ ಎಲ್ಲರೂ ಮಲಗಿದ್ದಾಗಲೂ ತಾನು ಎಚ್ಚರವಾಗಿದ್ದು, ಪ್ರಪಂಚದ ಎಲ್ಲಾ ಕಡೆ ಇರುವ ಎಲ್ಲಾ ಜೀವರನ್ನು ನಿಯಂತ್ರಿಸುತ್ತಿರುತ್ತಾನೆ" ಎಂದು. ಎಲ್ಲರೂ ನಿದ್ರಿಸುವ ಸಮಯ ಪ್ರಳಯ ಕಾಲ ಕೂಡಾ ಹೌದು. ಪ್ರಳಯ ಕಾಲದಲ್ಲೂ ಕೂಡಾ ಎಚ್ಚರವಾಗಿರುವ ಭಗವಂತ, ನಿರಂತರ ಸೃಷ್ಟಿ ಕ್ರಿಯೆಯಲ್ಲಿ ತೊಡಗಿ ಎಂದೂ ನಿದ್ದೆ ಮಾಡದ ನಿತ್ಯ ಚೈತನ್ಯ. ಇಲ್ಲಿ ಯಮ ಭಗವಂತನನ್ನು 'ಪುರುಷಃ' ಎಂದು ಸಂಬೋಧಿಸಿದ್ದಾನೆ. ಶರೀರ ಎನ್ನುವ ಪುರದಲ್ಲಿರುವವ, ಬ್ರಹ್ಮಾಂಡವೆನ್ನುವ ಪುರದಲ್ಲಿರುವವ, ಇಡೀ ವಿಶ್ವವನ್ನು ವ್ಯಾಪಿಸಿ ನಿಂತವ-ಪುರುಷಃ ನಾಮಕ ಭಗವಂತ.
ದುಃಖವಿಲ್ಲದ, ಯಾವ ದೋಷದ ಸ್ಪರ್ಶವೂ ಇಲ್ಲದ ವಸ್ತು ಆ ಭಗವಂತನೊಬ್ಬನೇ. "ಇಂತಹ ಭಗವಂತನನ್ನು 'ಬ್ರಹ್ಮ' ಎಂದು ಕರೆಯುತ್ತಾರೆ" ಎನ್ನುತ್ತಾನೆ ಯಮ. ಬ್ರಹ್ಮ ಎಂದರೆ ಎಲ್ಲಾ ವಿಷಯಗಳಲ್ಲಿ ಪರಿಪೂರ್ಣವಾದದ್ದು. ಗುಣದಿಂದ, ಕಾಲದಿಂದ, ದೇಶದಿಂದ ಪರಿಪೂರ್ಣನಾದ ಭಗವಂತ 'ಬ್ರಹ್ಮಃ'.

ನಾಶರಹಿತ ಆನಂದಮಯ ಆ ಭಗವಂತನೊಬ್ಬನೇ. ಇಡೀ ಪ್ರಪಂಚದಲ್ಲಿ ಚತುರ್ಮುಖನಿಂದ ಹಿಡಿದು ಒಂದು ಹುಲ್ಲುಗರಿಯ ತನಕ ಸಮಸ್ತ ಜೀವಜಾತವೂ ಕೂಡಾ ಆ ಅನಾಧಿ ಅನಂತವಾದ ನಿತ್ಯ-ತತ್ವವನ್ನು ಆಶ್ರಯಿಸಿಕೊಂಡಿವೆ. ಯಾರೂ ಕೂಡಾ ಭಗವಂತನನ್ನು ಮೀರಿ ಹೋಗುವುದು ಸಾಧ್ಯವಿಲ್ಲ. ಇಡೀ ವಿಶ್ವ ಭಗವಂತನಿಂದ ನಿಯತವಾಗಿದೆ ಮತ್ತು ಅವನ ಅಧೀನದಲ್ಲಿದೆ. "ನೀನು ತಿಳಿಯಬೇಕು ಎಂದಿರುವ ಬ್ರಹ್ಮತತ್ವ ಇವನೇ" ಎನ್ನುತ್ತಾನೆ ಯಮ.

ಯೇನ ರೂಪಂ ರಸಂ ಗಂಧಂ ಶಬ್ದಾನ್ ಸ್ಪರ್ಶಾಂಶ್ಚ ಮೈಥುನಾನ್ ।
ಏತೇನೈವ ವಿಜಾನಾತಿ ಕಿಮತ್ರ ಪರಿಶಿಷ್ಯತೇ । ಏತದ್ವೈ ತತ್ ॥೩॥

ಮುಂದುವರಿದು ಯಮ ಹೇಳುತ್ತಾನೆ: ನಿನ್ನ ಒಂದೊಂದು ಇಂದ್ರಿಯಗಳ ಹಿಂದಿರುವ ಶಕ್ತಿಯ ಬಗ್ಗೆ ಯೋಚಿಸು. ಆಗ ಅದು ಅನಂತಶಕ್ತ ಭಗವಂತನ ಲೀಲೆ ಎಂದು ತಿಳಿಯುತ್ತದೆ" ಎಂದು. ನಮ್ಮ ಕಣ್ಣು ರೂಪವನ್ನು ಗ್ರಹಿಸುವ ಇಂದ್ರಿಯ. ಪ್ರಪಂಚದಲ್ಲಿರುವ ಅನಂತ ರೂಪವನ್ನು  ಬೇರೆಬೇರೆಯಾಗಿ ಪ್ರತ್ಯೇಕಿಸಿ ಗ್ರಹಿಸುವ ಶಕ್ತಿ ಕಣ್ಣಿಗಿದೆ. ನಾಲಿಗೆ ರಸವನ್ನು ಗ್ರಹಿಸುವ ಇಂದ್ರಿಯ. ಮೇಲ್ನೋಟದಲ್ಲಿ ನೋಡಿದರೆ ಒಂದು ಪುಟ್ಟ ಮಾಂಸದ ತುಂಡು. ಆದರೆ ಈ ನಾಲಿಗೆಯ ಹಿಂದಿರುವ ರಸಗ್ರಹಣ ಶಕ್ತಿ ಅದ್ಭುತವಾದದ್ದು. ಒಂದೊಂದು ರಸವನ್ನೂ ಪ್ರತ್ಯೇಕಿಸಿ ಗ್ರಹಿಸುವ ಶಕ್ತಿ ಈ ನಾಲಿಗೆಗಿದೆ. ಮೂಗು ಗಂಧವನ್ನು ಗ್ರಹಿಸುವ ಇಂದ್ರಿಯ. ಪರಿಮಳಗಳಲ್ಲಿ ಅನೇಕಾನೇಕ ವಿಧ. ಈ ಪ್ರಪಂಚದಲ್ಲಿ ವಿಧವಿಧವಾದ ಹೂವುಗಳಿವೆ ಮತ್ತು ಅವುಗಳಿಗೆ ಬಗೆಬಗೆಯ ಕಂಪು. ಎಲ್ಲವನ್ನೂ ಬೇರೆಯಾಗಿ ಗ್ರಹಿಸುವ ಶಕ್ತಿ ನಮ್ಮ ಮೂಗಿಗಿದೆ.
ಕಣ್ಣು, ನಾಲಿಗೆ ಮತ್ತು ಮೂಗಿನ ಬಗ್ಗೆ ಹೇಳಿದ ಮೇಲೆ ಇಲ್ಲಿ ಕಿವಿಯ ಬಗ್ಗೆ ಹೇಳುವಾಗ 'ಶಬ್ದಗಳು' ಎಂದು ಬಹುವಚನದಲ್ಲಿ ಹೇಳಿದ್ದಾರೆ. ಕಾರಣ ಏನೆಂದರೆ ಪದ ಒಂದೇ ಆದರೂ ಕೂಡಾ ಅದನ್ನು ಉಚ್ಛರಿಸಿದಾಗ ಹೊರಹೊಮ್ಮುವ ಶಬ್ದದ ಬಗೆ ಒಂದೇ ಅಲ್ಲ. ಒಬ್ಬೊಬ್ಬರು ಒಂದೊಂದು ಬಗೆಯಲ್ಲಿ ಒಂದೇ ಪದವನ್ನು ಅನೇಕ ರೀತಿಯಲ್ಲಿ ಉಚ್ಛರಿಸುತ್ತಾರೆ. ಇದನ್ನು ಕಿವಿ ಪ್ರತ್ಯೇಕಿಸಿ ಗುರುತಿಸಬಲ್ಲದು.
ಶಬ್ದದ ನಂತರ ಸ್ಪರ್ಶ. ನಮ್ಮ ಚರ್ಮ ಪ್ರತಿಯೊಂದು ಸ್ಪರ್ಷವನ್ನು ಬೇರೆಬೇರೆಯಾಗಿ ಗ್ರಹಿಸಿ ನಮಗೆ ಆ ಅನುಭವವನ್ನು ಕೊಡುತ್ತದೆ. ಸ್ಪರ್ಶದ ಪರಾಕಾಷ್ಠೆ ಗಂಡು ಹೆಣ್ಣಿನ ಪರಸ್ಪರ ಸ್ಪರ್ಶಸುಖ. ಇದು ಇಂದ್ರಿಯಗಳಲ್ಲೇ ಅತ್ಯಂತ ಗರಿಷ್ಠ ಅನುಭವ ಕೊಡುವಂತಹದ್ದು. ಆದ್ದರಿಂದ ಅದನ್ನು ಸ್ಪರ್ಶದಿಂದ ಪ್ರತ್ಯೇಕಿಸಿ 'ಮೈಥುನ' ಎಂದು ವಿಶೇಷವಾಗಿ ಇಲ್ಲಿ ಉಲ್ಲೇಖಿಸಿದ್ದಾರೆ.
ಯಾರಿಂದ ಈ ಇಂದ್ರಿಯಗಳು ನಮಗೆ ಅನಂತ ಅನುಭವಗಳನ್ನು ಕೊಡುತ್ತವೆ? ಎಲ್ಲಿಂದ ಬಂತು ಈ ಇಂದ್ರಿಯಗಳಿಗೆ ಈ ಶಕ್ತಿ? ಇವೆಲ್ಲವೂ ಆ ಭಗವಂತನ ಕೊಡುಗೆ. ಯಾರು ಎಲ್ಲರೂ ನಿದ್ರಿಸುವಾಗ ಎಚ್ಚರವಾಗಿರುತ್ತಾನೋ ಅದೇ ಭಗವಂತನೇ ಇಲ್ಲಿ ಇಂದ್ರಿಯಗಳ ಮೂಲಕ ಅನುಭವವನ್ನು ಕೊಡುತ್ತಾನೆ. ಅವನೇ ಮೋಕ್ಷದಲ್ಲಿ ನಮ್ಮ ಸ್ವರೂಪೇಂದ್ರಿಯಗಳ ಮೂಲಕ ದುಃಖದ ಸ್ಪರ್ಶವೇ ಇಲ್ಲದ ಆನಂದದ ಅನುಭವವನ್ನು ಕೊಡುತ್ತಾನೆ. ಜೀವ ಸಂಸಾರ ಬಂಧವನ್ನು ಕಳಚಿಕೊಂಡು ಹೋದ ಮೇಲೆ ಜೀವನೊಂದಿಗೆ ಉಳಿಯುವವನು 'ಆ ಭಗವಂತ'.

ಸ್ವಪ್ನಾಂತಂ ಜಾಗರಿತಾಂತಂ ಚೋಭೌ ಯೇನಾನುಪಶ್ಯತಿ ।
ಮಹಾಂತಂ ವಿಭುಮಾತ್ಮಾನಂ ಮತ್ವಾ ಧೀರೋ ನ ಶೋಚತಿ ॥೪॥

ಎಚ್ಚರ, ಕನಸು ಮತ್ತು ಎಚ್ಚರ-ಕನಸಿನ ಉಭಯಸ್ಥಿತಿ, ಈ ಎಲ್ಲಾ ಅವಸ್ಥೆಗಳೂ ಭಗವದಧೀನ. ಈ ವಿಶ್ವದಲ್ಲಿನ ಕೋಟಿ-ಕೋಟಿ ಜೀವಗಳ ಅವಸ್ಥೆಯನ್ನು ನಿಯಂತ್ರಿಸುವವ ಒಬ್ಬನೇ ಒಬ್ಬ ಭಗವಂತ. ಈ ರೀತಿ ಎಲ್ಲವನ್ನೂ ನಿಯಂತ್ರಿಸಬೇಕಾದರೆ ಆತ ಎಲ್ಲಾ ಕಡೆ ಇರಬೇಕು ಮತ್ತು ಎಲ್ಲರಿಗಿಂತ ಸಮರ್ಥನಾಗಿರಬೇಕು. ಅದಕ್ಕಾಗಿ ಯಮ ಇಲ್ಲಿ ಭಗವಂತನನ್ನು "ಮಹಾಂತಂ ವಿಭುಃ" ಎಂದು ಸಂಬೋಧಿಸಿದ್ದಾನೆ. ಸರ್ವಸಮರ್ಥನೂ, ಸರ್ವೋತ್ಕೃಷ್ಟನೂ, ಸರ್ವವ್ಯಾಪಕನೂ ಆಗಿರುವ ಇಂತಹ ಆತ್ಮತತ್ವ ಭಗವಂತನನ್ನು ಯಾರು ತಿಳಿದುಕೊಳ್ಳುತ್ತಾನೋ, ಅವನು ಎಂದೂ ಜೀವನದಲ್ಲಿ ದುಃಖಕ್ಕೊಳಗಾಗುವುದಿಲ್ಲ. ಅವನಿಗೆ ಜೀವನದ ಎಲ್ಲಾ ಸಮಸ್ಯೆಯನ್ನು ಎದುರಿಸುವ ಧೈರ್ಯ ಬರುತ್ತದೆ. ಭಗವಂತ ದುಃಖ ಕೊಟ್ಟರೂ ಕೂಡಾ ಅದು ನನ್ನ ಉದ್ಧಾರಕ್ಕಾಗಿ ಎನ್ನುವ ಮನವರಿಕೆ(Conviction) ಆತನಲ್ಲಿರುತ್ತದೆ. ಭಗವಂತನ ಮೇಲೆ ಭರವಸೆ ಇರುವುದರಿಂದ ಅವನು ಎಂದೂ ದುಃಖಿತನಾಗುವುದಿಲ್ಲ.

ಯ ಇಮಂ ಮಧ್ವದಂ ವೇದ ಆತ್ಮಾನಂ ಜೀವಮಂತಿಕಾತ್ ।
ಈಶಾನಂ ಭೂತಭವ್ಯಸ್ಯ ನ ತತೋ ವಿಜುಗುಪ್ಸತೇ । ಏತದ್ವೈ ತತ್ ॥೫॥

ಭಗವಂತ ನಮ್ಮ ಅಂತರ್ಯಾಮಿಯಾಗಿ ನಮ್ಮನ್ನು ನಿಯಮಿಸುವ ಸ್ವಾಮಿ. ಜೀವದ ಸಮೀಪದಲ್ಲೇ ಭಗವಂತನಿದ್ದರೂ ಸಹ ಆತನಿಗೆ ಯಾವುದೇ ದುಃಖದ ಲೇಪವಿಲ್ಲ. ಆತ ಎಲ್ಲಾ ಇಂದ್ರಿಯಗಳಲ್ಲಿದ್ದು, ಸದಾ ಆನಂದ ರಸವನ್ನು(ಮಧು) ಅನುಭವಿಸುತ್ತಿರುತ್ತಾನೆ. ಭಗವಂತ ಹಿಂದೆ, ಇಂದು ಹಾಗೂ ಮುಂದೆ ಎಂದೆಂದಿಗೂ ಜೀವದ ಜೊತೆಗೇ ನಿತ್ಯಸಂಗಾತಿಯಾಗಿದ್ದು, ಜೀವನನ್ನು ರಕ್ಷಿಸುತ್ತಿರುತ್ತಾನೆ. ಈ ಸತ್ಯವನ್ನು ತಿಳಿದವನು ತನ್ನನ್ನು ತಾನು ಮುಚ್ಚಿಡಲು ಬಯಸುವುದಿಲ್ಲ. ನಮ್ಮನ್ನು ನಾವೇ ರಕ್ಷಣೆ ಮಾಡಿಕೊಳ್ಳಬೇಕು ಎಂದು ಭಯದಿಂದ ಬದುಕುವುದು ಅಜ್ಞಾನ. ಭಗವಂತ ಸದಾ ನನ್ನೊಂದಿಗಿದ್ದಾನೆ, ಅವನು ನನ್ನನ್ನು ರಕ್ಷಿಸುತ್ತಾನೆ ಎನ್ನುವ ಸತ್ಯ ತಿಳಿದಾಗ ಯಾವ ಭಯವೂ ಇಲ್ಲ. "ಯಾವ ಮುಕ್ತಿ ನಿಯಾಮಕ ಭಗವಂತನ ಬಗ್ಗೆ ನೀನು ತಿಳಿಯ ಬಯಸಿದ್ದಿಯೋ-ಅವನೇ ಇವನು" ಎನ್ನುತ್ತಾನೆ ಯಮ.

ಯಃ ಪೂರ್ವಂ ತಪಸೋ ಜಾತಮದ್ಭ್ಯಃ ಪೂರ್ವಮಜಾಯತ ।
ಗುಹಾಂ ಪ್ರವಿಶ್ಯ ತಿಷ್ಠಂತಂ ಯೋ ಭೂತೇಭಿರ್ವ್ಯಪಶ್ಯತ । ಏತದ್ವೈ ತತ್ ॥೬॥

ಸೃಷ್ಟಿಯ ಆದಿಯಲ್ಲಿ, ಪಂಚಭೂತಗಳ ಸೃಷ್ಟಿಗಿಂತಲೂ ಮೊದಲು, ಪಂಚಭೂತಗಳ ಅಭಿಮಾನಿ ಶಿವನಿಗಿಂತಲೂ ಮೊದಲು, ಜೀವಜಾತದಲ್ಲೇ ಸರ್ವಶ್ರೇಷ್ಠನಾದ ಚತುರ್ಮುಖನನ್ನು ಸೃಷ್ಟಿ ಮಾಡಿದವ ಆ ಭಗವಂತ. [ಉಪನಿಷತ್ತು ಮತ್ತು ಪುರಾಣಗಳಲ್ಲಿ ಶಿವನನ್ನು ತಪಸ್ಸು ಎಂದು ಕರೆಯುತ್ತಾರೆ]. ಭಗವಂತ ತಾನು ಸೃಷ್ಟಿಮಾಡಿದ ಸರ್ವ ಜೀವಜಾತಗಳ ಹೃದಯಗುಹೆಯಲ್ಲಿ ನೆಲೆಸಿದ. ಈ ರೀತಿ ನೆಲೆಸಿರುವ ಭಗವಂತ ತನ್ನನ್ನೇ ತಾನು ಕಾಣುತ್ತಾನೆ, ಆದರೆ ಇನ್ನೊಬ್ಬರಿಗೆ ಕಾಣಸಿಗುವುದಿಲ್ಲ. "ಹೀಗೆ ಬ್ರಹ್ಮಾದಿ ದೇವತೆಗಳಿಂದ ಹಿಡಿದು, ಒಂದು ಹುಲ್ಲುಗರಿಯತನಕ ಸಮಸ್ತವನ್ನೂ ಸೃಷ್ಟಿಮಾಡಿ, ಜೀವದ ಹೃದಯಗುಹೆಯಲ್ಲಿ ಅಂತರ್ಯಾಮಿಯಾಗಿ ಪ್ರವೇಶಮಾಡಿ, ತನ್ನ ವೈಭವವನ್ನು ತಾನೇ ನೋಡುತ್ತಿರುವ ಭಗವಂತನೇ ನೀನು ಕೇಳಿರುವ ಪರತತ್ವ." ಎನ್ನುತ್ತಾನೆ ಯಮ.

ಯಾ ಪ್ರಾಣೇನ ಸಂಭವತ್ಯದಿತಿರ್ದೇವತಾಮಯೀ ।

ಗುಹಾಂ ಪ್ರವಿಶ್ಯ ತಿಷ್ಠಂತೀಂ ಯಾ ಭೂತೇಭಿರ್ವ್ಯಜಾಯತ । ಏತದ್ವೈ ತತ್ ॥೭॥

ಭಗವಂತ ಸೃಷ್ಟಿ ಮಾಡುವುದು ಮಾತ್ರವಲ್ಲ, ಸಂಹಾರ ಮಾಡುವವನೂ ಅವನೇ. ಇದು ಲೋಕ ರೂಢಿಗೂ ಭಗವಂತನಿಗೂ ಇರುವ ವ್ಯತ್ಯಾಸ. ಲೋಕದಲ್ಲಿ ನಾವು ನೆಟ್ಟ ಒಂದು ಗಿಡವನ್ನು ನಮ್ಮ ಕೈಯಾರೆ ನಾಶ ಮಾಡಲು ನಮಗೆ ಇಷ್ಟವಾಗುವುದಿಲ್ಲ. ಆದರೆ ಭಗವಂತ ಯಾವುದೇ ಮೋಹವಿಲ್ಲದೆ ತಾನು ಸೃಷ್ಟಿಸಿದ್ದನ್ನು ಪ್ರಳಯ ಕಾಲದಲ್ಲಿ ತಾನೇ ನಾಶಮಾಡುತ್ತಾನೆ. ಇದಕ್ಕಾಗಿ ಇಲ್ಲಿ ಭಗವಂತನನ್ನು 'ಅದಿತಿ' ಎಂದು ಸ್ತ್ರೀ ರೂಪದಲ್ಲಿ ಹೇಳಿದ್ದಾರೆ.

ಅದಿತಿ ಎಂದರೆ ಎಲ್ಲವನ್ನೂ ತಿನ್ನುವವ ಎಂದರ್ಥ. ನಮ್ಮೊಳಗಿದ್ದು, ಸಮಸ್ತ ವಿಷಯಗಳನ್ನು ಅನುಭವಿಸುವವ ಮತ್ತು ಸಮಸ್ತ ವಿಶ್ವವನ್ನು ಸಂಹಾರ ಮಾಡುವ ಭಗವಂತ 'ಅದಿತಿ'. ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ- ಭಗವಂತನನ್ನು ಸ್ತ್ರೀಲಿಂಗದಿಂದ ಸಂಬೋಧಿಸಿರುವುದು. ಲೋಕದಲ್ಲಿ ಕೆಲವೊಮ್ಮೆ ಪುಲ್ಲಿಂಗದಿಂದ ಹೆಣ್ಣನ್ನೂ, ಸ್ತ್ರೀಲಿಂಗದಿಂದ ಗಂಡನ್ನೂ ಸಂಬೋಧಿಸುತ್ತಾರೆ. ಉದಾಹರಣೆಗೆ ಸಂಸ್ಕೃತದಲ್ಲಿ ಹೆಂಡತಿಯನ್ನು 'ದಾರಾ' ಎಂದು ಪುಲ್ಲಿಂಗ ಮತ್ತು ಬಹುವಚನದಿಂದ ಕರೆಯುತ್ತಾರೆ. ಇದು ಕೇವಲ ಶಬ್ದದ ಸ್ವಭಾವ ಮತ್ತು ವ್ಯಾಕರಣಕ್ಕೆ ಸಂಬಂಧಿಸಿದ ವಿಚಾರ. ಆದರೆ ಎಲ್ಲಾ ಲಿಂಗಗಳೂ ಸಾರ್ಥಕವಾಗುವುದು ಕೇವಲ ಭಗವಂತನಲ್ಲಿ ಮಾತ್ರ. ಏಕೆಂದರೆ ಭಗವಂತ ಪುರುಷರೂಪನೂ ಹೌದು, ಸ್ತ್ರೀ ರೂಪನೂ ಹೌದು. ಹಾಗಾಗಿ ಪುಲ್ಲಿಂಗ-ಸ್ತ್ರೀಲಿಂಗ ಶಬ್ದ ಅವನಲ್ಲಿ ಅನ್ವಯವಾಗುತ್ತದೆ. ಧನ್ವಂತರೀಯೂ ಅವನೇ, ಮೋಹಿನಿಯೂ ಅವನೇ. ಸ್ತ್ರೀಯರಲ್ಲಿ ಅಂತರ್ಯಾಮಿಯಾಗಿ ಬಿಂಬರೂಪದಲ್ಲಿ ಸ್ತ್ರೀರೂಪ, ಪುರುಷರಲ್ಲಿ ಅಂತರ್ಯಾಮಿಯಾಗಿ ಬಿಂಬರೂಪದಲ್ಲಿ ಪುರುಷ ರೂಪನಾಗಿದ್ದಾನೆ ಭಗವಂತ. ಇಲ್ಲಿ 'ಅದಿತಿ' ಎನ್ನುವ ಪದ ಸ್ತ್ರೀ ಲಿಂಗ. ಇದಕ್ಕೆ ಕಾರಣ ಭಗವಂತ ಸಂಹಾರ ಮಾಡಲು ಮಾಧ್ಯಮವಾಗಿ ಬಳಸುವುದು ತಾಯಿ ದುರ್ಗೆಯನ್ನು. ಸಂಹಾರಶಕ್ತಿಯಾಗಿ ದುರ್ಗೆಯಲ್ಲಿ ಸನ್ನಿಹಿತವಾದ ರೂಪವಾದ್ದರಿಂದ ಇಲ್ಲಿ ಸ್ತ್ರೀ ಲಿಂಗ ಬಳಕೆಯಾಗಿದೆ.

ಭಗವಂತನನ್ನು ನಪುಂಸಕ ಲಿಂಗದಿಂದಲೂ ವಾಚಿಸುತ್ತಾರೆ. ಅಂದರೆ ಭಗವಂತ ಸ್ತ್ರೀ-ಪುರುಷ ಅಲ್ಲದವನು ಎಂದರ್ಥವಲ್ಲ. ಸ್ತ್ರೀ-ಪುರುಷರಲ್ಲಿರುವ ಯಾವ ದೋಷವೂ ಭಗವಂತನಲ್ಲಿಲ್ಲ ಎನ್ನುವುದನ್ನು ನಪುಂಸಕ ವಾಚಕ ಪದ ಸೂಚಿಸುತ್ತದೆ. ಹೀಗೆ ಮೂರೂ ಲಿಂಗಗಳನ್ನು ಭಗವಂತನ ಪರವಾಗಿ ಮಾತ್ರ ಅನ್ವಯಿಸಬಹುದು. ಉದಾಹರಣೆಗೆ: ಗಾಯತ್ರಿ ಮಂತ್ರದಲ್ಲಿ ಸ್ತ್ರೀರೂಪದಲ್ಲಿ ಭಗವಂತನಿದ್ದಾನೆ. ಯಾವುದು ಸ್ತ್ರೀಲಿಂಗ ಶಬ್ದವಿದೆಯೋ ಅದು ಭಗವಂತನ ಸ್ತ್ರೀರೂಪ, ಪುಲ್ಲಿಂಗ ಶಬ್ದ ಭಗವಂತನ ಪುರುಷರೂಪ. ಇದನ್ನು ಸ್ಪಷ್ಟಪಡಿಸುವುದಕ್ಕೋಸ್ಕರವೇ ಹಿಂದಿನ ಶ್ಲೋಕದಲ್ಲಿ "ಗುಹಾಂ ಪ್ರವಿಶ್ಯ ತಿಷ್ಠಂತಂ" ಎಂದು ಪುಲ್ಲಿಂಗದಲ್ಲಿ ಹೇಳಿ, ಇಲ್ಲಿ "ಗುಹಾಂ ಪ್ರವಿಶ್ಯ ತಿಷ್ಠಂತೀಂ" ಎಂದು ಸ್ತ್ರೀಲಿಂಗ ಪ್ರಯೋಗಿಸಿ ಹೇಳಿದ್ದಾರೆ.

ಯಮ ಹೇಳುತ್ತಾನೆ: "ಸೃಷ್ಟಿ –ಸಂಹಾರದಲ್ಲಿ ಭಗವಂತನ ನಿತ್ಯ ಸಂಗಾತಿಯಾಗಿ ಪ್ರಾಣದೇವರಿರುತ್ತಾರೆ" ಎಂದು. ವಿಷ್ಣುಸಹಸ್ರನಾಮದಲ್ಲಿ ಭಗವಂತನನ್ನು ವಾಯು ವಾಹನಃ ಎಂದು ಕರೆದಿರುವುದು ಇದಕ್ಕಾಗಿ. ಪ್ರಾಣ ದೇವರು ಭಗವಂತನ ಸಾರಥಿ ಇದ್ದಂತೆ.

ಸ್ತ್ರೀಯರಲ್ಲಿ ಸ್ತ್ರೀರೂಪದಲ್ಲಿ, ಪುರುಷರಲ್ಲಿ ಪುರುಷ ರೂಪದಲ್ಲಿರುವ ಭಗವಂತ, ಪಂಚಭೂತಗಳನ್ನು ಸೃಷ್ಟಿ ಮಾಡಿ, ಪಂಚಭೂತಾತ್ಮಕವಾದ ಪ್ರಪಂಚದಲ್ಲಿ ತಾನು ಅವತಾರ ಮಾಡಿ, ನಾನಾ ವಿಧದ ಲೀಲೆಗಳನ್ನು ತೋರಿಸುತ್ತಾನೆ. ಯಾವುದು ಭೂಮಿಯಲ್ಲಿ ಅವತರಿಸಿ ನಾನಾ ಲೀಲೆಗಳನ್ನು ತೋರಿಸುತ್ತದೋ, ಯಾವುದು ಜಗತ್ತಿನ ಸೃಷ್ಟಿ-ಸ್ಥಿತಿ-ಸಂಹಾರಗಳಿಗೆ ಕಾರಣವೋ, ಯಾವುದು ಸ್ತ್ರೀರೂಪದಲ್ಲಿ ಸ್ತ್ರೀಯರಲ್ಲಿ, ಪುರುಷರೂಪದಲ್ಲಿ ಪುರುಷರೊಳಗೆ

ಅಂತರ್ಯಾಮಿಯಾಗಿದೆಯೋ, ಅದೇ ತತ್ವ ಮುಕ್ತಿ ನಿಯಾಮಕವಾದದ್ದು. "ನಿನ್ನ ಪ್ರಶ್ನೆಗೆ ಉತ್ತರ ರೂಪವಾದ ಭಗವದ್ ತತ್ವ ಇದೇ" ಎನ್ನುತ್ತಾನೆ ಯಮ.

ಅರಣ್ಯೋರ್ನಿಹಿತೋ ಜಾತವೇದಾ ಗರ್ಭ ಇವ ಸುಭೃತೋ ಗರ್ಭಿಣೀಭಿಃ ।
ದಿವೇ ದಿವೇ ಈಡ್ಯೋ ಜಾಗೃವದ್ಭಿರ್ಹವಿಷ್ಮದ್ಭಿರ್ಮನುಷ್ಯೇಭಿರಗ್ನಿಃ । ಏತದ್ವೈ ತತ್ ॥೮॥

ಭಗವಂತನ ಬಗೆಗೆ ಅಪೂರ್ವವಾದ ವಿಷಯಗಳನ್ನು ಹೇಳಿದ ಯಮ, ಇಲ್ಲಿ ಒಂದು ವಿಶೇಷವಾದ ಸಂಗತಿಯನ್ನು ಒಂದು ದೃಷ್ಟಾಂತದ ಮೂಲಕ ವಿವರಿಸಿದ್ದಾನೆ. ಹಿಂದಿನ ಕಾಲದಲ್ಲಿ ಯಜ್ಞ ಮಾಡುವಾಗ ಅರಣೀ ಕಾಷ್ಠವನ್ನು ವಿಶೇಷವಾಗಿ ಮಥನ ಮಾಡಿ ಅದರಿಂದ ಬೆಂಕಿಯನ್ನು ತೆಗೆದು ಅಗ್ನಿಪ್ರತಿಷ್ಠೆ ಮಾಡುತ್ತಿದ್ದರು. ಈ ವಿಚಾರವನ್ನು ಸೂಕ್ಷ್ಮವಾಗಿ ನೋಡಿದರೆ: ಅರಣೀ ಕಾಷ್ಠದಲ್ಲಿ ಅಗ್ನಿ ಇದೆ, ಆದರೆ ಅದು ಮಥನ ಮಾಡದೇ ನಮಗೆ ಗೋಚರವಾಗುವುದಿಲ್ಲ. ಅದೇ ರೀತಿ ಭಗವಂತ. ಗುರು ಮತ್ತು ಶಿಷ್ಯರು ನಿರಂತರ ಶಾಸ್ತ್ರಾರ್ಥ ಮಥನ ಮಾಡದೇ ಆತ ಗೋಚರನಾಗುವುದಿಲ್ಲ. ಸರ್ವಜ್ಞನಾದ ಭಗವಂತ ವೇದ ಮಂತ್ರಗಳ ಅರ್ಥವನ್ನು ಬಲ್ಲ ಗುರು ಶಿಷ್ಯರ(ರಣ=ಶಬ್ದ=ವೇದಮಂತ್ರಗಳು; ಆರ್ಯರು=ಬಲ್ಲವರು; ಅರಣೀಗಳು=ವೇದ ಮಂತ್ರವನ್ನು ಬಲ್ಲವರು) ಶಾಸ್ತ್ರಾರ್ಥ ಮಥನದಿಂದ ಮೂಡಿಬರುತ್ತಾನೆ.

ಬೆಂಕಿ ಉತ್ಪತ್ತಿಯಾಗುವಾಗ ಹೇಗೆ ಮೊದಲು ಹೊಗೆ, ನಂತರ ಕಿಡಿ, ಆನಂತರ ಬೆಂಕಿಯೋ, ಅದೇ ರೀತಿ ಒಮ್ಮಿಂದೊಮ್ಮೆಗೆ ಭಗವಂತ ಪ್ರತ್ಯಕ್ಷನಾಗಿ ಕಾಣಲಾರ. ಆದರೆ ಆತನ ಇರವು ತಿಳಿಯುತ್ತದೆ. ಉದಾಹರಣೆಗೆ ಹೇಗೆ ಒಬ್ಬ ಗರ್ಭಿಣಿ ಹೆಣ್ಣಿನ ಹೊಟ್ಟೆಯನ್ನು ಬಾಹ್ಯವಾಗಿ ನೋಡಿ ಅಲ್ಲಿ ಬೆಳೆಯುತ್ತಿರುವ ಮಗುವನ್ನು ಗುರುತಿಸಬಹುದೋ ಹಾಗೇ ಶಾಸ್ತ್ರ ಮಥನದಿಂದ ಭಗವಂತನ ಇರವಿನ ಅರಿವು ಗಟ್ಟಿಗೊಳ್ಳುತ್ತದೆ ಮತ್ತು ಖಚಿತವಾಗುತ್ತದೆ. ಚಿಂತನಶೀಲರಾದ ಜೀವರು(ಮನುಷ್ಯ/ಮನನಶೀಲ) ಅನುದಿನವೂ ಜ್ಞಾನ ಮಾರ್ಗದ ಉಪಾಸನೆಯ ಮೂಲಕ ಮತ್ತು ಯಜ್ಞರೂಪವಾದ ಕರ್ಮದ ಮೂಲಕ ಭಗವಂತನನ್ನು ಆರಾಧಿಸಬೇಕು. ಒಂದು ಜ್ಞಾನಯಜ್ಞ ಹಾಗೂ ಇನ್ನೊಂದು ಕರ್ಮಯಜ್ಞ.

ಇಲ್ಲಿ ವಿಶೇಷವಾಗಿ ಜ್ಞಾನಯಜ್ಞ ಮತ್ತು ಕರ್ಮಯಜ್ಞವನ್ನು ಜೊತೆ-ಜೊತೆಯಾಗಿ ಹೇಳಿರುವುದನ್ನು ನಾವು ಗಮನಿಸಬೇಕು. ನಮ್ಮಲ್ಲಿ ಅನೇಕ ವಾದಗಳಿವೆ. ಕೇವಲ ಕರ್ಮಾನುಷ್ಠಾನದಿಂದಲೇ ಭಗವಂತನನ್ನು ಒಲಿಸಬಹುದು ಎನ್ನುವುದು ಒಂದು ವಾದ; ಜ್ಞಾನವಿಲ್ಲದೆ ಕರ್ಮದಿಂದ ದೇವರು ಒಲಿಯುವುದಿಲ್ಲ ಎನ್ನುವುದು ಇನ್ನೊಂದು ವಾದ. ಜ್ಞಾನ ಒಂದೇ ಸಾಕು, ಕರ್ಮ ಬೇಡವೇ ಬೇಡ ಅಥವಾ ಜ್ಞಾನಿಗಳಿಗೆ ಕರ್ಮ ಮಾಡಲು ಸಾಧ್ಯವಿಲ್ಲ ಎನ್ನುವುದು ಮತ್ತೊಂದು ವಾದ. ಕೃಷ್ಣ ಈ ರೀತಿಯ ವಾದಗಳಿಗೆ ಗೀತೆಯಲ್ಲಿ ಸ್ಪಷ್ಟವಾದ ಉತ್ತರ ಕೊಟ್ಟಿದ್ದಾನೆ. ಜ್ಞಾನಪೂರ್ವಕವಾದ ಕರ್ಮವೇ-ಕರ್ಮ. ನಾವು ಏನೇ ಮಾಡುವುದಿದ್ದರೂ ತಿಳಿದು ಮಾಡಬೇಕು. ಜ್ಞಾನ ಬಂದ ಮೇಲೆ ಕರ್ಮ ಬೇಡ ಎನ್ನುವುದು ಅಸಂಗತ. ಜ್ಞಾನಿಗಳು ಮಾಡುವ ಕರ್ಮವೇ ಹೆಚ್ಚು ಸಾರ್ಥಕ. ಜ್ಞಾನಿಗಳು ಕರ್ಮ ಮಾಡದಿದ್ದರೆ ಅವರನ್ನು ಅನುಸರಿಸುವ ಸಮಾಜ ತಪ್ಪು ದಾರಿ ಹಿಡಿಯುವ ಅಪಾಯ ಕೂಡಾ ಇದೆ. ಭಗವಂತನ ಬಗೆಗೆ ಎಚ್ಚರವಾದವರು, ಭಗವಂತನ ಬಗೆಗಿನ ಎಚ್ಚರದ ಪ್ರಜ್ಞೆಯಿಂದ ಕರ್ಮ ಮಾಡುವವರು, ಕರ್ಮವೆಲ್ಲವೂ ಭಗವದ್ ಅರ್ಪಿತ ಎಂದು ಕರ್ಮ ಮಾಡುವವರು, ಎಲ್ಲರೂ ಉಪಾಸನೆ ಮಾಡುವುದು ಈ 'ಅಗ್ನಿಃ' ನಾಮಕ ಭಗವಂತನನ್ನು.

ಇಲ್ಲಿ ಭಗವಂತನನ್ನು 'ಅಗ್ನಿಃ' ಎನ್ನುವ ನಾಮದಿಂದ ಸಂಬೋಧಿಸಿದ್ದಾರೆ. ಇದು ಹಿಂದಿನ ಶ್ಲೋಕದಲ್ಲಿ ಹೇಳಿರುವ 'ಅದಿತಿ' ಎನ್ನುವ ಅರ್ಥವನ್ನೂ ಕೊಡುತ್ತದೆ. ಅಗ್ನಿ ಎಂದರೆ : ಎಲ್ಲಕ್ಕಿಂತ ಎತ್ತರದಲ್ಲಿರುವವನು, ಎಲ್ಲಕ್ಕಿಂತ ಮೊದಲು ಪೂಜಿಸಲ್ಪಡುವವನು, ಎಲ್ಲಕ್ಕಿಂತ ಎತ್ತರಕ್ಕೆ ನಮ್ಮನ್ನು ಕೊಂಡೊಯ್ಯುವವನು, ಇಂದ್ರಿಯಗಳನ್ನು ನಿಯಂತ್ರಿಸುವವನು(ಅಗನಿ), ಚಲಿಸಲಾಗದ ಇಡೀ ವಿಶ್ವಕ್ಕೆ ಚಾಲನ ಶಕ್ತಿ ಕೊಟ್ಟು ನಡೆಸುವವನು, ಎಲ್ಲಕ್ಕಿಂತ ಮೊದಲಿನವನು, ಇತ್ಯಾದಿ. "ನೀನು ಯಾವುದನ್ನು ತಿಳಿಯಬೇಕು ಎಂದು ಪ್ರಶ್ನೆ ಹಾಕಿದೆಯೋ ಆ ಭಗವದ್ ತತ್ವ ಇದೇ" ಎನ್ನುತ್ತಾನೆ ಯಮ.

ಯತಶ್ಚೋದೇತಿ ಸೂರ್ಯೋಽಸ್ತಂ ಯತ್ರ ಚ ಗಚ್ಛತಿ ।
ತಂ ದೇವಾಃ ಸರ್ವೇ ಅರ್ಪಿತಾಸ್ತದು ನಾತ್ಯೇತಿ ಕಶ್ಚನ । ಏತದ್ವೈ ತತ್ ॥೯॥

ಹಿಂದಿನ ಶ್ಲೋಕದಲ್ಲಿ 'ಮನುಷ್ಯ' ಎನ್ನುವ ಪದವನ್ನು ಬಳಸಿರುವುದನ್ನು ನೋಡಿದ್ದೇವೆ. ಈ ಹಿಂದೆ ವಿವರಿಸಿದಂತೆ ಇಲ್ಲಿ ಮನುಷ್ಯರು ಎಂದರೆ ಮನನದಿಂದ ಭಗವಂತನನ್ನು ತಿಳಿದವರು. ಆದ್ದರಿಂದ ಭಗವಂತ ದೇವತೆಗಳು, ಮಾನವರು, ಎಲ್ಲರಿಂದಲೂ ಸ್ತುತ್ಯನಾದವನು. ಇಲ್ಲಿ ನಮಗೆ "ಏಕೆ ದೇವತೆಗಳು ಭಗವಂತನನ್ನು ಸ್ತೋತ್ರ ಮಾಡುತ್ತಾರೆ" ಎನ್ನುವ ಪ್ರಶ್ನೆ ಬರಬಹುದು. ಈ ಪ್ರಶ್ನೆಗೆ ಉತ್ತರ ರೂಪವಾಗಿ ಯಮ ತನ್ನ ತಂದೆಯಾದ ಸೂರ್ಯನನ್ನು ದೃಷ್ಟಾಂತವಾಗಿ ಬಳಸಿ, ಭಗವಂತನ ಮಹತ್ವವನ್ನು ವಿವರಿಸಿದ್ದಾನೆ.
ನಾವು ಪ್ರತಿದಿನ ಸೂರ್ಯೋದಯ ಮತ್ತು ಸೂರ್ಯಾಸ್ತವನ್ನು ಕಾಣುತ್ತೇವೆ. ಯಾರು ಈ ಪ್ರಪಂಚಕ್ಕೆ ಇಂತಹ ನಿರ್ದಿಷ್ಟ ಚಲನೆ ಕೊಟ್ಟವರು? ಗ್ರಹ-ಗೋಲಗಳು ಇಷ್ಟೊಂದು ಗಣಿತಬದ್ಧವಾಗಿ ಚಲಿಸುವಂತೆ ವ್ಯವಸ್ಥೆ ಮಾಡಿದವನು ಯಾರು? ಅವನೇ ಸರ್ವ ನಿಯಾಮಕ ಭಗವಂತ. ಪುರುಷಸೂಕ್ತದಲ್ಲಿ ಹೇಳುವಂತೆ: ಚಕ್ಷೋಃ ಸೂರ್ಯೋ ಅಜಾಯತ(೧೩)- ಅಂದರೆ ಸೃಷ್ಟಿ ಕಾಲದಲ್ಲಿ ಸೂರ್ಯ ಭಗವಂತನ ಕಣ್ಣಿನಿಂದ ಹುಟ್ಟಿದ. ಅದೇ ರೀತಿ ಪ್ರಳಯ ಕಾಲದಲ್ಲಿ ಆತ ಭಗವಂತನ ಉದರವನ್ನು ಸೇರುತ್ತಾನೆ. ಕೇವಲ ಸೂರ್ಯನಷ್ಟೇ ಅಲ್ಲ, ಸಮಸ್ತ ದೇವತೆಗಳೂ ಕೂಡಾ ಭಗವಂತನ ನಿಯತಿಗೊಳಪಟ್ಟಿದ್ದಾರೆ. ಆತನ ನಿಯತಿಯನ್ನು ಯಾರೂ ಮೀರಲು ಸಾಧ್ಯವಿಲ್ಲ. "ಈ ವಿಶ್ವದ ಚಲನೆಗೆ ಯಾರು ಕಾರಣನೋ, ಎಲ್ಲಾ ದೇವತೆಗಳು ಯಾರನ್ನು ಆಶ್ರಯಿಸಿಕೊಂಡಿದ್ದಾರೋ, ಅವನೇ ನೀನು ತಿಳಿಯಲು ಬಯಸಿರುವ ಪರತತ್ವ" ಎನ್ನುತ್ತಾನೆ ಯಮ.

ಯದೇವೇಹ ತದಮುತ್ರ ಯದಮುತ್ರ ತದನ್ವಿಹ ।
ಮೃತ್ಯೋಃ ಸ ಮೃತ್ಯುಮಾಪ್ನೋತಿ ಯ ಇಹ ನಾನೇವ ಪಶ್ಯತಿ ॥೧೦॥

ಭಗವಂತನ ಅವತಾರ ರೂಪ ಮತ್ತು ಆತನ ಮೂಲರೂಪದ ಬಗ್ಗೆ ಯಮ ಈ ಶ್ಲೋಕದಲ್ಲಿ ಒಂದು ಉತ್ತಮ ವಿವರಣೆಯನ್ನು ಕೊಟ್ಟಿದ್ದಾನೆ. ಸಾಮಾನ್ಯವಾಗಿ ಭಗವಂತ ಅವತಾರರೂಪಿಯಾಗಿ ಭೂಮಿಗಿಳಿದು ಬಂದಾಗ ಒಬ್ಬ ಸಾಮಾನ್ಯ ಮನುಷ್ಯನಂತೆ ಕಾಣುತ್ತಾನೆ. ಉದಾಹರಣೆಗೆ ಶ್ರೀರಾಮಚಂದ್ರ. ರಾಮಾಯಣದಲ್ಲಿ ಒಂದು ಕಡೆ "ನಾನೊಬ್ಬ ಸಾಮಾನ್ಯ ಮನುಷ್ಯ" ಎಂದು ಶ್ರೀರಾಮನೇ ಹೇಳುವುದನ್ನು ಕಾಣುತ್ತೇವೆ. ಇದೆಲ್ಲವನ್ನು ನೋಡಿದಾಗ ನಮಗೆ ಭಗವಂತನ ಮೂಲರೂಪಕ್ಕೂ ಮತ್ತು ಅವತಾರರೂಪಕ್ಕೂ ವ್ಯತ್ಯಾಸವಿದೆ ಎನಿಸಬಹುದು. ಆದರೆ ಅದು

ಸರಿಯಲ್ಲ. ಇಲ್ಲಿ ಯಮ ಹೇಳುತ್ತಾನೆ: "ಭಗವಂತನ ಮೂಲರೂಪ ಎಷ್ಟು ಪೂರ್ಣವೋ ಅಷ್ಟೇ ಪೂರ್ಣ ಆತನ ಅವತಾರ ರೂಪ" ಎಂದು. ಆದ್ದರಿಂದ ಮೂಲರೂಪಕ್ಕೂ ಅವತಾರ ರೂಪಕ್ಕೂ ಬೇಧ ಚಿಂತನೆ ತಪ್ಪು. "ಭಗವಂತನ ರೂಪಗಳಲ್ಲಿ ಕಿಂಚಿತ್ ವ್ಯತ್ಯಾಸವಿದೆ ಎಂದು ಚಿಂತನೆ ಮಾಡುವವರು ಸತ್ತ ಮೇಲೆ ದುಃಖಮಯವಾದ ತಮಸ್ಸನ್ನು ಸೇರುತ್ತಾರೆ" ಎಂದಿದ್ದಾನೆ ಯಮ. ಭಗವಂತನ ಬಗೆಗೆ ತಪ್ಪು ಕಲ್ಪನೆ ಮಾಡುವುದರಿಂದ ಎಂದೂ ಶ್ರೇಯಸ್ಸಿಲ್ಲ.

ಅವತಾರ ರೂಪದಲ್ಲಿ ಭಗವಂತ ಕಷ್ಟಪಟ್ಟಂತೆ ನಮಗೆ ಕಾಣುವುದು(ಉದಾ: ಶ್ರೀ ರಾಮ) ಅವನ ಲೀಲೆಯ ಒಂದು ಅಂಗ. ಜೀವನ ಎನ್ನುವುದು ಒಂದು ನಾಟಕ. ಇಲ್ಲಿ ನಾವು ಪಾತ್ರಧಾರಿಗಳು ಹಾಗೂ ಭಗವಂತ ನಿರ್ದೇಶಕ. ಕೆಲವೊಮ್ಮೆ ಈ ನಾಟಕದಲ್ಲಿ ಭಗವಂತನೇ ನೇರವಾಗಿ ಬಂದು ಅಭಿನಯಿಸುತ್ತಾನೆ. ಆಗ ಆ ಪಾತ್ರಕ್ಕನುಗುಣವಾಗಿ ಭಗವಂತ ತನ್ನ ಲೀಲೆಗಳನ್ನು ತೋರಿಸುತ್ತಾನೆ. ಅದನ್ನು ನಾವು ತಪ್ಪಾಗಿ ತಿಳಿದುಕೊಂಡು ಬೇಧ ಚಿಂತನೆ ಮಾಡುವುದು ತಪ್ಪು. ಭಗವಂತನ ಲೀಲೆಯನ್ನು ಅರ್ಥ ಮಾಡಿಕೊಳ್ಳದೇ ಆತನಿಗೂ ನಮ್ಮಂತೆ ಪಾಂಚಭೌತಿಕ ಶರೀರವಿದೆ, ಆತನಿಗೂ ಹುಟ್ಟು-ಸಾವುಗಳಿವೆ, ಅವತಾರ ರೂಪದಲ್ಲಿ ಆತನಿಗೂ ಕಷ್ಟಗಳು ಬರುತ್ತವೆ, ಆತನೂ ದುಃಖವನ್ನು ಅನುಭವಿಸುತ್ತಾನೆ, ಇತ್ಯಾದಿ ಚಿಂತನೆ ಅಕ್ಷಮ್ಯ ಅಪರಾಧ. ಅವತಾರ ರೂಪದಲ್ಲಿ ಆರು ಅಡಿ ಎತ್ತರದ ಪಾಂಚಭೌತಿಕ ಶರೀರದಂತೆ ನಮಗೆ ಕಾಣಿಸಿಕೊಳ್ಳುವ ಭಗವಂತನನ್ನು, ನಮ್ಮ ಪರಿಮಿತಿಯಲ್ಲಿ ಅಳೆಯುವುದು ನಮ್ಮ ಅಜ್ಞಾನದ ಪರಮಾವಧಿ. ವೈಕುಂಠಾದಿಗಳಲ್ಲಿ ಭಗವಂತನ ರೂಪ ಎಷ್ಟು ಪರಿಪೂರ್ಣವೋ, ಆತನ ಎಲ್ಲಾ ರೂಪಗಳು ಅಷ್ಟೇ ಪರಿಪೂರ್ಣ. ಇಲ್ಲಿ ಬೇಧ ಚಿಂತನೆ ಮಾಡುವುದು ತಮಸ್ಸಿಗೆ ಆಹ್ವಾನ. ಇದನ್ನು ಇನ್ನೂ ವಿವರವಾಗಿ ಮುಂದಿನ ಶ್ಲೋಕದಲ್ಲಿ ಯಮ ವಿವರಿಸುತ್ತಾನೆ.

ಮನಸೈವೇದಮಾಪ್ತವ್ಯಂ ನೇಹ ನಾನಾಸ್ತಿ ಕಿಂಚನ ।
ಮೃತ್ಯೋಃ ಸ ಮೃತ್ಯುಂ ಗಚ್ಛತಿ ಯ ಇಹ ನಾನೇವ ಪಶ್ಯತಿ ॥೧೧॥

ತರ್ಕ ಮಾಡುವುದನ್ನು ಬಿಟ್ಟು, ಮನಸ್ಸಿನಲ್ಲಿ ಮನನ ಮಾಡುತ್ತಾ, ವೇದಾರ್ಥ ಚಿಂತನೆ ಮಾಡುವುದರಿಂದ ಭಗವಂತನ ದೇಹ, ಅವನ ಅವಯವ, ಅವನ ಕ್ರಿಯೆ ಇದ್ಯಾವುದೂ ಭಿನ್ನವಾಗಿಲ್ಲ, ಎಲ್ಲವೂ ಅಖಂಡ, ಯಾವುದೂ ಆತನ ಸ್ವರೂಪಕ್ಕಿಂತ ಭಿನ್ನವಲ್ಲ ಹಾಗೂ ಎಲ್ಲವೂ ಜ್ಞಾನಾನಂದಮಯ ಎನ್ನುವ ಸತ್ಯ ಸ್ಫುರಣವಾಗುತ್ತದೆ. ಇದನ್ನು ಬಿಟ್ಟು ಭಗವಂತನ ದೇಹ, ಗುಣ, ಕ್ರಿಯೆ, ರೂಪಗಳಲ್ಲಿ ಭಿನ್ನ ಚಿಂತನೆ ಮಾಡಿದರೆ ಸಾವಿನ ಸುಳಿಯಲ್ಲಿ ಸಿಲುಕಬೇಕಾಗುತ್ತದೆ ಎಂದು ಎಚ್ಚರಿಸುತ್ತಾನೆ ಯಮ.

ಇಲ್ಲಿ ನಾವು ತಿಳಿಯಬೇಕಾದ ಮುಖ್ಯ ಅಂಶ ಎಂದರೆ: ಭಗವಂತನ ಬೇರೆಬೇರೆ ರೂಪಗಳಲ್ಲಿ ಯಾವ ವ್ಯತ್ಯಾಸವೂ ಇಲ್ಲ. ನಾವು ಭಗವಂತನನ್ನು ರಾಮನಾಗಿ, ಕೃಷ್ಣನಾಗಿ, ನರಸಿಂಹನಾಗಿ ಅಥವಾ ನಮಗೆ ಇಷ್ಟವಾಗುವ ಮತ್ತು ಹಿಡಿಸುವ ಇತರ ಯಾವುದೇ ರೂಪದಲ್ಲಿ ಉಪಾಸನೆ ಮಾಡಬಹುದು. ಸರ್ವಸಮರ್ಥನೂ, ಸರ್ವಜ್ಞನೂ ಆದ ಭಗವಂತ ಏಕ. ಆದ್ದರಿಂದ ಭಿನ್ನ ಮತ್ತು ಬೇಧ ಚಿಂತನೆ ಸರಿಯಲ್ಲ.

ಅಂಗುಷ್ಠಮಾತ್ರಃ ಪುರುಷೋ ಮಧ್ಯ ಆತ್ಮನಿ ತಿಷ್ಠತಿ ।
ಈಶಾನೋ ಭೂತಭವ್ಯಸ್ಯ ನ ತತೋ ವಿಜುಗುಪ್ಸತೇ । ಏತದ್ವೈ ತತ್ ॥೧೨॥

ಭಗವಂತನನ್ನು ಒಳಗಣ್ಣಿನಿಂದ ಧ್ಯಾನದಲ್ಲಿ ನೋಡಿದರೆ ಆತ ನಮ್ಮ ಅಂಗುಷ್ಠದ ಆಕಾರದಲ್ಲಿ ನಮ್ಮ ಹೃದಯದಲ್ಲಿ ಕಾಣಿಸಿಕೊಳ್ಳುತ್ತಾನೆ. ಇಂತಹ ಸಮಸ್ತ ವಿಶ್ವದ ಸ್ವಾಮಿಯಾದ ಭಗವಂತನನ್ನು ತಿಳಿದರೆ ನಮ್ಮನ್ನು ನಾವು ರಕ್ಷಣೆ ಮಾಡಿಕೊಳ್ಳಬೇಕು ಎನ್ನುವ ಭಯ, ಅಜ್ಞಾನ ಹೊರಟು ಹೋಗುತ್ತದೆ. "ನೀನು ತಿಳಿಯಲು ಬಯಸಿರುವ ಜಗತ್ತಿನ ಸ್ವಾಮಿ ಇವನೇ" ಎನ್ನುತ್ತಾನೆ ಯಮ.

ಅಂಗುಷ್ಠಮಾತ್ರಃ ಪುರುಷೋ ಜ್ಯೋತಿರಿವಾಧೂಮಕಃ ।
ಈಶಾನೋ ಭೂತಭವ್ಯಸ್ಯ ಸ ಏವಾದ್ಯ ಸ ಉ ಶ್ವಃ । ಏತದ್ವೈ ತತ್ ॥೧೩॥

ನಮ್ಮ ಹೃದಯದಲ್ಲಿ ಕಾಣುವ ಅಂಗುಷ್ಠಾಕಾರದ ಭಗವಂತನ ರೂಪ ಹೊಗೆ ಇರದ ದೀಪದ ಶಿಖೆಯಂತೆ. ಅತ್ಯಂತ ಪರಿಶುದ್ಧವಾದ, ದೋಷದ ಸ್ಪರ್ಶವೇ ಇಲ್ಲದ ಭಗವಂತನೆಂಬ ಬೆಳಕನ್ನು ಅಂತರಂಗದಲ್ಲಿ ಮನನ ಮಾಡುವುದರಿಂದ ಕಾಣಬಹುದು. ಈ ಸಂಸಾರದಲ್ಲಿರುವಾಗ ಹಾಗೂ ನಾಳೆ ಈ ಸಂಸಾರದಿಂದ ಪಾರಾಗಿ ಮೋಕ್ಷವನ್ನು ಸೇರಿದಾಗಲೂ, ಎಲ್ಲರಿಗೂ ಆತನೇ ಗತಿ. "ನೀನು ತಿಳಿಯಲು ಬಯಸಿರುವ ನಮ್ಮೆಲ್ಲರ ಸ್ವಾಮಿ-ಈ ಭಗವಂತ" ಎನ್ನುತ್ತಾನೆ ಯಮ.

ಯಥೋದಕಂ ದುರ್ಗೇ ವೃಷ್ಟಂ ಪರ್ವತೇಷು ವಿಧಾವತಿ ।
ಏವಂ ಧರ್ಮಾನ್ ಪೃಥಕ್ ಪಶ್ಯಂಸ್ತಾನೇವಾನುವಿಧಾವತಿ ॥೧೪॥

ಭಗವಂತನ ಗುಣಧರ್ಮವನ್ನು ಬೇರೆಬೇರೆಯಾಗಿ ಚಿಂತನೆ ಮಾಡಬಾರದು ಎನ್ನುವುದನ್ನು ಇನ್ನೂ ಒತ್ತುಕೊಟ್ಟು ಈ ಶ್ಲೋಕದಲ್ಲಿ ಯಮ ವಿವರಿಸಿದ್ದಾನೆ. ಜ್ಞಾನಾನಂದಾದಿಗಳನ್ನು ಭಗವಂತನಿಂದ ಭಿನ್ನ ಎಂದು ಉಪಾಸನೆ ಮಾಡುವವರು ಹೇಗೆ ಎತ್ತರವಾದ ಹಾಗೂ ದುರ್ಗಮವಾದ ಪರ್ವತದ ತುದಿಯಲ್ಲಿ ಸುರಿದ ನೀರು ಹರಿದು ಕೆಳಗೆ ಬರುತ್ತದೋ, ಹಾಗೇ ಭಗವಂತನ ವಿರುದ್ಧದಿಕ್ಕಿನಲ್ಲಿ ಚಲಿಸಿ ತಮಸ್ಸನ್ನು ಸೇರುತ್ತಾರೆ ಎಂದಿದ್ದಾನೆ ಯಮ.
ಭಗವಂತ ಜ್ಞಾನಾನಂದಸ್ವರೂಪ. ಆದ್ದರಿಂದ ಅವನಲ್ಲಿ ಯಾವ ರೀತಿಯ ತಾರತಮ್ಯ ಚಿಂತನೆ ಮಾಡಬಾರದು. ನಾವು ಒಂದು ಕ್ರಿಯೆ ಮಾಡಬೇಕಿದ್ದರೆ ಮೊದಲು ಅದರ ಬಗ್ಗೆ ತಿಳಿದುಕೊಳ್ಳುತ್ತೇವೆ. ನಂತರ ತಿಳಿದುಕೊಂಡು ಮಾಡುತ್ತೇವೆ. ನಮ್ಮ ಇಚ್ಛೆ-ಜ್ಞಾನ-ಕ್ರಿಯೆ ಇವು ಮೂರನ್ನು ತ್ರಿನೇತ್ರ ಎನ್ನುತ್ತಾರೆ. ಆದರೆ ಭಗವಂತನಲ್ಲಿ ಇವು ಮೂರು ಬೇರೆಬೇರೆ ಅಲ್ಲ. ಆತನಲ್ಲಿ ಜ್ಞಾನ-ಇಚ್ಛೆ-ಕ್ರಿಯೆ ಎಲ್ಲವೂ ಅಖಂಡ. ಇಷ್ಟೇ ಅಲ್ಲದೇ ಭಗವಂತನ ಅವಯವಗಳೂ ಕೂಡಾ ಸ್ವರೂಪಭೂತವಾಗಿ ಅಖಂಡವಾದದ್ದು. ಅವನ ಕೈ-ಕಾಲು-ಕಣ್ಣು ಎಲ್ಲವೂ ಬೇರೆಬೇರೆ ಅಲ್ಲ. ಅದೊಂದು ಅಖಂಡವಾದ ವಿಲಕ್ಷಣವಾದ ಶಕ್ತಿ. ಆತ ಕಾಲದಿಂದ ಅಂತವಿಲ್ಲದವನು; ದೇಶದಿಂದ ಅಂತವಿಲ್ಲದವನು; ಗುಣಗಳಿಂದ ಅಂತವಿಲ್ಲದವನು ಹಾಗೂ ಶಕ್ತಿಯಲ್ಲಿ ಅಂತವಿಲ್ಲದವನು. ಇದು ನಾವು ಯೋಚಿಸಲೂ ಸಾಧ್ಯವಾಗದ ಭಗವಂತನ ಗುಣಧರ್ಮ.

ಯಥೋದಕಂ ಶುದ್ಧೇ ಶುದ್ಧಮಾಸಿಕ್ತಂ ತಾದೃಗೇವ ಭವತಿ ।
ಏವಂ ಮುನೇರ್ವಿಜಾನತ ಆತ್ಮಾ ಭವತಿ ಗೌತಮ ॥೧೫॥

ಹೇಗೆ ಭಗವಂತನ ಗುಣಧರ್ಮಗಳನ್ನು ಬೇರೆಬೇರೆಯಾಗಿ ಚಿಂತನೆ ಮಾಡಬಾರದೋ, ಹಾಗೇ ಎಲ್ಲವೂ ಭಗವಂತನ ಸ್ವರೂಪ ಎಂದೂ ಚಿಂತನೆ ಮಾಡಬಾರದು. ಭಗವಂತನ ಉಪಾಸನೆ ಮಾಡುವವರು ಭಗವಂತನೇ ಆಗಿಬಿಡುತ್ತಾರೆ ಎನ್ನುವ ಚಿಂತನೆ ಸಲ್ಲದು. ಜ್ಞಾನಾನಂದಮಯನಾದ ಜೀವ ಮೋಕ್ಷದಲ್ಲಿ ಜ್ಞಾನಾನಂದಮಯನಾದ ಭಗವಂತನನ್ನು ಸೇರುತ್ತಾನೆ. ಅಲ್ಲಿ ಜೀವ ಮತ್ತು ಭಗವಂತ ಒಂದಾಗುತ್ತಾರೆ. ಇಲ್ಲಿ ಒಂದಾಗುವುದು ಎಂದರೆ ಒಟ್ಟಾಗುವುದು, ಒಂದೇ ಆಗುವುದಲ್ಲ. ಶುದ್ಧವಾದ ಎರಡು ಲೋಟ ನೀರನ್ನು ಬೆರೆಸಿದರೆ ಹೇಗೆ ಬೇರ್ಪಡಿಸಲು ಸಾಧ್ಯವಿಲ್ಲವೋ ಹಾಗೆ ಒಂದಾಗುವುದು. ಭಗವಂತನನ್ನು ಕಂಡ ಜ್ಞಾನಿಯ ಸ್ವರೂಪ ಭಗವಂತನ ಜೊತೆಗೆ ಸೇರಿಕೊಳ್ಳುವುದೇ ಹೊರತು ಭಗವಂತನೇ ಆಗುವುದಲ್ಲ.

ಮೋಕ್ಷವನ್ನು ಸೇರಿದ ಜೀವರು ಮಾನಸಿಕವಾಗಿಯೂ ಕೂಡಾ ಭಗವಂತನೊಡನೆ ಒಂದಾಗಿರುತ್ತಾರೆ. ಅಂದರೆ ಭಗವಂತನಿಗೂ ಹಾಗೂ ಅವನ ಭಕ್ತರಿಗೂ ಅಲ್ಲಿ ಅಭಿಪ್ರಾಯ ಬೇಧವಿರುವುದಿಲ್ಲ. ಮೋಕ್ಷದಲ್ಲಿ ಸ್ತ್ರೀಯರಿದ್ದಾರೆ, ಪುರುಷರಿದ್ದಾರೆ. ಅಲ್ಲಿ ಅಜ್ಞಾನ-ದುಃಖವಿಲ್ಲ. ಎಲ್ಲರೂ ಜ್ಞಾನಾನಂದ ಸ್ಥಿತಿಯಲ್ಲಿ ಭಗವಂತನೊಂದಿಗಿರುತ್ತಾರೆ. "ಇವರೆಲ್ಲರನ್ನೂ ನಿಯಮಿಸುವ ಸ್ವಾಮಿ ನೀನು ತಿಳಿಯ ಬಯಸಿರುವ ಆ ಭಗವಂತ" ಎನ್ನುತ್ತಾನೆ ಯಮ.

॥ ಇತಿ ಕಾಠಕೋಪನಿಷದಿ ದ್ವಿತೀಯಾಧ್ಯಾಯೇ ಪ್ರಥಮಾ ವಲ್ಲೀ ॥

ಇಲ್ಲಿಗೆ ಕಾಠಕೋಪನಿಷತ್ತಿನ ಎರಡನೇ ಅಧ್ಯಾಯದ ಮೊದಲ ವಲ್ಲೀ ಮುಗಿಯಿತು

*******

# ವಲ್ಲೀ-೦೨

ಪುರಮೇಕಾದಶದ್ವಾರಮಜಸ್ಯಾವಕ್ರಚೇತಸಃ ।
ಅನುಷ್ಠಾಯ ನ ಶೋಚತಿ ವಿಮುಕ್ತಶ್ಚ ವಿಮುಚ್ಯತೇ । ಏತದ್ವೈ ತತ್ ॥೧॥

ನಾವು ಈ ದೇಹದಲ್ಲಿರುವಾಗ ನಮ್ಮ ಅನುಷ್ಠಾನ ಹೇಗಿರಬೇಕು ಎನ್ನುವುದನ್ನು ಯಮ ಇಲ್ಲಿ ವಿವರಿಸಿದ್ದಾನೆ. ಮಾನವ ಶರೀರವನ್ನು 'ಪುರ' ಎಂದು ಕರೆಯುತ್ತಾರೆ. ಇತರ ಎಲ್ಲಾ ಪ್ರಾಣಿಗಳ ಶರೀರಕ್ಕಿಂತ ಮನುಷ್ಯ ಶರೀರ ಪೂರ್ಣ ವಿಕಸನ ಹೊಂದಿರುವ ಶರೀರವಾಗಿರುವುದರಿಂದ ಇದನ್ನು 'ಪುರ' ಎನ್ನುತ್ತಾರೆ. ಈ ಶರೀರ ಜೀವ ವಾಸ ಮಾಡುವ ಮನೆ. ಈ ಶರೀರವನ್ನು ಯಮ 'ಹನ್ನೊಂದು ದ್ವಾರಗಳ ಪುರ' ಎಂದಿದ್ದಾನೆ. ಗೀತೆಯಲ್ಲಿ ಕೃಷ್ಣ "ನವದ್ವಾರೇ ಪುರೇ ದೇಹೀ" ಎಂದು ವಿವರಿಸಿರುವುದು ನಮಗೆ ತಿಳಿದಿದೆ(ಗೀತಾ: ೫-೧೩). ಈ ನವ ದ್ವಾರಗಳಲ್ಲದೇ[ಎರಡು ಕಿವಿಗಳು, ಎರಡು ಕಣ್ಣುಗಳು, ಎರಡು ಮೂಗಿನ ಹೊರಳೆಗಳು, ಬಾಯಿ, ಪಾಯು ಮತ್ತು ಉಪಸ್ಥ] ಜೀವಕ್ಕೆ ಸಂಬಂಧಿಸಿದ ಇನ್ನೂ ಎರಡು ದ್ವಾರಗಳಿವೆ. (೧) ಹುಟ್ಟುವ ತನಕ ತಾಯಿಯ ಹೊಟ್ಟೆಯಲ್ಲಿ ಆಹಾರವನ್ನು ಸೇವಿಸುವ ನಾಭಿ, (೨) ಸತ್ತ ಮೇಲೆ(ಕೊನೇಯ ಸಾವು) ಊರ್ಧ್ವ ಲೋಕಕ್ಕೆ ಹೋಗುವ ಸುಷುಮ್ನ ನಾಡಿಯ ತುದಿ-ಸಹಸ್ರಾರ. ಈ ಎರಡು ದ್ವಾರಗಳನ್ನು ಸೇರಿಸಿದರೆ ನಮ್ಮ ದೇಹಕ್ಕೆ ಹನ್ನೊಂದು ದ್ವಾರಗಳು. ಇಂತಹ ಶರೀರ ಆ ಭಗವಂತನಿಗೆ ಸೇರಿದ್ದು. ಯಾರಿಗೆ ಹುಟ್ಟಿಲ್ಲವೋ(ಅಜ) ಮತ್ತು ಯಾರು ಅವಕ್ರಚೇತನವೋ(ಎಲ್ಲವನ್ನೂ ಸಹಜವಾಗಿ ಗ್ರಹಿಸುವವ) ಅಂತಹ ಭಗವಂತ ನಮಗೆ ಕೊಟ್ಟ ಸಾಧನಾ ಶರೀರವಿದು. ಈ ಅಂಶವನ್ನು ತಿಳಿದು ನಿತ್ಯಾನುಷ್ಠಾನ ಮಾಡುವವರು ಎಂದೂ ದುಃಖಕ್ಕೊಳಗಾಗುವುದಿಲ್ಲ. ಈ ರೀತಿ ಭಗವಂತನನ್ನು ಕಾಣುವವನಿಗೆ ಜೀವನ್ಮುಕ್ತಿ ದೊರೆಯುತ್ತದೆ ಹಾಗೂ ಕೊನೇಯದಾಗಿ ದೇಹ ಬಿಟ್ಟು ಹೊರಬಂದ ಮೇಲೆ ಆತ ಆನಂದಸ್ವರೂಪನಾಗಿ ಭಗವಂತನನ್ನು ಸೇರುತ್ತಾನೆ. "ನೀನು ಕೇಳಿದ ಮುಕ್ತಾಮುಕ್ತ ಭಗವದ್ ತತ್ವ ಇದೇ" ಎನ್ನುತ್ತಾನೆ ಯಮ.

ಇಲ್ಲಿ ನಾವು ಒಂದು ವಿಷಯವನ್ನು ಗಮನಿಸಬೇಕು. ಹೆಜ್ಜೆಹೆಜ್ಜೆಗೂ ಯಮ ಭಗವಂತನನ್ನು ತಿಳಿದು ಅನುಷ್ಠಾನ ಮಾಡಿದರೆ ದುಃಖರಹಿತನಾಗಬಹುದು ಎಂದು ಒತ್ತಿ ಹೇಳಿದ್ದಾನೆ. ನಾವು ಭಗವಂತನನ್ನು ತಿಳಿದಾಗ, ತಿಳಿದು ಅನುಷ್ಠಾನ ಮಾಡಿದಾಗ ನಮ್ಮ ಆತ್ಮಬಲ ಗಟ್ಟಿಗೊಳ್ಳುತ್ತದೆ. ಆಗ ಜೀವನದಲ್ಲಿ ಏನೇ ಕಷ್ಟ ಬಂದರೂ ನಮಗೆ ನೋವಾಗುವುದಿಲ್ಲ. "ನನ್ನೊಳಗೆ ಭಗವಂತನಿದ್ದಾನೆ, ಅವನು ನಡೆಸುತ್ತಾನೆ" ಎನ್ನುವ ಆತ್ಮಬಲ ನಮ್ಮ ದುಃಖವನ್ನು ಪರಿಹರಿಸುತ್ತದೆ. ಜ್ಞಾನಿಗಳು ಹೇಳುವಂತೆ: ಎಂದೂ ದೇವರ ಹತ್ತಿರ ನಾವು ಕಷ್ಟ ಬರಬಾರದು ಎಂದು ಕೇಳಿಕೊಳ್ಳಬಾರದು ಮತ್ತು ಕಷ್ಟ ಬಂದಾಗ 'ಅಯ್ಯೋ' ಎನ್ನಬಾರದು. ಭಗವಂತನ ಮೇಲೆ ನಂಬಿಕೆಯಿಟ್ಟು ಬಂದದ್ದನ್ನು ಬಂದಂತೆ ಧೈರ್ಯದಿಂದ ಎದುರಿಸಬೇಕು. ನಾವು ಎಷ್ಟು ಹೆಚ್ಚು ಕಷ್ಟ ಅನುಭವಿಸುತ್ತೇವೋ ಅಷ್ಟೇ ಹೆಚ್ಚು ಪೂರ್ವ ಜನ್ಮದ ಪಾಪವನ್ನು ಕಳೆದುಕೊಳ್ಳುತ್ತೇವೆ. ಈ ಜೀವ ಎಷ್ಟು ಮಾಗಿತೋ ಅಷ್ಟು ಪಾಪ ಕ್ಷಯವಾಗುತ್ತದೆ. ಕಷ್ಟಗಳು ನಾವು ತಿನ್ನುವ ಔಷಧದಂತೆ. ಅದು ಯಾವಾಗಲೂ ಕಹಿ. ಹೇಗೆ ಕಹಿ ಔಷಧದಿಂದ ರೋಗ ಗುಣವಾಗುತ್ತದೋ, ಹಾಗೇ ಕಷ್ಟಗಳು ನಮ್ಮ ಪಾಪವನ್ನು ತೊಳೆದು ನಮ್ಮನ್ನು ಭಗವಂತನತ್ತ ಕೊಂಡೊಯ್ಯುತ್ತವೆ.

ಹಂಸಃ ಶುಚಿಷದ್ವಸುರಾಂತರಿಕ್ಷಸದ್ ಹೋತಾ ವೇದಿಷದತಿಥಿರ್ದುರೋಣಸತ್ ।
ನೃಷದ್ವರಸದೃತಸದ್ವ್ಯೋಮಸದ್ ಅಬ್ಜಾ ಗೋಜಾ ಅದ್ರಿಜಾ ಋತಜಾ ಋತಂ ಬೃಹತ್ ॥೨॥

ಇದು ಬಹಳ ಪ್ರಸಿದ್ಧವಾದ ಹಂಸ ಗಾಯತ್ರಿ ಮಂತ್ರ. ಇಲ್ಲಿ ಎರಡು ಗಾಯತ್ರಿಗಳಿವೆ. ಎರಡೂ ಒಟ್ಟಿಗೆ ಸೇರಿದಾಗ ಇದು ಜಗತೀ ಛಂದಸ್ಸಾಗುತ್ತದೆ. [ಗಾಯತ್ರಿಯಲ್ಲಿ ೨೪ ಅಕ್ಷರ, ಜಗತೀಯಲ್ಲಿ ೪೮ ಅಕ್ಷರ. ಇಲ್ಲಿ ಎರಡು ಅಧಿಕ ಅಕ್ಷರಗಳಿವೆ] ಇದನ್ನು ನಿತ್ಯೋಪಾಸನೆಗೆ ಬಳಸುತ್ತಾರೆ. ಪ್ರಸಿದ್ಧವಾದ ವಿಶ್ವಾಮಿತ್ರ ಗಾಯತ್ರಿಯಲ್ಲಿ ೨೪ ಅಕ್ಷರಗಳ ಹತ್ತು ಶಬ್ದಗಳಿದ್ದರೆ, ಇಲ್ಲಿ ಒಟ್ಟು ಹದಿನೆಂಟು ಶಬ್ದಗಳಿದ್ದು, ಮೊದಲ ಗಾಯತ್ರಿಯಲ್ಲಿ ಎಂಟು ಶಬ್ದಗಳು[ಹಂಸಃ, ಶುಚಿಷತ್, ವಸುಃ, ಅಂತರಿಕ್ಷಸತ್, ಹೋತಾ, ವೇದಿಷತ್, ಅತಿಥಿಃ, ದುರೋಣಸತ್] ಹಾಗೂ ಎರಡನೇ ಗಾಯತ್ರಿಯಲ್ಲಿ ಹತ್ತು ಶಬ್ದಗಳಿವೆ[ನೃಷತ್, ವರಸತ್, ಋತಸತ್, ವ್ಯೋಮಸತ್, ಅಬ್ಜಾಃ, ಗೋಜಾಃ, ಅದ್ರಿಜಾಃ, ಋತಜಾಃ, ಋತಮ್, ಬೃಹತ್].

ಈವರೆಗೆ ಯಮ ನಮ್ಮ ಹೃದಯ ಗುಹೆಯಲ್ಲಿ ಭಗವಂತನಿದ್ದಾನೆ ಎಂದು ಹೇಳಿದ. ಈ ಶರೀರ ನಮಗೆ ಭಗವಂತ ಕೊಟ್ಟ ವಾಹನ, ಈ ವಾಹನವನ್ನು ಉಪಯೋಗಿಸಿಕೊಂಡು ಸಾಧನೆಯ ಮೂಲಕ ಭಗವಂತನತ್ತ ಪಯಣ ಮಾಡಬೇಕು ಎಂತಲೂ ಯಮ ಹೇಳಿದ. ಸಾಧನೆ ಮೂಲಕ ಪಯಣ ಅಂದರೆ ನಿರಂತರ ಉಪಾಸನೆ. ಅಂತಹ ಉಪಾಸನೆಗಾಗಿಯೇ ಅಪೂರ್ವ ವಿಷಯಗಳನ್ನೊಳಗೊಂಡ ಈ ಹಂಸ ಗಾಯತ್ರಿಯನ್ನು ಇಲ್ಲಿ ವಿವರಿಸಲಾಗಿದೆ. ಈ ಮಂತ್ರದ ಪೂರ್ವಾರ್ಧ ಒಂದು ರೀತಿಯಿಂದ ಹಾಗೂ ಉತ್ತರಾರ್ಧ ಇನ್ನೊಂದು ರೀತಿಯಿಂದ ಉಪಾಸನೆಯನ್ನು ಹೇಳುತ್ತದೆ.

ಇಲ್ಲಿ ಭಗವಂತನನ್ನು ಹಂಸಃ ಎಂದು ಉಪಾಸನೆ ಮಾಡಬೇಕು ಎಂದಿದ್ದಾರೆ. ಹಂಸ ಎಂದರೆ ಹಂಸಪಕ್ಷಿಯಲ್ಲ. ಹಂಸಃ ಎಂದರೆ: ಯಾವ ದೋಷವೂ ಇಲ್ಲದ ಹಾಗೂ ಎಲ್ಲಾ ಗುಣಗಳ ಸಾರ ಸಂಗ್ರಹನಾದ ಭಗವಂತ. ಇಲ್ಲಿ ನಾವು ಉಚ್ಛಾರಕ್ಕೆ ಸಂಬಂಧಿಸಿದ ಒಂದು ಮುಖ್ಯ ವಿಚಾರವನ್ನು ಗಮನಿಸಬೇಕು. ಯಜುರ್ವೇದದಲ್ಲಿ 'ಸ' ಅಥವಾ ಶ-ಕಾರ ಇದ್ದಾಗ ಮೊದಲಿನ ಅನುಸ್ವಾರವನ್ನು ಮ-ಕಾರವಾಗಿ ಉಚ್ಛಾರ ಮಾಡುವುದಿಲ್ಲ/ಮಾಡಬಾರದು. ಆದ್ದರಿಂದ ಹಂಸಃ ಎನ್ನುವಲ್ಲಿ ಮ್-ಕಾರದ ಬದಲು ಕ-ವರ್ಗದ ಅನುನಾಸಿಕವನ್ನು[ಕ, ಖ, ಗ, ಘ, ಙ] ಉಪಯೋಗಿಸಬೇಕು. ಆದ್ದರಿಂದ ಉಚ್ಛಾರ ಹಙಸಃ ಎಂದಾಗುತ್ತದೆ. [ಇದನ್ನು ಕೆಲವರು ಹಗುಂಸಃ ಎಂದು ಉಚ್ಛರಿಸುತ್ತಾರೆ. ಆದರೆ ಅದು ಸರಿಯಾದ ಉಚ್ಛಾರವಲ್ಲ].

'ಹಂಸಃ ಶುಚಿಷತ್' ಅಂದರೆ: ಹಂಸಃ ನಾಮಕ ಭಗವಂತ ಶುಚಿಯಾದ ಚೇತನದಲ್ಲಿದ್ದಾನೆ ಎಂದರ್ಥ. ಚೇತನಗಳಲ್ಲಿ ಸದಾ ಶುಚಿಯಾಗಿರುವವರು ಪ್ರಾಣದೇವರು. ಉಪನಿಷತ್ತಿನಲ್ಲಿ ಹೇಳುವಂತೆ ಅಸುರರು ದೇವತೆಗಳ ಒಳಗೆ ಸೇರಿ ಅವರ ಬುದ್ಧಿ ಕೆಡಿಸಿ ಅವರಿಗೆ ಅಸುರಾವೇಶ ಬರುವಂತೆ ಮಾಡಬಲ್ಲರು.[ಉದಾಹರಣೆಗೆ: ತನಗೆ ಪೂಜೆ ಸಲ್ಲಿಸಲಿಲ್ಲ ಎಂದು ಇಂದ್ರ ಅಸುರಾವೇಶದಿಂದ ಮಳೆ ಬರಿಸಿದ್ದು-ಕೃಷ್ಣ ಗೋವರ್ಧನ ಗಿರಿ ಬೆಟ್ಟವನ್ನು ಎತ್ತಿ ರಕ್ಷಣೆ ಮಾಡಿದ ಕಥೆ] ಇಂದ್ರಾದಿ ದೇವತೆಗಳಿಗೆ ಅಸುರಾವೇಶ ಬರಬಹುದು ಆದರೆ ಪ್ರಾಣದೇವರಿಗೆ ಎಂದೂ ಅಸುರಾವೇಶ ಇಲ್ಲವಂತೆ. ಪ್ರಾಣದೇವರ ಮೇಲೆ ಆಕ್ರಮಿಸಬೇಕು ಎಂದು ಪ್ರಯತ್ನಿಸುವ ಅಸುರರು ಕಲ್ಲು ಬಂಡೆಗೆ ತಲೆ ಚಚ್ಚಿಕೊಂಡಂತೆ ಚಚ್ಚಿಕೊಂಡು ನಾಶವಾಗಿ ಹೋಗುತ್ತಾರೆ. ಹೀಗೆ ಯಾವ ಆಸುರೀ ಶಕ್ತಿಯ ಪ್ರಭಾವಕ್ಕೂ ಒಳಗಾಗದ ಶುದ್ಧತತ್ವ 'ಪ್ರಾಣ ದೇವರು'. ಇಂತಹ ಶುಚಿಯಾದ ಪ್ರಾಣದೇವರಲ್ಲಿ ಸನ್ನಿಹಿತನಾಗಿ ಹಂಸಃ ನಾಮಕ ಭಗವಂತನಿದ್ದಾನೆ.

ಹೃತ್ಕಮಲದಲ್ಲಿ ಜೀವನಿದ್ದಾನೆ. ಆ ಜೀವನೊಳಗೆ ಜೀವ ಕಲಾಭಿಮಾನಿಯಾಗಿ ಪ್ರಾಣದೇವರಿದ್ದಾರೆ. ಪ್ರಾಣದೇವರ ಒಳಗೆ ಹಂಸಃ ನಾಮಕ ಭಗವಂತನಿದ್ದಾನೆ. ಈ ಕಾರಣಕ್ಕಾಗಿ ಪ್ರಾಣದೇವರಿಗೂ ಕೂಡಾ ಹಂಸಃ ಎನ್ನುವ ಹೆಸರಿದೆ. ಒಟ್ಟಿನಲ್ಲಿ ಹೇಳಬೇಕೆಂದರೆ ಭಗವಂತ ಎಲ್ಲರ ಒಳಗೂ ಬಿಂಬರೂಪನಾಗಿ ನೆಲೆಸಿದ್ದಾನೆ.

'ವಸುಃ ಅಂತರಿಕ್ಷಸತ್' ಅಂದರೆ ಅಂತರಿಕ್ಷದಲ್ಲಿ ವಸುಃ ನಾಮಕನಾಗಿ ಭಗವಂತನಿದ್ದಾನೆ ಎಂದರ್ಥ. ವಸುಃ ಎಂದರೆ ಶ್ರೇಷ್ಠವಾದ ಆನಂದಸ್ವರೂಪ.[ವ=ವರ=ಶ್ರೇಷ್ಠ; ಸು= ಸುಖ=ಆನಂದ]. ಹೀಗೆ ಜೀವ ಜಡಾತ್ಮಕವಾದ ಪ್ರಪಂಚದಲ್ಲಿ ಎಲ್ಲಾ ಕಡೆ ಆನಂದ ಸ್ವರೂಪನಾಗಿ ಭಗವಂತ ತುಂಬಿದ್ದಾನೆ.

'ಹೋತಾ ವೇದಿಷತ್' : ಇಲ್ಲಿ 'ವೇದಿ' ಎಂದರೆ ಯಜ್ಞ ವೇದಿಕೆ. ಅಂದರೆ ಯಜ್ಞಕುಂಡ. ವೇದಿಯಲ್ಲಿರುವವನು ಅಗ್ನಿ. ಅಗ್ನಿಯಲ್ಲಿ ಅಗ್ನಿ ಅಂತರ್ಗತನಾಗಿ ಅಗ್ನಿನಾರಾಯಣ ಭಗವಂತ ತುಂಬಿದ್ದಾನೆ. ಅಗ್ನಿಯಲ್ಲಿದ್ದು ನಾವು ಅರ್ಪಿಸುವ ಹವಿಸ್ಸುಗಳನ್ನು ತಿನ್ನುವವ ಆ ಭಗವಂತ. ಯಜ್ಞ ಮಾಡುವಾಗ ಹವನ ಮಂತ್ರಗಳನ್ನು ಹೇಳುವವರನ್ನು 'ಹೋತೃ' ಎಂದು ಕರೆಯುತ್ತಾರೆ. ಇವರು ಹವನ ಮಾಡುವಾಗ 'ಶಸ್ತ್ರ' ಮಂತ್ರಗಳನ್ನು ಹೇಳುವವರು. ಇಂತಹ ಹೋತೃಗಳ ಒಳಗೆ ಹೋತಾಃ ನಾಮಕನಾಗಿ ಭಗವಂತ ತುಂಬಿದ್ದಾನೆ. ನಮ್ಮ ಇಂದ್ರಿಯಗಳಲ್ಲಿ ನಿರಂತರ ವಿಷಯಗಳ ಹೋಮ ನಡೆಯುತ್ತಿರುತ್ತದೆ. ಅಗ್ನಿಯಲ್ಲಿದ್ದು ಆಹುತಿಯನ್ನು ಸ್ವೀಕರಿಸುವ ಭಗವಂತನೇ ನಮ್ಮ ಇಂದ್ರಿಯಗಳಲ್ಲಿದ್ದು ಅವುಗಳನ್ನು ನಿಯಮಿಸುವ ಸರ್ವಾಂತರ್ಯಾಮಿ.

'ಅತಿಥಿಃ ದುರೋಣಸತ್': ದುರೋಣ ಎಂದರೆ ಸೋಮರಸ ಪಾತ್ರೆ ಅಥವಾ ಮರದ ದೊನ್ನೆ. ಭಗವಂತನಿಗೆ ಅರ್ಪಿಸುವ ಸೋಮರಸದಲ್ಲೂ ಹಾಗೂ ಎಲ್ಲಾ ಹವಿಸ್ಸುಗಳಲ್ಲೂ ಭಗವಂತ ತುಂಬಿದ್ದಾನೆ. ಯಾಗಶಾಲೆಯಲ್ಲಿ ಬಂದು ಕುಳಿತಿರುವ ಅತಿಥಿಯೊಳಗೆ ಕೂಡಾ ಭಗವಂತ ತುಂಬಿದ್ದಾನೆ.[ಅತಿಥಿ ಪದದ ಅರ್ಥವನ್ನು ಮೊದಲ ಅಧ್ಯಾಯದಲ್ಲಿ(೧-೧-೭) ವಿವರಿಸಲಾಗಿದೆ].

ಹಂಸ ಗಾಯತ್ರಿಯ ಉತ್ತರಾರ್ಧ ಹೀಗೆ ಹೇಳುತ್ತದೆ: "ನೃಷದ್ವರಸದೃತಸದ್ವ್ಯೋಮಸದ್ ಅಬ್ಜಾ ಗೋಜಾ ಅದ್ರಿಜಾ ಋತಜಾ ಋತಂ ಬೃಹತ್". ಈಗ ಮುದ್ರಣವಾಗಿರುವ ಎಲ್ಲಾ ಪುಸ್ತಕಗಳಲ್ಲೂ "ಅಬ್ಜಾ ಗೋಜಾ ಋತಜಾ ಅದ್ರಿಜಾ ಋತಂ ಬೃಹತ್" ಎಂದು ಮುದ್ರಣವಾಗಿರುವುದನ್ನು ಕಾಣುತ್ತೇವೆ. ಆದರೆ ಇದು ಋಗ್ವೇದದ ಮಂತ್ರ. [ಋಗ್ವೇದದಲ್ಲಿ- "ಅಬ್ಜಾ ಗೋಜಾ ಋತಜಾ ಅದ್ರಿಜಾ ಋತಮ್" ಎಂದಿದೆ(ಋಗ್ವೇದ- ೪-೦೪೦-೦೫). ಅಲ್ಲಿ 'ಬೃಹತ್' ಪದ ಬಳಸಿಲ್ಲ]. ಪ್ರಾಚೀನ ವ್ಯಾಖ್ಯಾನಗಳ ಪ್ರಕಾರ ಮತ್ತು ಅರ್ಥ ಔಚಿತ್ಯದಿಂದ ಕಠ ಉಪನಿಷತ್ತಿನಲ್ಲಿ "ಅಬ್ಜಾ ಗೋಜಾ ಅದ್ರಿಜಾ ಋತಜಾ ಋತಂ ಬೃಹತ್" ಸರಿಯಾದ ಪಾಠ ಎನಿಸುತ್ತದೆ.

ನೃಷತ್: ಪ್ರತಿಯೊಬ್ಬ ಮನುಷ್ಯನಲ್ಲಿಯೂ ಆ ಭಗವಂತನಿದ್ದಾನೆ. ಆದ್ದರಿಂದ ಯಾರೂ ಯಾರನ್ನು ನೋಡಿಯೂ ಅಸಹ್ಯಪಡುವಂತಿಲ್ಲ. ಆದ್ದರಿಂದ ನಾವು ನಿತ್ಯ ವ್ಯವಹಾರದಲ್ಲಿ ಸಂಪರ್ಕಿಸುವ ಪ್ರತಿಯೊಬ್ಬನಲ್ಲೂ ಭಗವಂತನನ್ನು ಕಾಣಬೇಕು.

ವರಸತ್: ಮನುಷ್ಯನಿಗಿಂತ ಮೇಲಿರುವವರು ದೇವತೆಗಳು. ಬ್ರಹ್ಮಾದಿ ಸಮಸ್ತ ದೇವತೆಗಳಲ್ಲೂ ಆ ಭಗವಂತನಿದ್ದಾನೆ.

ಋತಸತ್, ವ್ಯೋಮಸತ್: ಬ್ರಹ್ಮನಿಗಿಂತ ಎತ್ತರದಲ್ಲಿ ಮೂಲ ಪ್ರಕೃತಿಮಾನಿನಿ ಲಕ್ಷ್ಮಿ ಇದ್ದಾಳೆ. ಮೂಲ ಪ್ರಕೃತಿಗೆ ಎರಡು ಮುಖ. ಜಡಪ್ರಕೃತಿ ಮತ್ತು ಚೇತನ ಪ್ರಕೃತಿ. ಇದನ್ನೇ ಇಲ್ಲಿ ಋತಸತ್ ವ್ಯೋಮಸತ್ ಎಂದಿದ್ದಾರೆ. ಋತ ಎಂದರೆ ಎಂದೂ ಬದಲಾವಣೆ ಹೊಂದದೆ ಏಕರೂಪವಾಗಿರುವ ಮೂಲಪ್ರಕೃತಿ. ವ್ಯೋಮ ಎಂದರೆ ಎಲ್ಲಾ ಕಡೆ ತುಂಬಿರುವ ಶಕ್ತಿ. ಹೀಗೆ ಚೇತನಾಚೇತನಾತ್ಮಕ ಪ್ರಪಂಚದಲ್ಲಿ ಮತ್ತು ಅದಕ್ಕೆ ನಿಯಾಮಕಳಾದ ಚಿತ್ ಪ್ರಕೃತಿ ಲಕ್ಷ್ಮಿಯಲ್ಲಿ ಸನ್ನಿಹಿತನಾಗಿದ್ದಾನೆ ಆ ಭಗವಂತ.

ಅಬ್ಜಾಃ: ನೀರಿನಲ್ಲಿ ಹುಟ್ಟಿದವನು ಅಬ್ಜಾಃ. ಇದು ಚತುರ್ಮುಖನ ಹೆಸರು. ಭಗವಂತ ಚತುರ್ಮುಖನಲ್ಲಿ ನೆಲೆಸಿದ್ದಾನೆ.
ಗೋಜಾಃ: ಗೌಃ ಎಂದರೆ ಸರಸ್ವತಿ. ಸರಸ್ವತಿಯ ಮಕ್ಕಳಾದ ಗರುಡ-ಶೇಷ-ರುದ್ರರಲ್ಲಿ ನೆಲೆಸಿರುವ ಭಗವಂತ ಗೋಜಾಃ.
ಅದ್ರಿಜಾಃ: ಅದ್ರಿ ಎಂದರೆ ಎಲ್ಲರೂ ಆದರಿಸಬೇಕಾದ ಶಿವತತ್ವ. ಶಿವನಿಂದ ಹುಟ್ಟಿದ ಇಂದ್ರಾದಿ ಸಮಸ್ತ ದೇವತೆಗಳಲ್ಲಿ ನೆಲೆಸಿರುವ ಭಗವಂತ ಅದ್ರಿಜಾಃ.
ಋತಜಾಃ: ಜ್ಞಾನವನ್ನು ಪಡೆದು ಮುಕ್ತಿಯನ್ನು ಪಡೆದವರಲ್ಲಿ ಸನ್ನಿಹಿತನಾಗಿರುವ ಭಗವಂತ ಋತಜಾಃ.
ಋತಮ್, ಬೃಹತ್: ಎಂದೂ ಬದಲಾಗದ ಜ್ಞಾನ ಸ್ವರೂಪ ಭಗವಂತ ಋತಮ್. ಇಂತಹ ಭಗವಂತನಿಗೆ ಸಾಟಿಯಾದ ಇನ್ನೊಂದು ವಸ್ತುವಿಲ್ಲ. ಆದ್ದರಿಂದ ಆತ ಬೃಹತ್.
ಈ ಮಂತ್ರಕ್ಕೆ ಇನ್ನೊಂದು ಮುಖವಿದೆ. ಅದು ವೇದದಲ್ಲೇ ಬಂದ ಅರ್ಥ ವಿವರಣೆ. ತೈತ್ತಿರೀಯ ಅರಣ್ಯಕದಲ್ಲಿ ಈ ಮಂತ್ರಕ್ಕೆ ಅರ್ಥ ಬರೆದಿದ್ದಾರೆ. ಆ ಹಿನ್ನಲೆಯಲ್ಲಿ ಈ ಮಂತ್ರದ ಅರ್ಥ ವಿವರಣೆಯನ್ನು ನೋಡೋಣ.
ಈ ಮಂತ್ರದಲ್ಲಿ 'ಋತ' ಎನ್ನುವ ಶಬ್ದ ಮೂರು ಬಾರಿ ಬಂದಿದೆ ಹಾಗೂ ಮೂರಕ್ಕೂ ಬೇರೆ ಬೇರೆ ಅರ್ಥವಿದೆ. ಆದರೆ ಸಂಸ್ಕೃತದಲ್ಲಿ ಒಂದು ನಿಯಮವಿದೆ. ಅದೇನೆಂದರೆ: ಒಂದು ಶಬ್ದವನ್ನು ಒಂದು ಸಂದರ್ಭದಲ್ಲಿ ಒಂದು ಪ್ರಕರಣದಲ್ಲಿ ಅನೇಕ ಬಾರಿ ಉಚ್ಚಾರ ಮಾಡಿದರೆ ಅದು ಒಂದೇ ಅರ್ಥವನ್ನು ಹೇಳಬೇಕೇ ಹೊರತು ಅರ್ಥಾಂತರ ಮಾಡಬಾರದು ಎಂದು. ಇದು ಭಾಷಾಶಾಸ್ತ್ರದ ನಿಯಮ. ಆದರೆ ಈ ನಿಯಮ ಇಲ್ಲಿ ಅನ್ವಯಿಸುವುದಿಲ್ಲ. ಏಕೆಂದರೆ ಇಲ್ಲಿ ಋತ ಎನ್ನುವ ಶಬ್ದ ಮೂರು ಬಾರಿ ಬಂದಿದ್ದಲ್ಲ, ಬದಲಿಗೆ ಋತಸತ್, ಋತಜಾಃ, ಋತಮ್ ಎನ್ನುವ ಬೇರೆ ಬೇರೆ ಶಬ್ದಗಳು ಬಳಕೆಯಾಗಿರುವುದು. ಹಾಗಾಗಿ ಈ ಮೂರು ಶಬ್ದಗಳಿಗೂ ಇಲ್ಲಿ ಬೇರೆ ಬೇರೆ ಅರ್ಥಗಳಿವೆ.
ಋತಸತ್ ಎಂದರೆ ಋತಗಳಲ್ಲಿ ಇರುವವನು. ಸಮಸ್ತ ವೇದಗಳಲ್ಲಿ ಪ್ರತಿಪಾದ್ಯನಾದ ಭಗವಂತ ಋತಸತ್. ವೇದ ಎಂದೂ ಅಪಾರ್ಥಕ್ಕೆ ಎಡೆ ಮಾಡಿಕೊಡುವುದಿಲ್ಲ. ಯಥಾರ್ಥ ಜ್ಞಾನವನ್ನು ಕೊಡುವುದರಿಂದ ವೇದವನ್ನು 'ಋತ' ಎನ್ನುತ್ತಾರೆ. ಭಗವಂತ ಸರ್ವವೇದ ಪ್ರತಿಪಾದ್ಯನಾಗಿ, ಸಮಸ್ತ ಶಬ್ದವಾಚ್ಯನಾಗಿ, ಸಮಸ್ತ ಅಕ್ಷರ ವಾಚ್ಯನಾಗಿ ವೇದದಲ್ಲಿ ನೆಲೆಸಿದ್ದಾನೆ.
ಸಂಸ್ಕೃತ ಭಾಷಾಶಾಸ್ತ್ರದಲ್ಲಿ ಇನ್ನೊಂದು ನಿಯಮವಿದೆ. ಯಾವ ಅರ್ಥ ಒಂದು ಶಬ್ದಕ್ಕೆ ಪ್ರಸಿದ್ಧವೋ, ಅದನ್ನು ಬಿಟ್ಟು ಅಪ್ರಸಿದ್ಧ ಅರ್ಥವನ್ನು ಹೇಳಬಾರದು ಎಂದು. 'ವ್ಯೋಮ' ಎನ್ನುವಲ್ಲಿ ಪ್ರಸಿದ್ಧ ಅರ್ಥ ಆಕಾಶ. ಆದರೆ ಇಲ್ಲಿ ಆ ಅರ್ಥವನ್ನು ಬಳಸಿಲ್ಲ. ಇದಕ್ಕೆ ಕಾರಣ: ಪ್ರಸಿದ್ಧ ಅರ್ಥ ಬಾಧಕವಾಗಿದ್ದಲ್ಲಿ ಅಪ್ರಸಿದ್ಧ ಅರ್ಥವನ್ನು ಹೇಳಬಹುದು ಎಂದು ಭಾಷಾಶಾಸ್ತ್ರ ಹೇಳುತ್ತದೆ. ಇಲ್ಲಿ ಪೂರ್ವಾರ್ಧದಲ್ಲಿ 'ಅಂತರಿಕ್ಷ' ಎನ್ನುವ ಶಬ್ದ ಬಂದಿರುವುದರಿಂದ, ಅದು ಉತ್ತರಾರ್ಧದಲ್ಲಿ ಪುನರುಕ್ತಿ ಆಗುವುದಿಲ್ಲ. ಆದ್ದರಿಂದ ವ್ಯೋಮ ಎನ್ನುವ ಶಬ್ದಕ್ಕೆ ಎಲ್ಲಾ ಕಡೆ ವ್ಯಾಪ್ತವಾಗಿರುವ ತತ್ವ ಎನ್ನುವ ಅರ್ಥ ವಿವರಣೆ ಕೊಡಲಾಗಿದೆ. ಎಲ್ಲಾ ಕಡೆ ವ್ಯಾಪ್ತವಾಗಿರುವ ತತ್ವ ಎರಡೇ. ಲಕ್ಷ್ಮೀ ಮತ್ತು ನಾರಾಯಣ. ಇಲ್ಲಿ 'ವ್ಯೋಮದಲ್ಲಿ ನೆಲೆಸಿರುವ ಭಗವಂತ' ಎಂದು ಹೇಳಿರುವುದರಿಂದ ವ್ಯೋಮ ಎಂದರೆ ಶ್ರೀಲಕ್ಷ್ಮಿ[ವಿಷ್ಣುವಿನ ಜೊತೆಗೆ ಓತಳಾದವಳು].
ಹಂಸ ಗಾಯತ್ರಿಯನ್ನು ಸೂರ್ಯೋಪಸ್ಥಾನಕ್ಕಾಗಿ ಉಪಯೋಗಿಸುತ್ತಾರೆ. ಹೇಗೆ ಗಾಯತ್ರಿಯನ್ನು ಜಪ ಮಾಡುವಾಗ ಸೂರ್ಯೋಪಸ್ಥಾನವೋ ಹಾಗೇ ಹಂಸ ಗಾಯತ್ರಿಗೂ ದೇವತೆ ಸೂರ್ಯ ಎಂದು ಆರಾಧನೆ ಮಾಡುವ ಕ್ರಮವಿದೆ. ಹೀಗಾಗಿ ತೈತ್ತಿರೀಯ ಅರಣ್ಯಕದಲ್ಲಿ ಅರ್ಥವಿವರಣೆಯನ್ನು ಸೂರ್ಯನಾರಾಯಣನ ಪರವಾಗಿ ಹೇಳಲಾಗಿದೆ. ಮುಂಜಾನೆ ಪೂರ್ವ ಸಮುದ್ರದಲ್ಲಿ ಕುಳಿತು ಸೂರ್ಯನನ್ನು ನೋಡಿದರೆ ಆತ ನೀರಿನಿಂದ ಮೇಲೆದ್ದು ಬಂದಂತೆ ಕಾಣುತ್ತಾನೆ. ಹೀಗೆ ನೀರಿನಿಂದ ಮೇಲೆದ್ದು ಬಂದಂತೆ ಕಾಣುವ ಸೂರ್ಯನಾರಾಯಣ ಅಬ್ಜಾಃ. ಸಾವಿರ ಕಿರಣ ಹೊತ್ತು

ಬರುವನಾದ್ದರಿಂದ ಆತ ಗೋಜಾಃ. ಸತ್ಯ ಸ್ವರೂಪನಾಗಿ ಆವಿರ್ಭಾವನಾಗುವ ಹಾಗೂ ಮುಕ್ತರಲ್ಲಿ ನೆಲೆಸಿರುವ ಭಗವಂತ ಋತಜಾಃ. ಸದಾ ಒಂದೇ ರೀತಿ ಇರುವ ನಿರ್ವಿಕಾರ ಬ್ರಹ್ಮತತ್ವ ಭಗವಂತ ಋತಮ್. ಹೀಗೆ ಎಲ್ಲಾ ಗುಣಗಳನ್ನೂ ಹೊಂದಿರುವ, ಎಲ್ಲಕ್ಕಿಂತ ಹಿರಿದಾದ ತತ್ವ ಭಗವಂತ 'ಬೃಹತ್'.

ಊರ್ಧ್ವಂ ಪ್ರಾಣಮುನ್ನಯತ್ಯಪಾನಂ ಪ್ರತ್ಯಗಸ್ಯತಿ ।
ಮಧ್ಯೇ ವಾಮನಮಾಸೀನಂ ವಿಶ್ವೇ ದೇವಾ ಉಪಾಸತೇ ॥೩॥

ನಾವು ಬದುಕಲು ಕಾರಣ ಉಸಿರಾಟ. ನಮ್ಮೆಲ್ಲಾ ಚಟುವಟಿಕೆಗಳಿಗೆ, ಅಸ್ತಿತ್ವಕ್ಕೆ ಕಾರಣ ನಮ್ಮೊಳಗೆ ನಡೆಯುತ್ತಿರುವ ಪ್ರಾಣಾಪಾನರ ಉಸಿರಾಟ ಕ್ರಿಯೆ. ಉಸಿರು ಒಳಕ್ಕೆ ತೆಗೆದುಕೊಳ್ಳುವುದು ಅಪಾನ ಹಾಗೂ ಉಸಿರು ಹೊರಕ್ಕೆ ಬಿಡುವುದು ಪ್ರಾಣ. ಪ್ರಾಣ-ಅಪಾನ ಎನ್ನುವುದು ಪ್ರಾಣದೇವರ ಎರಡು ಸ್ವರೂಪಭೂತ ರೂಪಗಳು. ಇಂತಹ ಪ್ರಾಣತತ್ವ ಕೂಡಾ ಸ್ವತಂತ್ರನಲ್ಲ ಎನ್ನುತ್ತಾನೆ ಯಮ. ನಮ್ಮ ಹೃದಯ ಮಧ್ಯದಲ್ಲಿ ಭಗವಂತ 'ವಾಮನ' ರೂಪಿಯಾಗಿ ಕುಳಿತಿದ್ದಾನೆ ಹಾಗೂ ಆತನ ಆತ್ಮೀಯ ಸಖನಾಗಿ ಪ್ರಾಣದೇವರು ನಿಂತು ಉಸಿರಾಡಿಸುತ್ತಿದ್ದಾರೆ. ಹೃದಯದಲ್ಲಿ ಕುಳಿತು, ಪ್ರಾಣಾಪಾನರಂತೆ ಎಲ್ಲಾ ತತ್ವಾಭಿಮಾನಿ ದೇವತೆಗಳನ್ನು ಭಗವಂತ ನಿಯಂತ್ರಿಸುತ್ತಿದ್ದಾನೆ. ಅವನ ಸುತ್ತ ಸಮಸ್ತ ದೇವತೆಗಳೂ ಅವನನ್ನು ಉಪಾಸನೆ ಮಾಡುತ್ತಿದ್ದಾರೆ.

ಅಸ್ಯ ವಿಸ್ರಂಸಮಾನಸ್ಯ ಶರೀರಸ್ಥಸ್ಯ ದೇಹಿನಃ ।
ದೇಹಾದ್ವಿಮುಚ್ಯಮಾನಸ್ಯ ಕಿಮತ್ರ ಪರಿಶಿಷ್ಯತೇ । ಏತದ್ವೈ ತತ್ ॥೪॥

ಈ ಶ್ಲೋಕವನ್ನು ಮೇಲ್ನೋಟದಲ್ಲಿ ನೋಡಿದರೆ ಇಲ್ಲಿ ಕೆಲವು ಪದಗಳ ಪುನರುಕ್ತಿಯಾಗಿದೆ ಎನ್ನುವಂತಿದೆ. "ಶರೀರಸ್ಥಸ್ಯ ದೇಹಿನಃ" ಎನ್ನುವಲ್ಲಿ ಎರಡೂ ಪದಗಳು ಒಂದೇ ಅರ್ಥವನ್ನು ಕೊಟ್ಟಂತೆ ಕಾಣುತ್ತದೆ. ಅದೇ ರೀತಿ 'ವಿಸ್ರಂಸಮಾನಸ್ಯ' ಎಂದರೂ 'ದೇಹಾದ್ವಿಮುಚ್ಯಮಾನಸ್ಯ' ಎಂದರೂ ಅರ್ಥ ಒಂದೇ- 'ದೇಹದಿಂದ ಕಳಚಿಕೊಳ್ಳುವುದು' ಎನಿಸುತ್ತದೆ. ಆದರೆ ಇದು ಪುನರುಕ್ತಿ ಅಲ್ಲ. ಇಲ್ಲಿ ಅದ್ಭುತವಾದ ವಿಷಯ ಅಡಗಿದೆ.

ಸ್ವರೂಪಭೂತವಾದ ಜೀವಕ್ಕೆ ಮೂರು ಶರೀರಗಳು. ಅವುಗಳೆಂದರೆ: ಹೊರಗೆ ಕಾಣುವ ಸ್ಥೂಲ ಶರೀರ, ಸೂಕ್ಷ್ಮ ಶರೀರ ಮತ್ತು ಲಿಂಗಶರೀರ. ಜೀವ ಸೂಕ್ಷ್ಮ ಶರೀರಿಯಾಗಿ ತಾಯಿಯ ಗರ್ಭವನ್ನು ಸೇರಿ, ಸ್ಥೂಲ ಶರೀರವನ್ನು ಪಡೆದು ಮರಳಿ ಹುಟ್ಟುತ್ತಾನೆ. ಸ್ಥೂಲ ಶರೀರವನ್ನು ಬಿಟ್ಟು ಸೂಕ್ಷ್ಮ ಶರೀರಿಯಾಗಿ ಹೊರ ಹೋಗುವುದನ್ನು ನಾವು ಸಾವು ಎನ್ನುತ್ತೇವೆ. ಈ ಮೂರೂ ಶರೀರಗಳನ್ನು ಕಳಚಿಕೊಳ್ಳದೇ ಜೀವನಿಗೆ ಮೋಕ್ಷವಿಲ್ಲ.

ಈ ಮಂತ್ರದಲ್ಲಿ 'ಶರೀರ' ಎಂದರೆ 'ಸತ್ತಾಗ ಯಾವುದು ಬಿದ್ದು ಹೋಗುತ್ತದೋ ಆ ಸ್ಥೂಲ ಶರೀರ'. ಯಾವುದು ಒಂದು ಜನ್ಮದಿಂದ ಇನ್ನೊಂದು ಜನ್ಮಕ್ಕೆ ಹರಿಯುತ್ತಾ ಮೋಕ್ಷದ ತನಕ ಜೀವದ ಜೊತೆಗಿರುತ್ತದೋ ಅದನ್ನು ಇಲ್ಲಿ 'ದೇಹ' ಎಂದಿದ್ದಾರೆ. ಅದೇ ಲಿಂಗಶರೀರ. ಜೀವ ಬದುಕಿನ ಕಾಲದಲ್ಲಿ ಈ ಸ್ಥೂಲ ಶರೀರದೊಳಗಿನ ಲಿಂಗ ಶರೀರದೊಳಗಿರುತ್ತಾನೆ. ಸಂಸಾರ ಚಕ್ರದಲ್ಲಿ ಸುತ್ತಿ, ಅನುಭವ ಪಡೆದು, ಮೋಕ್ಷಯೋಗ್ಯವಾದ ಜೀವ, ತನ್ನ ಸ್ಥೂಲ ಶರೀರವನ್ನಷ್ಟೇ ಅಲ್ಲ, ತನ್ನ ಲಿಂಗ ಶರೀರವನ್ನೂ ಕಳಚಿಕೊಂಡು ಸ್ವರೂಪಭೂತನಾಗಿ ಭಗವಂತನನ್ನು ಸೇರುತ್ತಾನೆ.

ಈ ಸ್ಥಿತಿಯಲ್ಲಿ ಜೀವನೊಂದಿಗೆ ಉಳಿಯುವುದು ಕೇವಲ ಭಗವಂತ ಮಾತ್ರ. "ಮೋಕ್ಷದಲ್ಲಿ ಜೀವನನ್ನು ನಿಯಮಿಸುವ ಆ ಭಗವಂತನೇ-ನೀನು ತಿಳಿಯಬಯಸಿದ ಪರತತ್ವ" ಎನ್ನುತ್ತಾನೆ ಯಮ.

ಪ್ರಾಣೇನ ನಾಪಾನೇನ ಮರ್ತ್ಯೋ ಜೀವತಿ ಕಶ್ಚನ ।
ಇತರೇಣ ತು ಜೀವಂತಿ ಯಸ್ಮಿನ್ನೇತಾವುಪಾಶ್ರಿತೌ ॥೫॥

ಹಿಂದೆ ಹೇಳಿರುವ ವಿಷಯವನ್ನು ಇಲ್ಲಿ ಉಪಸಂಹಾರ ಮಾಡುತ್ತಾ ಯಮ ಹೇಳುತ್ತಾನೆ: "ಕೇವಲ ಪ್ರಾಣಾಪಾನರು ಉಸಿರಾಡಿಸುವುದರಿಂದ ನಾವು ಬದುಕುವುದಲ್ಲ. ಸರ್ವ ದೇವತೆಗಳನ್ನೂ ನಿಯಮಿಸುತ್ತಾ, ನಮ್ಮ ಹೃದಯದ ಮಧ್ಯದಲ್ಲಿ ಕುಳಿತಿರುವ ಭಗವಂತನಿಂದಾಗಿ ನಾವು ಬದುಕಿದ್ದೇವೆ. ಅವನ ನಿಯತಿಯಂತೆಯೇ ಪ್ರಾಣಾಪಾನರು ಉಸಿರಾಟ ಕ್ರಿಯೆ ನಡೆಸುತ್ತಿದ್ದಾರೆ" ಎಂದು. "ಭಗವಂತನ ಆಜ್ಞೆಯಂತೆ ಉಸಿರಾಡಿಸುವ ಪ್ರಾಣ ದೇವರೇ, ನನಗೆ ಉಸಿರು ಕೊಟ್ಟು ಬದುಕಿಸುವ ಓ ಭಗವಂತನೇ, ನಿನಗೆ ಕೋಟಿ-ಕೋಟಿ ವಂದನೆ ಎನ್ನುವುದು ನಮ್ಮ ಚಿಂತನೆಯಾಗಬೇಕು.

[ಮುಂದಿನ ಮೂರು ಶ್ಲೋಕಗಳನ್ನು ಎರಡನೇ ಅಧ್ಯಾಯದ ಮೊದಲ ವಲ್ಲೀಯಲ್ಲೇ ವಿವರಿಸಿರುವುದರಿಂದ ಇಲ್ಲಿ ನೇರವಾಗಿ ಈ ವಲ್ಲೀಯ ಒಂಬತ್ತನೇ ಶ್ಲೋಕ ವಿಶ್ಲೇಷಣೆ ನೀಡಿರುವುದನ್ನು ಓದುಗರು ಗಮನಿಸಬೇಕು.]

ಕಣ್ಣಿಗೆ ಕಾಣದ ಭಗವಂತನನ್ನು ಹಿಂದಿನವರು ಮೂರು ಪ್ರತೀಕಗಳಲ್ಲಿ ಉಪಾಸನೆ ಮಾಡುತ್ತಿದ್ದರು. ಭೂಮಿಯಲ್ಲಿ ಅಗ್ನಿಪ್ರತೀಕ, ಅಂತರಿಕ್ಷದಲ್ಲಿ ವಾಯು ಪ್ರತೀಕ ಮತ್ತು ಸ್ವರ್ಗದಲ್ಲಿ ಸೂರ್ಯನ ಪ್ರತೀಕ. ಭಗವಂತನ ಪ್ರತೀಕದ ಈ ಉಪಾಸನೆ ಹಾಗೂ ಅದರ ಹಿಂದಿರುವ ವಿಶಿಷ್ಠ ಜ್ಞಾನವನ್ನು ಯಮ ಮುಂದಿನ ಮೂರು ಶ್ಲೋಕಗಳಲ್ಲಿ ವಿವರಿಸಿದ್ದಾನೆ.

ಅಗ್ನಿರ್ಯಥೈಕೋ ಭುವನಂ ಪ್ರವಿಷ್ಟೋ ರೂಪಂ ರೂಪಂ ಪ್ರತಿರೂಪೋ ಬಭೂವ ।
ಏಕಸ್ತಥಾ ಸರ್ವಭೂತಾಂತರಾತ್ಮಾ ರೂಪಂ ರೂಪಂ ಪ್ರತಿರೂಪೋ ಬಹಿಶ್ಚ ॥೯॥

ನಮಗೆ ತಿಳಿದಂತೆ ಬೆಂಕಿ ಅಥವಾ ಅಗ್ನಿ ಕೇವಲ ಜಡವಲ್ಲ. ಅದರ ಹಿಂದೆ ಅಗ್ನಿ ದೇವತೆ ಇದ್ದಾನೆ. ಪ್ರತಿಯೊಂದು ಮನೆಯಲ್ಲಿ ಉರಿಯುವ ಬೆಂಕಿಯ ಹಿಂದೆ ಇರುವ ದೇವತೆ ಒಬ್ಬನೇ. ಎಲ್ಲೆಡೆ ಇರುವ ಅಗ್ನಿಯ ರೂಪ ಬೇರೆಬೇರೆ ಆದರೆ ನಿಯಾಮಕ ಶಕ್ತಿಯಾದ ಅಗ್ನಿದೇವತೆಯ ರೂಪ ಒಂದೇ. ಅಗ್ನಿ ಬೆಳಕು ನೀಡುತ್ತಾನೆ, ಬೇಯಿಸುತ್ತಾನೆ, ಸುಡುತ್ತಾನೆ. ಇದೇ ರೀತಿ ಭಗವಂತ. ಭಗವಂತ ಜ್ಞಾನದ ಬೆಳಕನ್ನು ಕೊಡುತ್ತಾನೆ, ನಮ್ಮೊಳಗಿದ್ದು ನಮ್ಮನ್ನು ಪಕ್ವಮಾಡುತ್ತಾನೆ, ನಮ್ಮ ಪಾಪ ಮತ್ತು ದೋಷಗಳನ್ನು ಸುಡುತ್ತಾನೆ. ಹೇಗೆ ಅಗ್ನಿ ಎಲ್ಲಾ ಕಡೆ ಇದ್ದಾನೋ, ಹಾಗೆ ಭಗವಂತ. ಆತ ಎಲ್ಲೆಡೆ ಇದ್ದಾನೆ, ಆದರೆ ಆತ ಏಕ. ಹೇಗೆ ಮನೆ ಮನೆಯಲ್ಲಿ ಸಾವಿರಾರು ದೀಪಗಳೋ ಹಾಗೇ ಪ್ರಪಂಚದಲ್ಲಿ ಸಾವಿರಾರು ಜೀವರಿದ್ದಾರೆ. ಬೆಂಕಿಯೊಳಗೆ ಅಗ್ನಿದೇವನಿದ್ದಂತೆ ಭಗವಂತ ಸಮಸ್ತ ಜೀವರ ಅಂತರ್ಯಾಮಿಯಾಗಿದ್ದಾನೆ.

ಈ ಶ್ಲೋಕದಲ್ಲಿ 'ಏಕಃ' ಎನ್ನುವ ಪದ ಬಳಕೆಯಾಗಿದೆ. ಏಕಃ ಎಂದರೆ: ಒಬ್ಬನೇ, ಇನ್ನೊಬ್ಬನಿಲ್ಲ ಎಂದರ್ಥ. ಎಲ್ಲಾ ಕಡೆ ಇರುವವನೂ ಒಬ್ಬನೇ ಒಬ್ಬ ಭಗವಂತ. ಎಲ್ಲಾ ಪ್ರತೀಕದ ಒಳಗೂ, ಎಲ್ಲಾ ಜೀವರ ಒಳಗೂ ಇರುವ ಭಗವಂತ ಒಬ್ಬನೇ. ಏಕಃ ಎನ್ನುವುದಕ್ಕೆ ಇನ್ನೊಂದು ಅರ್ಥ: 'ಏಷ ಏವ ಕರೋತಿ' ಅಂದರೆ ಎಲ್ಲವನ್ನೂ ಮಾಡುವವ, ಸರ್ವಕರ್ತಾ. ಇದು ಶಾಸ್ತ್ರೀಯ ನಿರ್ವಚನ. ನಮ್ಮ ಹೊರಗಿದ್ದು ಧಾರಣೆ ಮಾಡಿರುವ ಭಗವಂತ,

ಅಂತರ್ಯಾಮಿಯಾಗಿ ಸಮಸ್ತ ಜೀವರಲ್ಲೂ ನೆಲೆಸಿದ್ದಾನೆ. ಎಲ್ಲಾ ರೂಪಗಳ ಒಳಗೂ ಬಿಂಬರೂಪನಾಗಿ ತುಂಬಿದ್ದಾನೆ, ಆದರೆ ಯಾವುದರ ಲೇಪವೂ ಇಲ್ಲದೆ ಬೇರೆಯಾಗಿದ್ದಾನೆ. ಅವರವರ ಕರ್ಮಕ್ಕನುಗುಣವಾಗಿ ಏನು ಕರ್ಮ ಆಗಬೇಕೋ ಅದನ್ನು ಆ ದೇಹದೊಳಗೆ ನಿಂತು ಮಾಡುವ ಭಗವಂತ ನಿರ್ಲಿಪ್ತ.

ವಾಯುರ್ಯಥೈಕೋ ಭುವನಂ ಪ್ರವಿಷ್ಟೋ ರೂಪಂ ರೂಪಂ ಪ್ರತಿರೂಪೋ ಬಭೂವ ।
ಏಕಸ್ತಥಾ ಸರ್ವಭೂತಾಂತರಾತ್ಮಾ ರೂಪಂ ರೂಪಂ ಪ್ರತಿರೂಪೋ ಬಹಿಶ್ಚ ॥೧೦॥

ಗಾಳಿ ಅಭಿವ್ಯಕ್ತವಾಗುವ ಪ್ರತೀಕಗಳು ಅನೇಕ. ಆದರೆ ಅದರ ಒಳಗಿದ್ದು ಸ್ಪರ್ಶ ಸುಖವನ್ನು ಕೊಡುವವ ಒಬ್ಬನೇ ಒಬ್ಬ ದೇವತೆ-ಅವನೇ ವಾಯು. ಗಾಳಿ ಕಾಣದಿದ್ದರೂ ಹೇಗೆ ಅನುಭವಕ್ಕೆ ಗೋಚರವಾಗುತ್ತದೋ, ಹಾಗೇ ಭಗವಂತ. ಹೇಗೆ ಪ್ರಾಣಶಕ್ತಿ ಸಮಸ್ತವಾಯುವಿನಲ್ಲಿ ತುಂಬಿದೆಯೋ, ಅದೇ ರೀತಿ ಅನಂತಕೋಟಿ ಜೀವರಲ್ಲಿ ಬಿಂಬರೂಪನಾಗಿ ಭಗವಂತನಿದ್ದಾನೆ. ಆತ ಎಲ್ಲರ ಒಳಗಿದ್ದು ಎಲ್ಲವನ್ನೂ ಮಾಡುತ್ತಿದ್ದರೂ ಎಲ್ಲಕ್ಕಿಂತ ಭಿನ್ನವಾಗಿದ್ದಾನೆ.

ಸೂರ್ಯೋ ಯಥಾ ಸರ್ವಲೋಕಸ್ಯ ಚಕ್ಷುಃ ನ ಲಿಪ್ಯತೇ ಚಾಕ್ಷುಷೈರ್ಬಾಹ್ಯದೋಷೈಃ ।
ಏಕಸ್ತಥಾ ಸರ್ವಭೂತಾಂತರಾತ್ಮಾ ನ ಲಿಪ್ಯತೇ ಲೋಕದುಃಖೇನ ಬಾಹ್ಯಃ ॥೧೧॥

ಆಕಾಶದಲ್ಲಿ ಭಗವಂತ ಹಚ್ಚಿದ, ಎಂದೂ ನಂದದ ದೀಪ ಸೂರ್ಯ. ಜಗತ್ತಿನಲ್ಲಿ ಎಷ್ಟು ಕಣ್ಣುಗಳಿವೆ ಅಷ್ಟೂ ಕಣ್ಣುಗಳಲ್ಲೂ ಕಣ್ಣಿನ ಅಭಿಮಾನಿ ಸೂರ್ಯನಿದ್ದಾನೆ. ಆತ ಒಂದೊಂದು ಕಣ್ಣಿನಲ್ಲಿ ಒಂದೊಂದು ಶಕ್ತಿಯಾಗಿ ತುಂಬಿದ್ದಾನೆ. ಆತನ ಶಕ್ತಿಯ ಪ್ರತೀಕ ಅನೇಕ. ಹೇಗೆ ನಮ್ಮ ಕಣ್ಣಿನ ದೋಷ ಸೂರ್ಯನಿಗೆ ಅಂಟುವುದಿಲ್ಲವೋ, ಹಾಗೇ ಭಗವಂತ. ಆತ ಎಲ್ಲರ ಒಳಗೂ ಇದ್ದಾನೆ. ಆದರೆ ನಮ್ಮ ದೋಷಗಳು ಅವನಿಗೆ ಅಂಟುವುದಿಲ್ಲ. ಏಕೆಂದರೆ ಆತ ಒಳಗಿದ್ದೂ ನಿರ್ಲಿಪ್ತ.
ಭಗವಂತ ಜ್ಞಾನಾನಂದಪೂರ್ಣ, ಜ್ಞಾನಾನಂದಪ್ರದ. ಪ್ರತೀಕ ಅದೃಷ್ಯವಾಗಿದ್ದರೂ, ಅದೃಶ್ಯವಾದ ಪ್ರತೀಕದ ಒಳಗೂ ಅದೃಷ್ಯನಾಗಿ ಭಗವಂತ ತುಂಬಿದ್ದಾನೆ. ಈ ರೀತಿ ಅಗ್ನಿ, ವಾಯು ಮತ್ತು ಸೂರ್ಯನ ಪ್ರತೀಕದಲ್ಲಿ ಭಗವಂತನ ಉಪಾಸನೆ ಮಾಡುವುದು ವೈದಿಕ ಸಂಪ್ರದಾಯ. ಪ್ರತೀಕದ ಚಿಂತನೆಯ ಮೂಲಕ ಅದರ ಮೂಲಕ್ಕೆ ಹೋಗಿ ಮೂಲ ಚಿಂತನೆ ಮಾಡಬೇಕು ಎನ್ನುವ ಮೂಲ ತತ್ವವನ್ನು ಕಠೋಪನಿಷತ್ತು ನಮ್ಮ ಮುಂದಿಟ್ಟಿದೆ.

ಏಕೋ ವಶೀ ಸರ್ವಭೂತಾಂತರಾತ್ಮಾ ಏಕಂ ರೂಪಂ ಬಹುಧಾ ಯಃ ಕರೋತಿ ।
ತಮಾತ್ಮಸ್ಥಂ ಯೇಽನುಪಶ್ಯಂತಿ ಧೀರಾಃ ತೇಷಾಂ ಸುಖಂ ಶಾಶ್ವತಂ ನೇತರೇಷಾಂ ॥೧೨॥

ಈ ಪ್ರಪಂಚದಲ್ಲಿ ಪ್ರತಿಯೊಬ್ಬ ಮನುಷ್ಯನ ಬಯಕೆ 'ತಾನು ಸುಖ ಪಡಬೇಕು' ಎನ್ನುವುದು. ನಮಗೆ ತಿಳಿದಂತೆ ಈ ಭೌತಿಕ ಪ್ರಪಂಚದಲ್ಲಿ ಕೇವಲ ಸುಖ ಎನ್ನುವುದೊಂದಿಲ್ಲ. ಇಲ್ಲಿ ಸುಖ ಮತ್ತು ದುಃಖ ಒಂದೇ ನಾಣ್ಯದ ಎರಡು ಮುಖವಿದ್ದಂತೆ. ಆದ್ದರಿಂದ ವಾಸ್ತವ ಪ್ರಪಂಚದಲ್ಲಿ ಕೇವಲ ಸುಖ ಒಂದು ಮರೀಚಿಕೆ. ಹೀಗಿದ್ದರೂ ಕೂಡಾ, ಪ್ರತಿಯೊಬ್ಬ ಮಾನವನೂ ಪೂರ್ಣ ನಿದ್ರಾವಸ್ಥೆಯಲ್ಲಿ ದುಃಖವಿಲ್ಲದ ಸುಖವನ್ನು ಅನುಭವಿಸುತ್ತಾನೆ. ಈ ರೀತಿ ನಿದ್ದೆಯಲ್ಲಿ ಸಿಗುವ,

ದುಃಖದ ಲೇಪವೇ ಇಲ್ಲದ ಸುಖವನ್ನು ಶಾಶ್ವತವಾಗಿ ಪಡೆಯುವುದು ಹೇಗೆ ಎನ್ನುವ ಪ್ರಶ್ನೆಗೆ ಉತ್ತರ ರೂಪದಲ್ಲಿದೆ ಈ ಶ್ಲೋಕ.

ಸಾಮಾನ್ಯವಾಗಿ ನಾವು ಎಚ್ಚರದಲ್ಲಿ 'ನಾನು' ಎನ್ನುವ ಅಹಂಕಾರ ಮತ್ತು 'ನನ್ನದು' ಎನ್ನುವ ಮಮಕಾರದ ದಾಸರಾಗಿ ಬದುಕುತ್ತಿರುತ್ತೇವೆ. ಇದೇ ನಮ್ಮೆಲ್ಲಾ ದುಃಖಗಳಿಗೆ ಮೂಲ ಕಾರಣ. ಈ ಪ್ರಪಂಚದಲ್ಲಿ ಸಮಸ್ತ ಜಗತ್ತನ್ನು ತನ್ನ ವಶದಲ್ಲಿರಿಸಿಕೊಂಡ ಭಗವಂತನ ಇಚ್ಛೆಯಂತೆಯೇ ಎಲ್ಲವೂ ನಡೆಯುತ್ತದೆ. ಒಬ್ಬನೇ ಒಬ್ಬ ಭಗವಂತ ಎಲ್ಲರ ಒಳಗೂ ಬೇರೆಬೇರೆ ರೂಪನಾಗಿ ಅಭಿವ್ಯಕ್ತನಾಗುತ್ತಾನೆ. ಹೀಗೆ ಏಕರೂಪನಾದ ಆತ, ಅನಂತ ರೂಪದಲ್ಲಿ ಪ್ರಪಂಚದಲ್ಲಿ ತುಂಬಿ ಪ್ರೇರಣೆ ಮಾಡುತ್ತಿದ್ದಾನೆ. ಇದು ಅವನ ಲೀಲೆ.

"ಯಾರು ವಿಶ್ವದಲ್ಲಿ ಎಲ್ಲರ ಒಳಗೂ ಹೊರಗೂ ತುಂಬಿದ್ದಾನೋ, ಅವನೇ ನನ್ನೊಳಗೂ ಇದ್ದಾನೆ" ಎಂದು ಧೈರ್ಯದಿಂದ ತನ್ನನ್ನು ತಾನು ಭಗವಂತನಿಗೆ ಅರ್ಪಿಸಿಕೊಂಡು ಬದುಕುವವ ಶಾಶ್ವತ ಸುಖವನ್ನು ಕಾಣಬಲ್ಲ ಎನ್ನುತ್ತಾನೆ ಯಮ. ಶಾಶ್ವತ ಸುಖಕ್ಕೆ ಇದೊಂದೇ ಮಾರ್ಗ

ನಾವು ಭಗವಂತನನ್ನು ಪ್ರತಿಮೆಯ ಪ್ರತೀಕದಲ್ಲಿ ಪೂಜಿಸುತ್ತೇವೆ. ಹೀಗೆ ಪೂಜೆ ಮಾಡುವಾಗ ಈ ಪ್ರಪಂಚದ ಎಲ್ಲಾ ಪುಣ್ಯಕ್ಷೇತ್ರಗಳಲ್ಲಿ ಸನ್ನಿಹಿತನಾಗಿರುವ ಭಗವಂತ ಒಬ್ಬನೇ, ಅವನೇ ಈ ವಿಗ್ರಹದಲ್ಲಿ ಸನ್ನಿಹಿತನಾಗಿದ್ದಾನೆ ಎಂದು ಆವಾಹನೆ ಮಾಡಬೇಕು. ಎಲ್ಲಾ ಪ್ರತಿಮೆಯಲ್ಲಿರುವ ಭಗವಂತ ಈ ಪ್ರತಿಮೆಯಲ್ಲೂ ಇದ್ದಾನೆ, ಎಲ್ಲಾ ಕಡೆ ಇರುವ ಭಗವಂತ ನನ್ನೊಳಗೂ ಇದ್ದಾನೆ. ಹೀಗೆ ನನ್ನೊಳಗಿರುವ ಭಗವಂತ ಈ ಪ್ರತಿಮೆಯಲ್ಲಿರುವ ಭಗವಂತನಿಗೆ ನನ್ನನ್ನು ಪ್ರತೀಕವಾಗಿರಿಸಿಕೊಂಡು ಪೂಜೆ ಸಲ್ಲಿಸುತ್ತಿದ್ದಾನೆ ಎನ್ನುವ ಅನುಸಂಧಾನ ಶಾಸ್ತ್ರೀಯ.

ಸಮಸ್ತ ಜಗತ್ತನ್ನು ತನ್ನ ವಶದಲ್ಲಿಟ್ಟುಕೊಂಡ ಭಗವಂತನ ಇಚ್ಛೆಯಂತೆಯೇ ಎಲ್ಲವೂ ನಡೆಯುತ್ತದೆ. ಅವನೊಬ್ಬನೇ ಎಲ್ಲವನ್ನೂ ಮಾಡುವ ಪರಶಕ್ತಿ ಎನ್ನುವ ಸತ್ಯ ತಿಳಿದಾಗ, ನಮ್ಮ ಜೀವನದಲ್ಲಿ ನಡೆಯುವ ಎಲ್ಲಾ ಘಟನೆಗಳೂ ಸಹ್ಯ ಎನಿಸುತ್ತದೆ. ಈ ಜ್ಞಾನದೊಂದಿಗೆ ಹಾಗೂ ಪೂರ್ಣ ಶರಣಾಗತಿಯೊಂದಿಗೆ ಯಾರು ಮುಂದುವರಿಯುತ್ತಾರೋ ಅವರು ಶಾಶ್ವತ ಸುಖವನ್ನು ಹೊಂದುತ್ತಾರೆ.

ನಿತ್ಯೋಽನಿತ್ಯಾನಾಂ ಚೇತನಶ್ಚೇತನಾನಾಂ ಏಕೋ ಬಹೂನಾಂ ಯೋ ವಿದಧಾತಿ ಕಾಮಾನ್ ।
ತಮಾತ್ಮಸ್ಥಂ ಯೇಽನುಪಶ್ಯಂತಿ ಧೀರಾಃ ತೇಷಾಂ ಶಾಂತಿಃ ಶಾಶ್ವತೀ ನೇತರೇಷಾಂ ॥೧೩॥

ನಮ್ಮೆಲ್ಲಾ ಅಪೇಕ್ಷೆಗಳನ್ನೂ ಈಡೇರಿಸುವ ಭಗವಂತ ನಾವು ಬಯಸಿದ್ದನ್ನು ಕರುಣಿಸುವ ಭಕ್ತವತ್ಸಲ. ಅನಂತ ಜೀವರಿಗೆ ಭಗವಂತ ಒಬ್ಬನೇ ಹಾಗೂ ಅವನೇ ಎಲ್ಲರ ಬಯಕೆಗಳನ್ನು ಈಡೇರಿಸುವ ಕರುಣಾಸಿಂಧು. ಎಲ್ಲಾ ನಿತ್ಯಗಳಿಗೆ ನಿತ್ಯತ್ವವನ್ನು ಕೊಟ್ಟ, ನಿತ್ಯಗಳ ನಿತ್ಯ, ಚೇತನಗಳ ಚೇತನ, ಆ ಭಗವಂತ. ಸಮಸ್ತ ಜೀವಗಳಿಗೆ ಬುದ್ಧಿಶಕ್ತಿಯನ್ನು ಕೊಟ್ಟು ಅವುಗಳ ಬೆಳವಣಿಗೆಗೆ ಕಾರಣನಾದವ ಆ ಭಗವಂತ. "ಜ್ಞಾನಪ್ರದನಾಗಿ ನನ್ನೊಳಗೆ ಭಗವಂತನಿದ್ದಾನೆ, ಅವನೇ ನನ್ನೊಳಗೆ ಚೈತನ್ಯ ತುಂಬಿ ನನ್ನ ಜ್ಞಾನ ಶಕ್ತಿ ಬೆಳೆಸುತ್ತಿದ್ದಾನೆ ಎಂದು ತಿಳಿದವನು ಶಾಶ್ವತವಾದ ಶಾಂತಿಯನ್ನು ಪಡೆಯುತ್ತಾನೆ" ಎನ್ನುತ್ತಾನೆ ಯಮ.

ಸುಖಕ್ಕೂ ಮತ್ತು ಶಾಂತಿಗೂ ಸ್ವಲ್ಪ ವ್ಯತ್ಯಾಸವಿದೆ. ಶಾಂತಿ ಎನ್ನುವ ಪದಕ್ಕೆ ಲೋಕದಲ್ಲಿ ರೂಢಿಯಲ್ಲಿರುವ ಅರ್ಥ 'ನೆಮ್ಮದಿ'. ದುಃಖರಹಿತವಾದ ಆನಂದ ಶಾಂತಿ. ಶಾಂತಿ ಸುಖದ ಕೊನೆಯ ಸ್ಥಿತಿ. ಅದೇ ಮೋಕ್ಷ. "ಭಗವಂತ ನನ್ನೊಳಗಿದ್ದು ಎಲ್ಲವನ್ನೂ ಮಾಡುತ್ತಿದ್ದಾನೆ, ಅವನು ಸರ್ವೋತ್ತಮ, ಸರ್ವನಿಯಾಮಕ, ಸರ್ವಕರ್ತಾ, ಸರ್ವಜ್ಞ,

ಪೂರ್ಣಾನಂದ ಎಂದು ಯಾರು ತಿಳಿಯುತ್ತಾರೋ, ಅವರು ಪೂರ್ಣಾನಂದವನ್ನು ಪಡೆಯುತ್ತಾರೆ. ಇತರ ಯಾವ ಮಾರ್ಗದಲ್ಲೂ ಪೂರ್ಣಾನಂದ ಸಾಧ್ಯವಿಲ್ಲ.

ತದೇತದಿತಿ ಮನ್ಯಂತೇಽನಿರ್ದೇಶ್ಯಂ ಪರಮಂ ಸುಖಮ್ ।
ಕಥಂ ನು ತದ್ವಿಜಾನೀಯಾಂ ಕಿಮು ಭಾತಿ ವಿಭಾತಿ ವಾ ॥೧೪॥

ಭಗವಂತನ ಅರಿವು ಅದೆಷ್ಟು ನಿಗೂಢ ಎನ್ನುವುದನ್ನು ಇಲ್ಲಿ ಯಮ ವಿವರಿಸಿದ್ದಾನೆ. ಭಗವಂತನನ್ನು ಸಾಕ್ಷಾತ್ಕಾರ ಮಾಡಿಕೊಂಡವರಿಗೇ 'ಭಗವಂತನನ್ನು ಕಂಡಿದ್ದೇನೆ' ಎಂದು ಹೇಳುವಷ್ಟು ಧೈರ್ಯವಿಲ್ಲ. ಏಕೆಂದರೆ ಭಗವಂತ ಅನಂತ. ಈ ಅನಂತದಲ್ಲಿ ನಾವು ಗ್ರಹಿಸಲು ಸಾಧ್ಯವಾಗುವುದು ಅತ್ಯಂತ ಚಿಕ್ಕ ಅಂಶ ಮಾತ್ರ. ಆದ್ದರಿಂದ ನಾವು ಕಾಣುವ ಭಗವಂತ ಕುರುಡ ಕಂಡ ಆನೆಯಂತೆ. ಯಮ ಹೇಳುತ್ತಾನೆ: ನಾನು ಧ್ಯಾನದಲ್ಲಿ ದೇವರನ್ನು ಕಂಡೆನೋ ಅಥವಾ ಇಲ್ಲವೋ ನನಗೇ ತಿಳಿಯದು. ಅವನು ಕಾಣಿಸಿಕೊಳ್ಳುತ್ತಾನೋ ಇಲ್ಲವೋ ನನಗೇ ತಿಳಿಯದು. ಹೀಗಿರುವಾಗ ಅವನ ವರ್ಣನೆಯನ್ನು ನಿನಗೆಂತು ಹೇಳಲಿ" ಎಂದು. ಭಗವಂತನಲ್ಲಿ ತನ್ಮಯತೆ ಬರುವ ಕ್ಷಣ ಅತ್ಯಂತ ಆನಂದದ ಕ್ಷಣ. ಲೋಕದಲ್ಲಿ ಆ ಆನಂದಕ್ಕೆ ಸಾಟಿಯಾದ ಆನಂದ ಇನ್ನೊಂದಿಲ್ಲ. ಇಂತಹ ಆನಂದವನ್ನು ಅನುಭವಿಸಬೇಕೇ ಹೊರತು ವಿವರಿಸಲು ಸಾಧ್ಯವಿಲ್ಲ ಎನ್ನುತ್ತಾನೆ ಯಮ.

ಭಗವಂತ ಅಳೆಯಲಾಗದ ಅನಂತವಾದ ಸುಖದ ಕಡಲು. "ಇದು ನನ್ನದೇ ಆದ ಮಾನಸಿಕ ಭ್ರಮೆ ಅಲ್ಲ. ಪ್ರಪಂಚದಲ್ಲಿ ಭಗವಂತನನ್ನು ಸಾಕ್ಷಾತ್ಕರಿಸಿಕೊಂಡ ಪ್ರತಿಯೊಬ್ಬ ಜ್ಞಾನಿಯ ಅನುಭವವೂ ಇದೇ" ಎನ್ನುತ್ತಾನೆ ಯಮ. ಆದ್ದರಿಂದ ಭಗವಂತನೆಂದರೆ ಅಪರಂಪಾರವಾದ, ಜ್ಞಾನಾನಂದಸ್ವರೂಪವಾದ, ಯಾರಿಂದಲೂ ಪೂರ್ಣ ಗ್ರಹಿಸಲು ಸಾಧ್ಯವಾಗದ ಸರ್ವಜ್ಞತತ್ವ ಎಂದು ಉಪಾಸನೆ ಮಾಡುವುದು ಶಾಸ್ತ್ರಸಮ್ಮತ.

ನ ತತ್ರ ಸೂರ್ಯೋ ಭಾತಿ ನ ಚಂದ್ರತಾರಕಂ ನೇಮಾ ವಿದ್ಯುತೋ ಭಾಂತಿ ಕುತೋಽಯಮಗ್ನಿಃ ।
ತಮೇವ ಭಾಂತಮನುಭಾತಿ ಸರ್ವಂ ತಸ್ಯ ಭಾಸಾ ಸರ್ವಮಿದಂ ವಿಭಾತಿ ॥೧೫॥

ಭಗವಂತನನ್ನು ಸೂರ್ಯನಾಗಲೀ, ಚಂದ್ರನಾಗಲೀ, ಮಿಂಚು-ನಕ್ಷತ್ರವಾಗಲೀ, ಅಗ್ನಿಯಾಗಲೀ ಬೆಳಗಿಸಿ ತೋರಿಸಲಾರವು. ಏಕೆಂದರೆ ಈ ಎಲ್ಲಾ ಬೆಳಕಿನ ಪುಂಜಗಳಿಗೆ ಬೆಳಕನ್ನೀಯುವ ಮೂಲ ಬೆಳಕು ಆ ಭಗವಂತ. ಭಗವಂತನ ಬೆಳಕಿಗೆ ಅನುಗುಣವಾಗಿ ಕಣ್ಣಿಗೆ ಕಾಣುವ ಈ ಬೆಳಕುಗಳಿವೆ. ಎಲ್ಲಾ ಬೆಳಕುಗಳ ಒಳಗೆ ಬೆಳಕಾಗಿ ಭಗವಂತ ತುಂಬಿದ್ದಾನೆ. ಎಲ್ಲಾ ಬೆಳಕುಗಳೂ ಭಗವಂತನ ಬೆಳಕಿನ ಪ್ರತಿಫಲನ. ಭಗವಂತನಲ್ಲದ, ಸ್ವತಂತ್ರವಾದ ಬೆಳಕು ಈ ಪ್ರಪಂಚದಲ್ಲಿಲ್ಲ. ಇದನ್ನೇ ಕೃಷ್ಣ ಗೀತೆಯಲ್ಲಿ ಹೀಗೆ ಹೇಳಿದ್ದಾನೆ:

ನ ತದ್ ಭಾಸಯತೇ ಸೂರ್ಯೋ ನ ಶಶಾಂಕೋ ನ ಪಾವಕಃ ।
ಯದ್ ಗತ್ವಾ ನ ನಿವರ್ತಂತೇ ತದ್ ಧಾಮ ಪರಮಂ ಮಮ ॥೧೫-೬॥

ಅದನ್ನು ಸೂರ್ಯ ಬೆಳಗಿಸಲಾರ; ಚಂದ್ರ ಬೆಳಗಿಸಲಾರ; ಬೆಂಕಿ ಕೂಡಾ. ಅದರತ್ತ ತೆರಳಿದವರು ಮತ್ತೆ ಮರಳುವುದಿಲ್ಲ. ಅದು ನನ್ನ ಹಿರಿಯ ರೂಪ.

॥ಇತಿ ಕಾಠಕೋಪನಿಷದಿ ದ್ವಿತೀಯಾಧ್ಯಾಯೇ ದ್ವಿತೀಯಾ ವಲ್ಲೀ ॥

ಇಲ್ಲಿಗೆ ಕಾಠಕೋಪನಿಷತ್ತಿನ ಎರಡನೇ ಅಧ್ಯಾಯದ ಎರಡನೇ ವಲ್ಲೀ ಮುಗಿಯಿತು

*******

# ವಲ್ಲೀ-೦೩

ಊರ್ಧ್ವಮೂಲೋಽವಾಕ್ಶಾಖ ಏಷೋಽಶ್ವತ್ಥಃ ಸನಾತನಃ ।
ತದೇವ ಶುಕ್ರಂ ತದ್ಬ್ರಹ್ಮ ತದೇವಾಮೃತಮುಚ್ಯತೇ ।
ತಸ್ಮಿಂಲ್ಲೋಕಾಃ ಶ್ರಿತಾಃ ಸರ್ವೇ ತದು ನಾತ್ಯೇತಿ ಕಶ್ಚನ । ಏತದ್ವೈ ತತ್ ॥೧॥

ನಾವು ಭಗವಂತನನ್ನು ತಿಳಿದುಕೊಳ್ಳಬೇಕಾದರೆ ಮೊದಲು ಅವನು ಸೃಷ್ಟಿ ಮಾಡಿದ ಈ ವಿಶ್ವವನ್ನು ತಿಳಿದುಕೊಳ್ಳಬೇಕು. ಒಮ್ಮೆ ಈ ಸೃಷ್ಟಿ ತಿಳಿದರೆ ಆ ಸೃಷ್ಟಿಯ ಹಿಂದಿರುವ ಸೃಷ್ಟಿಕರ್ತ ತನ್ನಿಂದ ತಾನೇ ತಿಳಿಯುತ್ತಾನೆ. ಇಲ್ಲಿ ಯಮ ಭಗವಂತ ನಿರ್ಮಿಸಿದ ಈ ಸೃಷ್ಟಿಯನ್ನು ಒಂದು ಮರದ ರೂಪದಲ್ಲಿ ವಿವರಿಸಿದ್ದಾನೆ. ಇಲ್ಲಿ ಬಂದಿರುವ ವಿವರಣೆಯನ್ನೇ ಕೃಷ್ಣ ಗೀತೆಯ ಹದಿನೈದನೇ ಅಧ್ಯಾಯದಲ್ಲಿ ವಿವರಿಸಿ ಹೇಳಿರುವುದನ್ನು ಕಾಣುತ್ತೇವೆ. ಇಲ್ಲಿ ಯಮ ಹೇಳುತ್ತಾನೆ: ಈ ಪ್ರಪಂಚ ಒಂದು ಅಶ್ವತ್ಥ ವೃಕ್ಷದಂತೆ ಎಂದು. 'ಅಶ್ವತ್ಥ' ಎನ್ನುವ ಪದ ಈ ಪ್ರಪಂಚದ ವಿಶಿಷ್ಠವಾದ ಸ್ವಭಾವವನ್ನು ಅನೇಕ ರೀತಿಯಲ್ಲಿ ಎತ್ತಿ ಹೇಳುತ್ತದೆ.

(೧) 'ಅಶ್ವತ್ಥ' ಎನ್ನುವುದರ ಸ್ಥೂಲ ಅರ್ಥ ಅರಳಿ ಮರ. ಇದನ್ನು ಪಿಪ್ಪಲ ಎಂದೂ ಕರೆಯುತ್ತಾರೆ. ಪ್ರಪಂಚದಲ್ಲಿರುವ ಎಲ್ಲಾ ಮರಗಳಿಗಿಂತ ಈ ಮರ ಭಿನ್ನ. ಗಾಳಿಯ ಸುಳಿಯೇ ಇಲ್ಲದೆ ಎಲ್ಲಾ ಮರಗಳೂ ಸ್ಥಬ್ಧವಾಗಿರುವಾಗ, ಸಣ್ಣ ಗಾಳಿಯ ಎಳೆ ಬಂದರೆ ಯಾವ ಮರವೂ ಅಲ್ಲಾಡುವುದಿಲ್ಲ. ಆದರೆ ಅಶ್ವತ್ಥಮರದ ಎಲೆಗಳು ಗಿಲಿ-ಗಿಲಿ ಎಂದು ಹಂದಾಡಲು ಆರಂಭಿಸುತ್ತವೆ. ಅಶ್ವತ್ಥಕ್ಕೆ ಸಂಸ್ಕೃತದಲ್ಲಿ 'ಚಲದಲಃ' ಎಂದೂ ಕರೆಯುತ್ತಾರೆ. ಅಂದರೆ ಯಾವಾಗಲೂ ಚಲನಶೀಲವಾದ ಎಲೆಗಳುಳ್ಳ ಮರ ಎಂದರ್ಥ. ಇದೇ ಪ್ರಪಂಚಕ್ಕೂ ಮತ್ತು ಅಶ್ವತ್ಥಮರಕ್ಕೂ ಇರುವ ಸಾಮ್ಯ. ಪ್ರಪಂಚ ಕೂಡಾ ಯಾವಾಗಲೂ ಚಲನಶೀಲ. ಅದು ಸದಾ ಚಲಿಸುತ್ತಾ ಬದಲಾಗುತ್ತಾ ಇರುತ್ತದೆ.

(೨) ಅಶ್ವ+ತ್ಥ: ಇಲ್ಲಿ ಅಶ್ವ ಎಂದರೆ ಕುದುರೆ. ಪ್ರಪಂಚ ಅಶ್ವದ ಹಾಗೆ ಇರುವಂತಹದ್ದು. ಕುದುರೆಯನ್ನು ಗಮನಿಸಿದರೆ ನಮಗೆ ಈ ಅರ್ಥ ತಿಳಿಯುತ್ತದೆ. ಇತರ ಪ್ರಾಣಿಗಳಿಗೂ ಕುದುರೆಗೂ ಒಂದು ವ್ಯತ್ಯಾಸವಿದೆ. ಎಲ್ಲಾ ಪ್ರಾಣಿಗಳೂ ವಿಶ್ರಾಮದ ಕಾಲದಲ್ಲಿ ನಿಶ್ಚಲವಾಗಿ ನಿಲ್ಲಬಲ್ಲವು. ಆದರೆ ಕುದುರೆ ಒಂದು ಕ್ಷಣವೂ ನಿಶ್ಚಲವಾಗಿ ನಿಲ್ಲದು. ಈ ಜಗತ್ತೂ ಕೂಡಾ ಅಶ್ವದಂತೆ. ಇದು ಎಂದೂ ಸ್ಥಿರವಾಗಿ ನಿಲ್ಲುವುದಿಲ್ಲ.

(೩) ಅ+ಶ್ವಃ+ತ್ಥ –ಇಲ್ಲಿ 'ಶ್ವಃ' ಅಂದರೆ ನಾಳೆ, 'ತ್ಥ' ಅಂದರೆ ಇರುವಂಥದ್ದು. ಅಶ್ವತ್ಥ ಅಂದರೆ "ನ ಶ್ವಃ ತಿಷ್ಠತಿ". ಇಂದು ಇದೆ ಆದರೆ ನಾಳೆ ಇರುತ್ತದೆ ಎನ್ನುವ ಖಾತರಿ ಇಲ್ಲ. ಅಂದರೆ ಈ ಪ್ರಪಂಚ ಕ್ಷಣಿಕ. ಬದಲಾವಣೆಯೇ ಜಗದ ನಿಯಮ. ಸೃಷ್ಟಿಯಾದ ಈ ಪ್ರಪಂಚ ಒಂದು ದಿನ ನಾಶವಾಗುತ್ತದೆ.

(೪) ಅಶ್ವತ್ಥದ ಶಾಸ್ತ್ರೀಯ ನಿರ್ವಚನ ಅರ್ಥವನ್ನು ನೋಡಿದರೆ(etymologicaly)- ಅಶು+ವಾ+ತ+ಥ. ಇಲ್ಲಿ ಅಶು+ವಾ ಎಂದರೆ ಎಲ್ಲಕ್ಕಿಂತ ವೇಗವಾಗಿ ಹೋಗುವಂತಹದ್ದು-ಅದು ಭಗವಂತ. ಅದಕ್ಕಾಗಿ ಭಗವಂತನನ್ನು 'ಅಶ್ವ' ಎಂದೂ ಕರೆಯುತ್ತಾರೆ. ಕುದುರೆ ಮುಖದ ಹಯಗ್ರೀವ ರೂಪದಲ್ಲಿ ಭಗವಂತ ಸಮಸ್ತ ವೇದ ವಿದ್ಯೆಯನ್ನು ಪ್ರಪಂಚಕ್ಕೆ ಕೊಟ್ಟ. ಎಲ್ಲವನ್ನೂ ಎಲ್ಲಕ್ಕಿಂತ ಮೊದಲು ತಿಳಿದ ಭಗವಂತ ಈ ಜಗತ್ತಿನಲ್ಲಿ, ಇದರ ಒಳಗೂ

ಹೊರಗೂ ನಿಯಮನ ಮಾಡುವುದಕ್ಕೋಸ್ಕರ 'ಅಶ್ವ' ನಾಮಕನಾಗಿ ಕೂತಿದ್ದಾನೆ(ತ್ಥ). ಈತ ಇಡೀ ಪ್ರಪಂಚದಲ್ಲಿ 'ತತ'(ತುಂಬಿದ್ದಾನೆ) ಮತ್ತು ಕೊನೆಗೆ ಇಡೀ ಜಗತ್ತು ಆತನಿಗೆ ಥಂ.(ಥಂ =ಆಹಾರ -ಇಡೀ ಜಗತ್ತನ್ನು ಕಬಳಿಸುವ ಶಕ್ತಿ, ಇದು ಪ್ರಳಯದ ವಿವರಣೆ).

ಇಂತಹ ಈ ಪ್ರಪಂಚ ಸನಾತನವಾದುದು ಎನ್ನುತ್ತಾನೆ ಯಮ. ಏಕೆಂದರೆ ಭಗವಂತನ ಸೃಷ್ಟಿ ಮತ್ತು ಸಂಹಾರ ಕ್ರಿಯೆ ನಿರಂತರ. ಈ ರೀತಿ ಭಗವಂತನಿಂದ ಸೃಷ್ಟಿಯಾಗುವ ಈ ಪ್ರಪಂಚ ಅಶ್ವತ್ಥ ಮರದಂತಿದೆ. ಹೇಗೆ ಬೀಜ, ಅದರೊಳಗಿನ ಚೈತನ್ಯ, ಭೂಮಿ, ಬೇರುಗಳು ಮರಕ್ಕೆ ಮೂಲವೋ ಹಾಗೇ ಈ ಪ್ರಪಂಚವೆಂಬ ಮರದ ಮೂಲ ಅದರ ಟೊಂಗೆ-ಟಿಸಿಲುಗಳ್ಯಾವುದು ಎನ್ನುವುದನ್ನು ಇಲ್ಲಿ ವಿವರಿಸಲಾಗಿದೆ. ಇಲ್ಲಿ "ಈ ಮರದ ಮೂಲ ಮೇಲಿದೆ(ಊರ್ಧ್ವಮೂಲ)" ಎಂದಿದ್ದಾರೆ. ಮೇಲೆ ಅಂದರೆ ಎಲ್ಲಕ್ಕಿಂತ ಹಿರಿದಾದ ಭಗವಂತ. ಈ ಪ್ರಪಂಚ ಎನ್ನುವ ಮರಕ್ಕೆ ಮೂಲ ಆ ಭಗವಂತ. ಪ್ರಪಂಚದ ಮೂಲದಲ್ಲಿ ಎಲ್ಲಕ್ಕಿಂತ ಎತ್ತರದಲ್ಲಿ ತಂದೆ-ತಾಯಿಯಾಗಿ ಲಕ್ಷ್ಮೀ-ನಾರಾಯಣರಿದ್ದಾರೆ. ಜಡಪ್ರಕೃತಿಯಿಂದ ಈ ಮರ ವಿಕಸನವಾಗುತ್ತದೆ. ಭಗವಂತನ ನಂತರ ಚತುರ್ಮುಖಬ್ರಹ್ಮ ಪ್ರಾಣದೇವರು. ಇವರೇ ಈ ಮರದ ಪ್ರಧಾನ ಕಾಂಡ. ಗರುಡ-ಶೇಷ-ರುದ್ರರು, ಇಂದ್ರಾದಿ ದೇವತೆಗಳು ಈ ಮರದ ಟೊಂಗೆಗಳು. ನಂತರ ಅವಾಂತರ ದೇವತೆಗಳು, ಗಂಧರ್ವರು, ಮನುಷ್ಯರು, ಪ್ರಾಣಿಗಳು, ಪಕ್ಷಿಗಳು, ಹೀಗೆ ಒಂದರ ನಂತರ ಒಂದು ಶಾಖೆಗಳು. ಇವೆಲ್ಲವೂ ಸೇರಿ ಒಂದು ಮರವಾಯಿತು. ಇಲ್ಲಿ 'ಅವಾಕ್ಶಾಖ' ಅಂದರೆ ಮೇಲಿನಿಂದ ಕೆಳಕ್ಕೆ ಬೆಳೆಯುವುದು. ಇದು ದೇವತಾ ತಾರತಮ್ಯವನ್ನು ಸೂಚಿಸುತ್ತದೆ. ಆದ್ದರಿಂದ ಭಗವಂತನನ್ನು ಉಪಾಸನೆ ಮಾಡುವಾಗ ಆತ ಈ ಇಡೀ ವಿಶ್ವಕ್ಕೆ ಆಧಾರಸ್ತಂಭ ಎನ್ನುವ ಸತ್ಯವನ್ನು ತಿಳಿದು ಉಪಾಸನೆ ಮಾಡಬೇಕು.

ಎಲ್ಲರಿಗೂ ಅಧಾರನಾಗಿರುವ ಭಗವಂತ ಶೋಕರಹಿತ. ಆತ ನಿರ್ಮಲ ಮತ್ತು ನಿಷ್ಕಳಂಕ. ಎಲ್ಲಕ್ಕಿಂತ ದೊಡ್ಡದಾಗಿರುವ ಮತ್ತು ತನ್ನನ್ನು ಆಶ್ರಯಿಸಿದವರನ್ನು ಎತ್ತರಕ್ಕೆ ಕೊಂಡೊಯ್ಯುವ ಭಗವಂತನನ್ನು ಬ್ರಹ್ಮಃ ಎಂದೂ ಕರೆಯುತ್ತಾರೆ. ಇಂತಹ ಭಗವಂತನನ್ನು ಯಾರೂ ತಿರಸ್ಕರಿಸಿ ಬದುಕಲು ಸಾಧ್ಯವಿಲ್ಲ. ಯಾರು ಈ ಸಂಸಾರ ವೃಕ್ಷದಲ್ಲಿದ್ದು ನಮ್ಮನ್ನು ಕಾಪಾಡುತ್ತಾನೋ ಅವನೇ ಸಂಸಾರದಿಂದ ಪಾರಾಗಿ ಮೋಕ್ಷಕ್ಕೆ ಹೋದಾಗಲೂ ನಮ್ಮನ್ನು ರಕ್ಷಣೆ ಮಾಡುವ ಸ್ವಾಮಿ .

ಈ ಶ್ಲೋಕದಲ್ಲಿ ನಾವು ಗಮನಿಸಬೇಕಾದ ಒಂದು ಅಂಶವೆಂದರೆ ಇಲ್ಲಿ ಮರದ ಎಲೆಗಳನ್ನು ವಿವರಿಸಿಲ್ಲ. ಆದರೆ ಈ ವಿವರಣೆಯನ್ನು ಕೃಷ್ಣ ಗೀತೆಯಲ್ಲಿ ಬಿಡಿಸಿ ಹೇಳಿದ್ದಾನೆ. ಅಲ್ಲಿ ವಿವರಿಸಿರುವಂತೆ ವೇದಗಳೇ ಮರದ ಎಲೆಗಳು. ಪ್ರಳಯ ಕಾಲದಲ್ಲಿ ಭಗವಂತ ಈ ವೇದವೆಂಬ ಎಲೆಯ ಮೇಲೆ ಮಲಗಿರುತ್ತಾನೆ. ಆ ಕಾಲದಲ್ಲಿ ಸಂಪೂರ್ಣ ಪ್ರಪಂಚ ಸೂಕ್ಷ್ಮರೂಪದ ಪ್ರಳಯ ಜಲ ರೂಪದಲ್ಲಿರುತ್ತದೆ. ಸೃಷ್ಟಿಯಾದ ಪ್ರಪಂಚ ಪ್ರಳಯ ಕಾಲದಲ್ಲಿ ಪ್ರಳಯ ಜಲವಾಗಿ ರೂಪಾಂತರ ಹೊಂದುತ್ತದೆ. ಆದರೆ ವೇದಗಳು ಮಾತ್ರ ಎಂದೂ ನಾಶವಾಗುವುದಿಲ್ಲ. ಹಾಗಾಗಿ ಪ್ರಳಯ ಜಲದಲ್ಲಿ ಎಲೆಯ ಮೇಲೆ ಮಲಗಿರುವ ಭಗವಂತನ ಕಲ್ಪನೆಯನ್ನು ಶಾಸ್ತ್ರ ಚಿತ್ರಿಸುತ್ತದೆ.

ಯದಿದಂ ಕಿಂ ಚ ಜಗತ್ ಸರ್ವಂ ಪ್ರಾಣ ಏಜತಿ ನಿಃಸೃತಮ್ ।
ಮಹದ್ಭಯಂ ವಜ್ರಮುದ್ಯತಂ ಯ ಏತದ್ವಿದುರಮೃತಾಸ್ತೇ ಭವಂತಿ ॥೨॥

ಭಗವಂತನಿಂದ ನಿರ್ಮಿತವಾದ ಈ ಸಮಸ್ತ ಜಗತ್ತೂ ಕೂಡಾ ಚಲನಶೀಲವಾಗಿದೆ. ಆಕಾಶದಲ್ಲಿ ಗ್ರಹ-ಗೋಲಗಳು ನಿರ್ಧಿಷ್ಟವಾಗಿ ನಿಂತು ನಿಯಮಿತವಾಗಿ ಚಲಿಸುತ್ತಿವೆ. ಯಾರು ಇದನ್ನು ಧರಿಸಿದವನು? ಯಾರಿಂದ ಈ ಜಡಲೋಕಕ್ಕೆ ಚಲನೆ ಬಂತು? ಈ ಪ್ರಶ್ನೆಗೆ ಉತ್ತರ ಈ ಶ್ಲೋಕದಲ್ಲಿದೆ. ಇಡೀ ಪ್ರಪಂಚದ ಕ್ರಿಯಾ-ಕಲಾಪಗಳನ್ನು ನಿರ್ವಹಿಸುವವನು ಪ್ರಾಣಾಂತರ್ಗತ ಭಗವಂತ. ಪ್ರಾಚೀನರು ಹೇಳುವಂತೆ: ಇಡೀ ಬ್ರಹ್ಮಾಂಡವನ್ನು ಶೇಷ(ಸಂಕರ್ಷಣ) ಧಾರಣೆ ಮಾಡಿದ್ದಾನೆ. ಇಂತಹ ಶೇಷನನ್ನು ಪ್ರಾಣ ಧಾರಣೆ ಮಾಡಿದ್ದಾನೆ. ಪ್ರಾಣನನ್ನು ಭಗವಂತ ಧಾರಣೆ ಮಾಡಿದ್ದಾನೆ. ಎಲ್ಲವೂ ಸರ್ವಚೇಷ್ಟಕನಾದ ಭಗವಂತನನ್ನು ಅವಲಂಬಿಸಿ ನಿಂತಿವೆ.

ಜಡ ತಾನೇ ತಾನಾಗಿ ಚಲಿಸುವುದಿಲ್ಲ. ಅದು ಚಲಿಸಬೇಕಾದರೆ ಅದಕ್ಕೆ ಚಲನಶಕ್ತಿ ಕೊಡುವ ಚೇತನ ಒಂದಿರಬೇಕು. ಚೇತನವಿಲ್ಲದೇ ಯಾವುದೇ ಕ್ರಿಯೆ ನಿಷ್ಪನ್ನವಾಗುವುದಿಲ್ಲ. ಇಂದಿನ ವಿಜ್ಞಾನದಲ್ಲಿ ಭೂಮಿ ಅಥವಾ ಇತರ ಗ್ರಹ ಗೋಲಗಳು ಏಕೆ ನಿಯಮಿತವಾಗಿ ತಮ್ಮ ಕಕ್ಷೆಯಲ್ಲಿ ನಿಂತು ತಿರುಗುತ್ತಿವೆ ಎನ್ನುವುದಕ್ಕೆ ಉತ್ತರವಿಲ್ಲ. 'ಪ್ರತಿಯೊಂದು ವಸ್ತುವಿನ ಹಿಂದೆ ಒಂದು ಚೈತನ್ಯ ಶಕ್ತಿ ಅಡಗಿದೆ. ಅದನ್ನೇ ಆ ವಸ್ತುವಿನ ಅಭಿಮಾನಿ ದೇವತೆ ಎನ್ನುತ್ತಾರೆ. ಆ ಚೈತನ್ಯವೇ ಜಡ ವಸ್ತುವಿಗೆ ಚಲನೆ ಕೊಡುವ ಶಕ್ತಿ'. ಇದು ನಮ್ಮ ಪ್ರಾಚೀನರು ಬಹಳ ಹಿಂದೆ ಕಂಡುಕೊಂಡ ಸತ್ಯ. ಉದಾಹರಣೆಗೆ ಬೆಂಕಿಯ ಅಭಿಮಾನಿ ದೇವತೆ ಅಗ್ನಿ, ಮಳೆಯ ಅಭಿಮಾನಿ ದೇವತೆ ಪರ್ಜನ್ಯ ಇತ್ಯಾದಿ. ಇಂತಹ ಅನೇಕ ಚೇತನಗಳಿಗೆ ಶಕ್ತಿ ಕೊಡುವ ಮೂಲ ಚೇತನ ಆ ಭಗವಂತ.

ಎಲ್ಲಾ ದೇವತೆಗಳು ವಿಧಿ ನಿಯತಿಯ ಭಯದಲ್ಲಿ ಬದ್ಧತೆಯಿಂದ ತಮ್ಮ ಕಾರ್ಯ ನಿರ್ವಹಿಸುತ್ತಾರೆ. ಇಲ್ಲಿ ಭಯ ಎಂದರೆ ಭಗವಂತನ ಮಹಿಮೆಯನ್ನರಿತು ಬದ್ಧತೆಯಿಂದ ಕಾರ್ಯ ನಿರ್ವಹಿಸುವುದು. ತಮ್ಮ ಕರ್ತವ್ಯ ಕರ್ಮವನ್ನು ಪ್ರಾಮಾಣಿಕವಾಗಿ ಮಾಡುವವರಿಗೆ ಭಗವಂತ ಕರುಣಾಳು. ಆದರೆ ದುರ್ಜನರಿಗೆ ಆತ ಮಹಾ ಭಯಂಕರ. ತಪ್ಪು ಮಾಡುವವರನ್ನು ಆತ ನಿಸ್ಸಂಕೋಚವಾಗಿ ಶಿಕ್ಷಿಸುತ್ತಾನೆ. ಇದಕ್ಕೆ ಮಹಾಭಾರತದ ಕೆಲವು ಘಟನೆಗಳೇ ಸಾಕ್ಷಿ. ದುಷ್ಟ ದುರ್ಯೋಧನನ ಬೆಂಬಲಕ್ಕೆ ನಿಂತು, ಒಂಟಿ ಅಭಿಮನ್ಯುವನ್ನು ನಿರ್ದಯವಾಗಿ ಬೆನ್ನ ಹಿಂದೆ ಬಂದು ಬಡಿದು ಕೊಂದ ಕರ್ಣನನ್ನು ಕೃಷ್ಣ ಅದೇ ರೀತಿಯಲ್ಲಿ ಶಿಕ್ಷಿಸುತ್ತಾನೆ. ಅದೇ ರೀತಿ ದುರ್ಯೋಧನ. ತುಂಬಿದ ಸಭೆಯಲ್ಲಿ ತನ್ನ ತೊಡೆಯ ಮೇಲೆ ಬಂದು ಕೂರುವಂತೆ ದ್ರೌಪದಿಯನ್ನು ಆಗ್ರಹಿಸಿದ ತಪ್ಪಿಗಾಗಿ, ಭೀಮನ ಮೂಲಕ ಆತನ ತೊಡೆಯನ್ನು ಮುರಿಸುತ್ತಾನೆ ಕೃಷ್ಣ. ಮೇಲ್ನೋಟಕ್ಕೆ ಇವೆಲ್ಲವೂ ಅಧರ್ಮ ಎನಿಸುತ್ತದೆ. ಆಳವಾಗಿ ನೋಡಿದರೆ ವಿಶ್ವದ ಮೂಲ ನಿಯಮ ಒಂದಿದೆ. ಯಾರು ಅಧರ್ಮ ಮಾಡಿದ್ದಾರೋ ಅವರಿಗೆ ಧರ್ಮದ ಸಾವು ಅಪೇಕ್ಷಿಸುವ ಹಕ್ಕು ಇರುವುದಿಲ್ಲ. ಅಂತವರನ್ನು ನಿರ್ದಯವಾಗಿ ಸಂಹಾರ ಮಾಡುವುದೇ ಧರ್ಮ.

ಭಗವಂತ ದುಷ್ಟರಿಗೆ ಎಷ್ಟು ಭಯಾನಕ ಎಂದರೆ: ಆತ ಎತ್ತಿ ಹಿಡಿದ ವಜ್ರಾಯುಧ. ಲೋಕದಲ್ಲಿ ವಜ್ರಾಯುಧ ಎಂದರೆ ಸಿಡಿಲು. ಶತ್ರುಗಳ ಪಾಲಿಗೆ ಸಿದ್ಧವಾಗಿ ನಿಂತ ಬರಸಿಡಿಲು ಆ ಭಗವಂತ. 'ವಜ್ರ' ಎನ್ನುವುದರ ಶಬ್ದ ನಿಷ್ಪತ್ತಿ 'ವೃಜತಿ ಇತಿ ವಜ್ರಃ'. ಅಂದರೆ ಶತ್ರುಗಳು ಎಲ್ಲೇ ಇರಲಿ, ಅವರನ್ನು ಹುಡುಕಿ ಸಂಹಾರ ಮಾಡುವ ಶಕ್ತಿ. ತತ್ವಶಾಸ್ತ್ರದಲ್ಲಿ ವಜ್ರ ಎನ್ನುವ ಪದಕ್ಕೆ ಇನ್ನೊಂದು ಅರ್ಥವಿದೆ. 'ವರ್ಜಯತೀತಿ ವಜ್ರಃ'. ಅಂದರೆ ಸಜ್ಜನರನ್ನು ಕಾಪಾಡುವ, ನಿರ್ದುಷ್ಟವಾದ, ಸ್ವಯಂ ದೋಷಗಳಿಂದ ದೂರನಾದ, ದುರ್ಜನರ ಪಾಲಿಗೆ ಅತ್ಯಂತ ಭಯಾನಕವಾದ ಶಕ್ತಿ ಆ ಭಗವಂತ.

ಇಲ್ಲಿ ನಮಗೊಂದು ಪ್ರಶ್ನೆ ಬರಬಹುದು. ದೇವರು ಭಯಾನಕ ಎಂದು ಏಕೆ ಹೇಳಿದ್ದಾರೆ ಎಂದು. ಏಕೆಂದರೆ ತಪ್ಪು ಮಾಡಿದವನಿಗೆ ಭಗವಂತನ ಲೋಕದಲ್ಲಿ ಎಂದೂ ಕ್ಷಮೆ ಇಲ್ಲ. ಅವನು ಶಿಕ್ಷೆ ಅನುಭವಿಸಲೇ ಬೇಕು. ನಾನು ಬಿತ್ತಿದ್ದನ್ನು ನಾನು ಅನುಭವಿಸಲೇ ಬೇಕು ಎನ್ನುವ ಎಚ್ಚರಕ್ಕಾಗಿ ಇಲ್ಲಿ ಹೀಗೆ ಹೇಳಿದ್ದಾರೆ. ಈ ಶ್ಲೋಕ – ಒಳ್ಳೆಯದನ್ನು ಮಾಡಬೇಕು, ಮಾಡಿ ಜ್ಞಾನ ಮಾರ್ಗದಲ್ಲಿ ಮುಂದೆ ಸಾಗಬೇಕು ಎನ್ನುವ ಸಂದೇಶವನ್ನು ಕೊಡುತ್ತದೆ. ಇದನ್ನು ಯಾರು ತಿಳಿಯುತ್ತಾರೋ, ತಿಳಿದು ಭಗವಂತನ ಮಾರ್ಗದಲ್ಲಿ ಸಾಗುತ್ತಾರೋ, ಅವರು ಸಾವಿಲ್ಲದ ಸ್ಥಿತಿಯನ್ನು ಪಡೆಯುತ್ತಾರೆ.

ಹಿಂದೆ ಹೇಳಿದಂತೆ ಎಲ್ಲಾ ದೇವತೆಗಳೂ ಭಗವಂತನ ನಿಯತಿಗೆ ಹೆದರಿ ತಮ್ಮ ಕರ್ತವ್ಯವನ್ನು ನಿಯಮಬದ್ಧವಾಗಿ ಮಾಡುತ್ತಾರೆ. ಇದನ್ನು ಇನ್ನೂ ಸ್ಪಷ್ಟವಾಗಿ ಮುಂದಿನ ಶ್ಲೋಕದಲ್ಲಿ ಯಮ ವಿವರಿಸುತ್ತಾನೆ.

ಭಯಾದಸ್ಯಾಗ್ನಿಸ್ತಪತಿ ಭಯಾತ್ತಪತಿ ಸೂರ್ಯಃ ।
ಭಯಾದಿಂದ್ರಶ್ಚ ವಾಯುಶ್ಚ ಮೃತ್ಯುರ್ಧಾವತಿ ಪಂಚಮಃ ॥೩॥

ಇದೇ ಅರ್ಥವನ್ನು ಕೊಡುವ ಶ್ಲೋಕ ತೈತ್ತಿರೀಯ ಉಪನಿಷತ್ತಿನಲ್ಲಿ ಕೂಡಾ ಬರುತ್ತದೆ. ಅಲ್ಲಿ ಹೇಳುತ್ತಾರೆ: ಭೀಷಾಽಸ್ಮಾದ್ವಾತಃ ಪವತೇ । ಭೀಷೋದೇತಿ ಸೂರ್ಯಃ । ಭೀಷಾಽಸ್ಮಾದಗ್ನಿಶ್ಚೇಂದ್ರಶ್ಚ । ಮೃತ್ಯುರ್ಧಾವತಿ ಪಂಚಮ ಇತಿ । [ಬ್ರಹ್ಮಾನಂದವಲ್ಲಿ ಎಂಟನೇ ಅನುವಾಕ]. "ಭಗವಂತನ ಭಯದಿಂದಲೇ ಅಗ್ನಿ, ಸೂರ್ಯ, ಇಂದ್ರ, ವಾಯು, ಯಮ, ಎಲ್ಲರೂ ನಿಯಮಬದ್ಧವಾಗಿ ಕಾರ್ಯ ನಿರ್ವಹಿಸುತ್ತಾರೆ" ಎನ್ನುತ್ತಾನೆ ಯಮ. ಇದೇ ವಿವರಣೆ ಗೀತೆಯಲ್ಲಿ ಕೂಡಾ ಬಂದಿದೆ. ತಪಾಮ್ಯಹಮಹಂ ವರ್ಷಂ ನಿಗೃಹ್ಣಾಮ್ಯುತ್ಸೃಜಾಮಿ ಚ । ಅಮೃತಂ ಚೈವ ಮೃತ್ಯುಶ್ಚ ಸದಸಚ್ಚಾಹಮರ್ಜುನ ॥ [ಅ-೯ ಶ್ಲೋ-೧೯]. ಅಲ್ಲಿ ಭಗವಂತ ಹೇಳುತ್ತಾನೆ: "ನಾನು ಸುಡುತ್ತೇನೆ. ನಾನು ಮಳೆ ಬರದಂತೆ ತಡೆಯುತ್ತೇನೆ; ಮಳೆಗರೆಸುತ್ತೇನೆ. ಸಾವು ಬರದಂತೆ ಮಾಡುತ್ತೇನೆ; ಸಾಯಿಸುತ್ತೇನೆ. ಓ ಅರ್ಜುನ, ಕಾಣುವ ಕಾರ್ಯ, ಕಾಣದ ಕಾರಣ ಎಲ್ಲವೂ ನನ್ನಿಂದ" ಎಂದು. ಹೀಗೆ ಬ್ರಹ್ಮಾದಿ ಸಮಸ್ತ ದೇವತೆಗಳೂ ಭಗವಂತನ ನಿಯತಿಗೆ ಬದ್ಧರಾಗಿ, ಎಚ್ಚರದಿಂದ ಕಾರ್ಯ ನಿರ್ವಹಿಸುತ್ತಾರೆ. ಎಲ್ಲರ ಧಾರಕಶಕ್ತಿಯಾಗಿ ಭಗವಂತ ಈ ಪ್ರಪಂಚವೆಂಬ ವೃಕ್ಷವನ್ನು ನಿಯಮಿಸುತ್ತಾನೆ.

ಇಹ ಚೇದಶಕದ್ಬೋದ್ಧುಂ ಪ್ರಾಕ್ಶರೀರಸ್ಯ ವಿಸ್ರಸಃ ।
ತತಃ ಸರ್ಗೇಷು ಲೋಕೇಷು ಶರೀರತ್ವಾಯ ಕಲ್ಪತೇ ॥೪॥

ಭಗವಂತನ ಬಗೆಗಿನ ಸಾಧನೆಯನ್ನು ಅಭಿರುಚಿ ಇಲ್ಲದೇ ವಿಧಿಬದ್ಧತೆಯ ಭಯದಿಂದ ಮಾಡಿದರೂ ಅದು ನಿಷ್ಫಲವಾಗುವುದಿಲ್ಲ. ಏಕೆಂದರೆ ಭಗವಂತನ ಅರಿವು ಅಷ್ಟು ತುರ್ತಿನ ಕೆಲಸವಲ್ಲ. ಮೊದಲು ಭಯದಿಂದ ಮಾಡಿದರೂ, ಮುಂದೆ ಅದು ಅದೆಷ್ಟು ಅಗತ್ಯ ಎಂದು ತಿಳಿದಾಗ, ಸಹಜ ಪ್ರವೃತ್ತಿಗೆ ಅದು ಪೂರಕವಾಗುತ್ತದೆ. ಭಗವಂತನ ಅರಿವು ಒಂದೇ ಜನ್ಮದಲ್ಲಿ ಸಾಧ್ಯವಿಲ್ಲ. ಎಷ್ಟೋ ಜನ್ಮಗಳ ಸಾಧನೆಯಿಂದ ಆತನ ದರ್ಶನ ಸಾಧ್ಯ. ಆದರೆ ನಾವು 'ಈ ಜನ್ಮದಲ್ಲೇ ಭಗವಂತನನ್ನು ಕಾಣಬೇಕು' ಎನ್ನುವ ಗುರಿ ಹೊಂದಿರಬೇಕು. ಆದ್ದರಿಂದ ಈ

ಶ್ಲೋಕದಲ್ಲಿ ‘ಇಹ’ ಎಂದು ಒತ್ತಿ ಹೇಳಲಾಗಿದೆ. ಈ ರೀತಿ ಹಠ ಇದ್ದರೆ ಯಾವುದೋ ಒಂದು ಜನ್ಮದಲ್ಲಿ ಭಗವಂತನನ್ನು ಕಾಣಲು ಸಾಧ್ಯ.

ಭಗವಂತನನ್ನು ತಿಳಿಯಲು ಕೇವಲ ಸ್ಥೂಲ ಶರೀರವೊಂದೇ ಸಾಧನ. ಈ ಶರೀರವನ್ನು ಕಳಚಿಕೊಂಡು ಸೂಕ್ಷ್ಮ ಶರೀರದಲ್ಲಿ ಸ್ವರ್ಗದಲ್ಲಿದ್ದರೂ ಕೂಡಾ, ಅಲ್ಲಿ ಸಾಧನೆ ಸಾಧ್ಯವಿಲ್ಲ. ಅದಕ್ಕಾಗಿ ಮಾನವ ಶರೀರವನ್ನು ‘ಬ್ರಹ್ಮಣಂ ಸ್ಥಾನಮ್’ ಎಂದಿದ್ದಾರೆ. ಅದಕ್ಕೋಸ್ಕರ ಈ ಸ್ಥೂಲ ಶರೀರ ಬಿದ್ದು ಹೋಗುವ ಮೊದಲೇ ಭಗವಂತನನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಬೇಕು. ಮುಂದಿನ ಜನ್ಮ ಎಂದು ಕಾದರೆ ಆಗ ಮಾನವ ಶರೀರ ಬಾರದೇ ಹೋದರೆ? ಆದ್ದರಿಂದ ಈ ಶರೀರ ಬಿದ್ದುಹೋಗುವ ಮೊದಲು ಆದಷ್ಟು ಭಗವಂತನ ಕುರಿತು ಸಾಧನೆ ಮಾಡಿ, ಆತನ ಅರಿವಿನ ದಾರಿಯಲ್ಲಿ ಸಾಗಬೇಕು. ಮನುಷ್ಯ ಶರೀರ ಬರುವುದೇ ಒಂದು ಭಾಗ್ಯ. ಬಂದಾಗ ಅದನ್ನು ವ್ಯರ್ಥ ಮಾಡಿಕೊಳ್ಳಬಾರದು. ಆದ್ದರಿಂದ “ಇದೇ ಜನ್ಮದಲ್ಲಿ ನಿನಗೆ ಸಿಕ್ಕ ಒಂದೊಂದು ಕ್ಷಣವನ್ನೂ ವ್ಯರ್ಥ ಮಾಡಿಕೊಳ್ಳದೆ ಉಪಯೋಗಿಸಿಕೋ” ಎಂದಿದ್ದಾನೆ ಯಮ. ನಮ್ಮ ಸಾಧನೆ ಹೇಗಿರಬೇಕು ಎಂದರೆ: ನಾವು ನಮ್ಮ ಈ ಸ್ಥೂಲ ಶರೀರದಿಂದ ಆಚೆ ಬಂದು, ನಮ್ಮ ಸ್ವರೂಪದ ಮೂಲಕ, ಸ್ವರೂಪ ಇಂದ್ರಿಯದ ಮೂಲಕ ಭಗವಂತನನ್ನು ಕಾಣಬೇಕು. ಹೀಗೆ ಮಾಡಿದಾಗ ಬ್ರಹ್ಮಲೋಕ ಪ್ರಾಪ್ತಿಯಾಗುತ್ತದೆ. ಅಲ್ಲಿ ಕಲ್ಪದ ಅಂತ್ಯದ ತನಕ ಇದ್ದು, ನಂತರ ಪ್ರಳಯ ಕಾಲದಲ್ಲಿ ಭಗವಂತನ ಉದರವನ್ನು ಸೇರಿ, ಮುಂದೆ ಲೋಕಗಳ ಸೃಷ್ಟಿ ಪ್ರಾರಂಭವಾಗುವಾಗ ಜೀವನಿಗೆ ಮೋಕ್ಷ ಪ್ರಾಪ್ತಿಯಾಗುತ್ತದೆ.

> ಯಥಾಽಽದರ್ಶೇ ತಥಾಽಽತ್ಮನಿ ಯಥಾ ಸ್ವಪ್ನೇ ತಥಾ ಪಿತೃಲೋಕೇ ।
> ಯಥಾಽಪ್ಸು ಪರೀವ ದದೃಶೇ ತಥಾ ಗಂಧರ್ವಲೋಕೇ
> ಛಾಯಾತಪಯೋರಿವ ಬ್ರಹ್ಮಲೋಕೇ ॥೫॥

ದೇವರನ್ನು ನೋಡುವುದು ಹೇಗೆ ಮತ್ತು ಆತ ಎಲ್ಲಿಎಲ್ಲಿ ಹೇಗೆ ಕಾಣಿಸುತ್ತಾನೆ ಎನ್ನುವುದನ್ನು ಈ ಶ್ಲೋಕದಲ್ಲಿ ಯಮ ವಿವರಿಸಿದ್ದಾನೆ. ಮೊದಲು ನಾವು ಧ್ಯಾನದ ಮೂಲಕ ಭಗವಂತನನ್ನು ನಮ್ಮ ಅಂತರಂಗದಲ್ಲಿ ಕಾಣಬೇಕು. ಧ್ಯಾನದಲ್ಲಿ ಭಗವಂತ ಕನ್ನಡಿಯಲ್ಲಿನ ಪ್ರತಿಬಿಂಬದಂತೆ ಕಾಣಿಸಿಕೊಳ್ಳುತ್ತಾನೆ. ಮೃತರಾದ ಜೀವರನ್ನು ನಿಯಮಿಸುವ ದೇವತಾಗಣಗಳಿರುವ ಪಿತೃಲೋಕದಲ್ಲಿ ಭಗವಂತ ‘ಕನಸಿನಲ್ಲಿ ಕಂಡಂತೆ ಕಾಣಿಸಿಕೊಳ್ಳುತ್ತಾನೆ’. ಇದು ಭೂ-ಲೋಕದಷ್ಟು ಸ್ಪಷ್ಟವಲ್ಲ. ಗಂಧರ್ವ ಲೋಕದಲ್ಲಿ ಭಗವಂತ ನೀರಿನಲ್ಲಿ ಕಾಣುವ ಪ್ರತಿಬಿಂಬದಂತೆ ಕಾಣುತ್ತಾನೆ. ಎಲ್ಲವುದಕ್ಕಿಂತ ಸ್ಪಷ್ಟವಾಗಿ ಭಗವಂತನನ್ನು ಚತುರ್ಮುಖನ ಲೋಕವಾದ ಸತ್ಯಲೋಕದಲ್ಲಿ ಕಾಣಬಹುದು. ಅಲ್ಲಿ ಆತ ಹಿತವಾದ ಬೆಳಕಿನಲ್ಲಿ ನಮ್ಮೆದುರು ಇರುವ ವಸ್ತು ಹೇಗೆ ಕಾಣಿಸುತ್ತದೋ, ಹಾಗೇ ಕಾಣಿಸುತ್ತಾನೆ. ಇದೊಂದು ಅದ್ಭುತ ವಿವರಣೆ. ಇಂತಹ ವಿವರಣೆ ಅಧ್ಯಾತ್ಮ ಸಾಹಿತ್ಯದಲ್ಲಿ ಇನ್ನೆಲ್ಲೂ ಕಾಣಸಿಗುವುದಿಲ್ಲ. ಈ ವಿವರಣೆಯಲ್ಲಿ ನಾವು ಕಂಡುಕೊಳ್ಳುವ ಸತ್ಯವೇನೆಂದರೆ: ಮನುಷ್ಯಲೋಕದಲ್ಲಿ ಮಾನವರಾಗಿ ಹುಟ್ಟಿದ ನಾವು ಭಾಗ್ಯಶಾಲಿಗಳು. ಇಲ್ಲಿ ನಮಗೆ ಧ್ಯಾನದ ಮೂಲಕ ಭಗವಂತನನ್ನು ಸ್ಪಷ್ಟವಾಗಿ ಕಾಣುವ ಅವಕಾಶವನ್ನು ಭಗವಂತ ಕಲ್ಪಿಸಿಕೊಟ್ಟಿದ್ದಾನೆ.

ಇಂದ್ರಿಯಾಣಾಂ ಪೃಥಗ್ಭಾವಮುದಯಾಸ್ತಮಯೌ ಚ ಯತ್ ।
ಪೃಥಗುತ್ಪದ್ಯಮಾನಾನಾಂ ಮತ್ವಾ ಧೀರೋ ನ ಶೋಚತಿ ॥೬॥

ಭಗವಂತನನ್ನು ತಿಳಿಯುವ ಮೊದಲು ನಾವು ನಮ್ಮ ಇಂದ್ರಿಯಗಳನ್ನು, ಅದರ ಹಿಂದಿರುವ ಇಂದ್ರಿಯಾಭಿಮಾನಿ ದೇವತೆಗಳನ್ನು ತಿಳಿದುಕೊಳ್ಳಬೇಕು. ಈ ಇಂದ್ರಿಯಾಭಿಮಾನಿ ದೇವತೆಗಳು ಎಲ್ಲಿಂದ ಯಾವ ಕ್ರಮದಲ್ಲಿ ಹುಟ್ಟಿದರು ಎನ್ನುವುದನ್ನು ನಾವು ತಿಳಿಯಬೇಕು. ಪುರುಷಸೂಕ್ತದಲ್ಲಿ ಹೇಳುವಂತೆ: ಚಂದ್ರಮಾ ಮನಸೋ ಜಾತಶ್ಚಕ್ಷೋಃ ಸೂರ್ಯೋ ಅಜಾಯತ । ಮುಖಾದಿಂದ್ರಶ್ಚಾಗ್ನಿಶ್ಚ ಪ್ರಾಣಾದ್ವಾಯುರಜಾಯತ ॥ [೧೩] ಅಂದರೆ: ಚಂದ್ರನು ಭಗವಂತನ ಮನಸ್ಸಿನ ಮಗನು, ಸೂರ್ಯನು ಭಗವಂತನ ಕಣ್ಣಿನಿಂದ ಹುಟ್ಟಿದ, ಆತನ ಬಾಯಿಯಿಂದ ಇಂದ್ರಾಗ್ನಿಗಳ ಜನನವಾಯಿತು. ಪ್ರಾಣದಿಂದ ವಾಯುದೇವನ ಜನನವಾಯಿತು. ಹೀಗೆ ಮೊದಲು ನಾವು ದೇವತೆಗಳ ಕುರಿತು ಮತ್ತು ಅವರ ತಾರತಮ್ಯದ ಕುರಿತು ತಿಳಿದುಕೊಳ್ಳಬೇಕು. ಹಿಂದೆ ಹೇಳಿದಂತೆ: ಕಣ್ಣಿನ ಅಭಿಮಾನಿ ದೇವತೆ-ಸೂರ್ಯ, ಕಿವಿಯ ಅಭಿಮಾನಿ ದೇವತೆ ಚಂದ್ರ, ಮೂಗಿನ ಅಭಿಮಾನಿ ದೇವತೆ ವಾಯು, ಮಾತಿನ ಅಭಿಮಾನಿ ಅಗ್ನಿ, ಕೈಯ ಅಭಿಮಾನಿ ಇಂದ್ರ, ಕಾಲಿನ ಅಭಿಮಾನಿ ಯಜ್ಞ, ಹೀಗೆ ಪ್ರತಿಯೊಂದು ಇಂದ್ರಿಯಗಳಲ್ಲೂ ಬೇರೆಬೇರೆ ದೇವತಾ ಶಕ್ತಿ ಕೆಲಸ ಮಾಡುತ್ತಿದೆ. ಎಲ್ಲಾ ದೇವತೆಗಳು ಭಗವಂತನ ನಿಯತಿಗೆ ಬದ್ಧರಾಗಿ ಆತನ ಅಧೀನರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಎಲ್ಲಾ ಶಕ್ತಿಗಳನ್ನು ನಿಯಂತ್ರಿಸುವ ಪರಶಕ್ತಿ ಆ ಭಗವಂತ. ಗೀತೆಯಲ್ಲಿ ಹೇಳುವಂತೆ: ಅಹಂ ಹಿ ಸರ್ವಯಜ್ಞಾನಾಂ ಭೋಕ್ತಾ ಚ ಪ್ರಭುರೇವ ಚ [೯-೨೪] ನಮ್ಮ ಒಂದೊಂದು ಇಂದ್ರಿಯಗಳಲ್ಲೂ ಯಜ್ಞ ನಡೆಯುತ್ತಿದೆ. ಇಂದ್ರಿಯಗಳಲ್ಲಿ ಯಜ್ಞ ಮಾಡುವ ದೇವತೆಗಳಿದ್ದಾರೆ. ಈ ಎಲ್ಲಾ ಯಜ್ಞಗಳನ್ನೂ ಸ್ವೀಕಾರ ಮಾಡುವ ಸರ್ವಭೋಕ್ತಾರ, ಸರ್ವಾಧ್ಯಕ್ಷ ಆ ಭಗವಂತ.

ಭಗವಂತ ಎಲ್ಲಾ ದೇವತೆಗಳನ್ನೂ ಒಮ್ಮೆಲೇ ಸೃಷ್ಟಿ ಮಾಡಿಲ್ಲ. ಪ್ರತಿಯೊಬ್ಬ ತತ್ವಾಭಿಮಾನಿ ದೇವತೆಗಳಿಗೂ ಪ್ರತ್ಯೇಕ ಹುಟ್ಟಿದೆ. ಎಲ್ಲರಿಗಿಂತ ಮೊದಲು ಭಗವಂತ ಚತುರ್ಮುಖ ಬ್ರಹ್ಮನನ್ನು ಸೃಷ್ಟಿ ಮಾಡಿದ. ಚತುರ್ಮುಖನಿಂದ ಗರುಡ-ಶೇಷ-ರುದ್ರರ ಸೃಷ್ಟಿಯಾಯಿತು. ಶಿವನಿಂದ ಇಂದ್ರ-ಕಾಮರ ಸೃಷ್ಟಿಯಾಯಿತು. ಹೀಗೆ ಪ್ರತಿಯೊಬ್ಬ ದೇವತೆಯೂ ತಮ್ಮ ಸ್ವರೂಪಯೋಗ್ಯತೆಗೆ ತಕ್ಕಂತೆ ಸೃಷ್ಟಿಯಾದರು. ಹೀಗೆ ಸೃಷ್ಟಿಯಾದ ದೇವತೆಗಳು ಪ್ರಳಯ ಕಾಲದಲ್ಲಿ ಹುಟ್ಟಿದ ಕ್ರಮಕ್ಕೆ ವಿರುದ್ಧ ಕ್ರಮದಲ್ಲಿ ಸಂಹಾರವಾಗುತ್ತಾರೆ.

ನಾವು ಭಗವಂತನನ್ನು ತಿಳಿಯಬೇಕಾದರೆ ಮೊದಲು ಅವನ ಪರಿವಾರ ದೇವತೆಗಳನ್ನು ತಿಳಿಯಬೇಕು. ಎಲ್ಲಾ ದೇವತೆಗಳ ಚಿಂತನೆ ಮಾಡಿ, ಆ ಎಲ್ಲಾ ದೇವತೆಗಳನ್ನು ನಿಯಂತ್ರಿಸುವ ಪರದೇವತೆಯಾದ ಭಗವಂತನನ್ನು ಕಾಣಬೇಕು. ಇದು ಉಪಾಸನೆಯ ಕ್ರಮ. ಹೀಗೆ ನಾವು ಭಗವಂತನನ್ನು ತಿಳಿದಾಗ ನಮ್ಮಲ್ಲಿ ಧೈರ್ಯ ಹುಟ್ಟುತ್ತದೆ. ಇದರಿಂದಾಗಿ ನಾವೆಂದೂ ದುಃಖ ಶೋಕವನ್ನು ಅನುಭವಿಸುವುದಿಲ್ಲ.

ಇಂದ್ರಿಯೇಭ್ಯಃ ಪರಂ ಮನೋ ಮನಸಃ ಸತ್ತ್ವಮುತ್ತಮಮ್ ।
ಸತ್ತ್ವಾದಧಿ ಮಹಾನಾತ್ಮಾ ಮಹತೋಽವ್ಯಕ್ತಮುತ್ತಮಮ್ ॥೭॥
ಅವ್ಯಕ್ತಾತ್ತು ಪರಃ ಪುರುಷೋ ವ್ಯಾಪಕೋಽಲಿಂಗ ಏವ ಚ ।
ಯಂ ಜ್ಞಾತ್ವಾ ಮುಚ್ಯತೇ ಜಂತುರಮೃತತ್ವಂ ಚ ಗಚ್ಛತಿ ॥೮॥

ದೇವರನ್ನು ಉಪಾಸನೆ ಮಾಡುವಾಗ ಅವನ ಪರಿವಾರ ಸಮೇತ ಉಪಾಸನೆ ಮಾಡಬೇಕು ಎಂದು ಹಿಂದೆ ಹೇಳಿದ್ದನ್ನು ಇನ್ನೂ ಸ್ಪಷ್ಟವಾಗಿ, ತಾರತಮ್ಯ ಪೂರ್ವಕ ಇಲ್ಲಿ ವಿವರಿಸಲಾಗಿದೆ. ಭಗವಂತನ ಪರಿವಾರ ಎಂದರೆ ಅಲ್ಲಿ ಎಲ್ಲರೂ ಸಮಾನ ಸ್ಕಂದರಲ್ಲ. ಈ ವಿಚಾರವನ್ನು ಯಮ ಹಿಂದೆಯೇ ವಿವರಿಸಿದ್ದಾನೆ. ಅದಕ್ಕೆ ಒತ್ತು ಕೊಟ್ಟು ಪುನಃ ಇಲ್ಲಿ ವಿವರಿಸುತ್ತಾನೆ ಯಮ. ದೇವತೆಗಳು ನಮ್ಮ ಮತ್ತು ಭಗವಂತನ ನಡುವಿನ ಮೆಟ್ಟಿಲುಗಳಿದ್ದಂತೆ. ಅವರನ್ನು ತರತಮ ಭಾವದಿಂದ ಅನುಸಂಧಾನ ಮಾಡಿ ಕೊನೇ ಮೆಟ್ಟಿಲಿನಲ್ಲಿ ಭಗವಂತನನ್ನು ಕಾಣಬೇಕು.

ದೇವತಾ ತಾರತಮ್ಯ ಎನ್ನುವುದು ಅಧ್ಯಾತ್ಮದಲ್ಲಿ ಅತ್ಯಂತ ಮುಖ್ಯ ವಿಷಯ. ನಮ್ಮ ದೇಹಕ್ಕಿಂತ ನಮ್ಮ ಇಂದ್ರಿಯಗಳು ಶ್ರೇಷ್ಠ. ಇಂದ್ರಿಯಗಳಿಗಿಂತ ಮನಸ್ಸು ಶ್ರೇಷ್ಠ, ಮನಸ್ಸಿಗಿಂತ ಸತ್ವ(ಬುದ್ಧಿ) ಶ್ರೇಷ್ಠ, ಸತ್ವಕ್ಕಿಂತ ಆತ್ಮ ಶ್ರೇಷ್ಠ, ಆತ್ಮನಿಗಿಂತ ಶ್ರೇಷ್ಠ ಅವ್ಯಕ್ತ, ಅವ್ಯಕ್ತಕ್ಕಿಂತ ಪರಮ ಪುರುಷ ಭಗವಂತ ಶ್ರೇಷ್ಠ. ಇಲ್ಲಿ ಕೊನೆಯಲ್ಲಿ ಅವ್ಯಕ್ತತತ್ವ(ಶ್ರೀಲಕ್ಷ್ಮಿ) ಮತ್ತು ಪರಮಪುರುಷ ಭಗವಂತನನ್ನು ಹೇಳಿರುವುದರಿಂದ, ಈ ಶ್ಲೋಕದಲ್ಲಿ ಹೇಳಲಾದ ಇಂದ್ರಿಯ, ಮನಸ್ಸು, ಬುದ್ಧಿ, ಇತ್ಯಾದಿ ಮೂಲತಃ ಅದರ ಅಭಿಮಾನಿ ದೇವತೆಗಳನ್ನು ಹೇಳುತ್ತವೆ ಎನ್ನುವುದು ತಿಳಿಯುತ್ತದೆ. ಹಿಂದೆ ಹೇಳಿದಂತೆ, ಇಂದ್ರಾದಿ ಸಮಸ್ತ ದೇವತೆಗಳಿಗಿಂತ ಮನೋಭಿಮಾನಿಗಳಾದ ಗರುಡ-ಶೇಷ-ರುದ್ರರು ಶ್ರೇಷ್ಠ; ಮನೋಭಿಮಾನಿ ದೇವತೆಗಳಿಗಿಂತ ಬುದ್ಧಿಯ ದೇವತೆಯರಾದ ಸರಸ್ವತಿ-ಭಾರತಿಯರು ಶ್ರೇಷ್ಠ; ಬುದ್ಧಿಯ ದೇವತೆಗಳಿಗಿಂತ ಶ್ರೇಷ್ಠ ಮಹತತ್ವ ಮತ್ತು ಜೀವಕಲಾಭಿಮಾನಿಗಳಾದ ಬ್ರಹ್ಮ-ವಾಯು. ಎಲ್ಲರಿಗಿಂತ ಶ್ರೇಷ್ಠ ಅವ್ಯಕ್ತತತ್ವ ಶ್ರೀಲಕ್ಷ್ಮಿ ಮತ್ತು ಪರಮಪುರುಷ ಭಗವಂತ.

ಭಗವಂತ ಎಲ್ಲವನ್ನೂ ವ್ಯಾಪಿಸಿ ನಿಂತಿದ್ದಾನೆ. ಅವನನ್ನು ವ್ಯಾಪಿಸುವ ಇನ್ನೊಂದು ಶಕ್ತಿ ಇಲ್ಲ. ಎಲ್ಲವೂ ಅವನ ಅಧೀನ. ಇಂತಹ ಭಗವಂತನನ್ನು ತರ್ಕ/ಯುಕ್ತಿಯಿಂದ ಅಳೆಯಲು ಸಾಧ್ಯವಿಲ್ಲ. ಹಾಗಾಗಿ ತಾರತಮ್ಯಪೂರ್ವಕವಾಗಿ ದೇವತೆಗಳನ್ನು ತಿಳಿದು, ತಾರತಮ್ಯ ಅಂತಗತನಾಗಿರುವ ಭಗವಂತನನ್ನು ತಿಳಿಯುವ ಪ್ರಯತ್ನ ಮಾಡಬೇಕು. ಭಗವಂತನ ಜ್ಞಾನವಿಲ್ಲದ ನಾವು ಕೇವಲ ಹುಟ್ಟಿ-ಸಾಯುವ ಜಂತುಗಳಿದ್ದಂತೆ. ಎಲ್ಲಾ ತಾರತಮ್ಯವನ್ನು ಮತ್ತು ಅದರ ತುತ್ತತುದಿಯಲ್ಲಿರುವ ಸರ್ವೋತ್ತಮ ತತ್ವ ಭಗವಂತನನ್ನು ತಿಳಿದಾಗ ನಾವು ಸಾವಿಲ್ಲದ ಮೋಕ್ಷ ಮಾರ್ಗವನ್ನು ಕಾಣಬಹುದು.

ನ ಸಂದೃಶೇ ತಿಷ್ಠತಿ ರೂಪಮಸ್ಯ ನ ಚಕ್ಷುಷಾ ಪಶ್ಯತಿ ಕಶ್ಚನೈನಮ್ ।
ಹೃದಾ ಮನೀಷಾ ಮನಸಾಽಭಿಕ್ಲೃಪ್ತೋ ಯ ಏತದ್ವಿದುರಮೃತಾಸ್ತೇ ಭವಂತಿ ॥೯॥

ಭಗವಂತ ನಮ್ಮ ಬಾಹ್ಯ ಇಂದ್ರಿಯಗಳಿಗೆ ಗೋಚರನಾಗುವುದಿಲ್ಲ. ಆತನನ್ನು ಕಾಣಬೇಕೆಂದರೆ ನಾವು ನಮ್ಮ ಒಳಗಣ್ಣಿನಿಂದ ಕಾಣಬೇಕು. ಇಲ್ಲಿ ಒಂದು ಪ್ರಶ್ನೆ ಬರಬಹುದು. ಅದೇನೆಂದರೆ: ಅವತಾರ ರೂಪಿ ಭಗವಂತನನ್ನು ಆ ಕಾಲದಲ್ಲಿ ಎಲ್ಲರೂ ಕಂಡಿದ್ದರು. ಆದರೆ ಶಾಸ್ತ್ರ ಆತ ಹೊರಗಣ್ಣಿಗೆ ಅಗೋಚರ ಎನ್ನುತ್ತದೆ. ಇದನ್ನು ಹೇಗೆ ಅರ್ಥ ಮಾಡಿಕೊಳ್ಳುವುದು ಎಂದು. ನಿಜ, ಅವತಾರ ರೂಪಿ ಭಗವಂತನನ್ನು ಎಲ್ಲರೂ ಕಾಣುತ್ತಿದ್ದರು. ಕೇವಲ ಸಾತ್ವಿಕರಷ್ಟೇ ಅಲ್ಲ, ರಾಕ್ಷಸರೂ ಕೂಡಾ! ಆದರೆ ಅದು ಭಗವಂತನ ಸಾಕ್ಷಾತ್ಕಾರವಲ್ಲ. ಭಗವಂತನ ಸಾಕ್ಷಾತ್ಕಾರ ಕೇವಲ ಜ್ಞಾನದೃಷ್ಟಿಯಲ್ಲಿ ಮಾತ್ರ ಸಾಧ್ಯ. ಜ್ಞಾನದೃಷ್ಟಿ ಇಲ್ಲದೇ ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯವಿಲ್ಲ.

ಭಗವಂತನನ್ನು ನಾವು ನಮ್ಮ ಶುದ್ಧವಾದ ಮನಸ್ಸಿನಿಂದ ನಮ್ಮೊಳಗೇ ಕಾಣಬೇಕು. ಈ ರೀತಿ ಆತನನ್ನು ಕಾಣಬೇಕಾದರೆ ನಮಗೆ ಶುದ್ಧ, ಸಾತ್ವಿಕವಾದ, ನಿರಂತರ ಭಗವಂತನನ್ನು ಪ್ರೀತಿಸುವ, ಭಕ್ತಿಯಿಂದ ತುಂಬಿರುವ ಮನಸ್ಸಿರಬೇಕು. ಇಂತಹ ಶುದ್ಧ ಮನಸ್ಸಿನಿಂದ ಭಗವಂತನ ಬಗೆಗೆ ನಿರಂತರ ಅಂತರಂಗ ಮಥನ ಮಾಡಬೇಕು. ಆಗ ಭಗವಂತನ ನಿಶ್ಚಿತವಾದ ಅನುಭೂತಿ ಬರುತ್ತದೆ.

ಯದಾ ಪಂಚಾವತಿಷ್ಠಂತೇ ಜ್ಞಾನಾನಿ ಮನಸಾ ಸಹ ।
ಬುದ್ಧಿಶ್ಚ ನ ವಿಚೇಷ್ಟತೇ ತಾಮಾಹುಃ ಪರಮಾಂ ಗತಿಮ್ ॥೧೦॥

ನಮ್ಮ ಮನಸ್ಸು ಭಗವಂತನಲ್ಲಿ ಸಂಯೋಗ ಹೊಂದುವುದಕ್ಕೆ ಯೋಗಸಿದ್ಧಿ ಎನ್ನುತ್ತಾರೆ. ಇದಕ್ಕಾಗಿ ನಾವು ನಮ್ಮ ಬಾಹ್ಯೇಂದ್ರಿಯಗಳನ್ನು ಸ್ಥಬ್ಧ ಮಾಡಬೇಕು. ಐದು ಇಂದ್ರಿಯಗಳನ್ನು ಸ್ಥಗನಗೊಳಿಸಿದ ಮೇಲೆ, ಮನಸ್ಸನ್ನು ಸ್ಥಬ್ಧಗೊಳಿಸಬೇಕು. ಇದನ್ನು ಉನ್ಮನೀಭಾವ ಎನ್ನುತ್ತಾರೆ. ಈ ಸ್ಥಿತಿಯಲ್ಲಿ ಕೇವಲ ನಮ್ಮ ಆತ್ಮಸ್ವರೂಪ ಕೆಲಸ ಮಾಡುತ್ತದೆ. ಕೇವಲ ಆತ್ಮಸ್ವರೂಪದಿಂದ ಸ್ವರೂಪಭೂತನಾದ ಆ ಭಗವಂತನನ್ನು ಕಾಣಲು ಸಾಧ್ಯ. ಇದು ಒಬ್ಬ ಮನುಷ್ಯ ಧ್ಯಾನದಲ್ಲಿ ಸಾಧಿಸಬಹುದಾದ ಅತ್ಯಂತ ಉನ್ನತ ಸ್ಥಿತಿ.

ತಾಂ ಯೋಗಮಿತಿ ಮನ್ಯಂತೇ ಸ್ಥಿರಾಮಿಂದ್ರಿಯಧಾರಣಾಮ್ ।
ಅಪ್ರಮತ್ತಸ್ತದಾ ಭವತಿ ಯೋಗೋ ಹಿ ಪ್ರಭವಾಪ್ಯಯೌ ॥೧೧॥

ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳನ್ನು ಪೂರ್ಣವಾಗಿ ನಮ್ಮ ಹಿಡಿತದಲ್ಲಿಟ್ಟು ಭಗವಂತನನ್ನು ಕಾಣುವುದನ್ನು ಧ್ಯಾನಯೋಗ ಎನ್ನುತ್ತಾರೆ. ಈ ಸ್ಥಿತಿಯಲ್ಲಿರುವ ಜೀವ ಎಲ್ಲೂ ಪ್ರಮಾದ(ಎಚ್ಚರ ತಪ್ಪುವುದು, ತಿಳಿಯದೇ ತಪ್ಪು ಮಾಡುವುದು) ಮಾಡುವುದಿಲ್ಲ ಮತ್ತು ಆತ ದುಃಖದ ಸ್ಪರ್ಶವೇ ಇಲ್ಲದ ಸುಖವನ್ನು ಅನುಭವಿಸುತ್ತಾನೆ. ಇದು ಆನಂದ ಸಮುದ್ರದಲ್ಲಿ ಮುಳುಗುವ ಅನುಭವ. ಇಂತಹ ಸುಖ ಕೇವಲ ಧ್ಯಾನಯೋಗದಿಂದ ಮಾತ್ರ ಪಡೆಯಲು ಸಾಧ್ಯ. ಜಗತ್ತಿನ ಸೃಷ್ಟಿ-ಸಂಹಾರಕ್ಕೆ ಕಾರಣನಾದ ಆ ಭಗವಂತನನ್ನು ನಮ್ಮ ಒಳಗಣ್ಣಿನಿಂದ ಕಂಡಾಗ ಆನಂದದ ಸೃಷ್ಟಿಯಾಗುತ್ತದೆ ಮತ್ತು ದುಃಖದ ಸಂಹಾರವಾಗುತ್ತದೆ. ಇದನ್ನು ನಾಲ್ಕನೇ ಸ್ಥಿತಿ ಅಥವಾ ತುರಿಯಾವಸ್ಥೆ ಎಂದೂ ಕರೆಯುತ್ತಾರೆ.

ನೈವ ವಾಚಾ ನ ಮನಸಾ ಪ್ರಾಪ್ತುಂ ಶಕ್ಯೋ ನ ಚಕ್ಷುಷಾ ।
ಅಸ್ತೀತಿ ಬ್ರುವತೋಽನ್ಯತ್ರ ಕಥಂ ತದುಪಲಭ್ಯತೇ ॥೧೨॥

ಒಂದು ವಿಶೇಷವಾದ ಉಪಾಸನೆಯನ್ನು ಇಲ್ಲಿ ವಿವರಿಸಲಾಗಿದೆ. ಗೀತೆಯಲ್ಲಿ ಒಂದು ಮಾತು ಬಂದಿದೆ: ಓಂ ತತ್ ಸದಿತಿ ನಿರ್ದೇಶೋ ಬ್ರಹ್ಮಣಸ್ತ್ರಿವಿಧಃ ಸ್ಮೃತಃ । [೧೭-೨೩]. ಇದು ಭಗವಂತನ ಉಪಾಸನೆಯಲ್ಲಿ ಅವನನ್ನು

'ಸತ್' ಎಂದು ಉಪಾಸನೆ ಮಾಡುವುದನ್ನು ವಿವರಿಸುತ್ತದೆ. ಇಲ್ಲಿ 'ಸತ್' ಎನ್ನುವ ಉಪಾಸನೆಯ ಒಂದು ವಿಶೇಷ ಮುಖವನ್ನು ವಿವರಿಸಿದ್ದಾನೆ ಯಮ.

ಭಗವಂತನನ್ನು ಮಾತಿನ ಮೂಲಕ ತಿಳಿಯಲು ಸಾಧ್ಯವಿಲ್ಲ. ಗುರುಗಳ ಉಪದೇಶ ಕೂಡಾ ನೇರವಾಗಿ ಭಗವಂತನನ್ನು ತೋರಿಸಲಾರದು. ಪ್ರವಚನ ಕೇಳಿದಾಗ ಅದರಿಂದ ಭಗವಂತನನ್ನು ಹೇಗೆ ಉಪಾಸನೆ ಮಾಡಬೇಕು ಎನ್ನುವ ಮಾರ್ಗದರ್ಶನವಷ್ಟೇ ಸಿಗುತ್ತದೆ ಹೊರತು, ಅದರಿಂದ ದೇವರು ಕಾಣಿಸಿಕೊಳ್ಳುವುದಿಲ್ಲ. ಸಾಂತವಾದ ಮಾತು ಮತ್ತು ಮನಸ್ಸುಗಳಿಗೆ ಅನಂತವಾದ ಭಗವಂತನನ್ನು ಗ್ರಹಿಸಲು ಸಾಧ್ಯವಿಲ್ಲ. ಹೀಗಿರುವಾಗ ನಮ್ಮ ಕಣ್ಣಿನಿಂದ ಅವನನ್ನು ಕಾಣುವುದು ಸಾಧ್ಯವೇ? ಎಂದು ಪ್ರಶ್ನಿಸುತ್ತಾನೆ ಯಮ. ಇಂತಹ ಭಗವಂತನನ್ನು ಯಾರು ಕಾಣಬಲ್ಲರು ಎಂದರೆ ಯಮ ಹೇಳುತ್ತಾನೆ: "ಅಸ್ತೀತಿ ಬ್ರುವತಃ" ಎಂದು. ಅಂದರೆ: 'ಭಗವಂತ ಇದ್ದಾನೆ' ಎಂದು ಹೇಳುವವರು ಕಾಣಬಲ್ಲರು ಎಂದರ್ಥ. ಯಾರು ದೇವರು ಇಲ್ಲ ಎನ್ನುತ್ತಾನೋ, ಅವನ ಪಾಲಿಗೆ ದೇವರು ಖಂಡಿತಾ ಗೋಚರನಾಗುವುದಿಲ್ಲ. ದೇವರು ಇದ್ದಾನೆ ಎನ್ನುವ ಭಾವ ಒಳಗಿನಿಂದ ದೃಢವಾಗುವ ತನಕ ಏನೇ ಸಾಧನೆ ಮಾಡಿದರೂ ಭಗವಂತನ ಸಾಕ್ಷಾತ್ಕಾರವಾಗುವುದಿಲ್ಲ. ಹಾಗಾಗಿ ಮೊದಲು ದೇವರು ಇದ್ದಾನೆ ಎನ್ನುವುದು ನಮ್ಮ ಮನಸ್ಸಿನಲ್ಲಿ ಗಟ್ಟಿಯಾಗಬೇಕು. ಗಟ್ಟಿಯಾದ ನಂತರ ಅವನನ್ನು ತಿಳಿಯಲು ಪ್ರಯತ್ನ ಮಾಡಬೇಕು.

ಭಗವಂತ 'ಅಸ್ತಿಃ=ಅ+ಸತ್+ಇ' ಇಲ್ಲಿ 'ಅ' ಎನ್ನುವುದು 'ಅಧಿಕ' ಎನ್ನುವುದರ ಸಂಕ್ಷಿಪ್ತರೂಪ(Abbreviations). ಅಧಿಕ ಎಂದರೆ ದೊಡ್ಡವನು, ಮೇಲಿನವನು, ಎತ್ತರದಲ್ಲಿರುವವನು, ಇತ್ಯಾದಿ. ಆದ್ದರಿಂದ ಇಲ್ಲಿ ಅಸ್ತಿಃ ಎಂದರೆ: ಈ ಜಗತ್ತಿನಲ್ಲಿ ನಮಗೆ ತಿಳಿದಿರುವ/ತಿಳಿಯದಿರುವ ಯಾವ ಯಾವ ವಸ್ತುಗಳಿವೆಯೋ, ಆ ಎಲ್ಲಾ ವಸ್ತುಗಳಿಗಿಂತ ಭಗವಂತ ಅಧಿಕ ಎಂದರ್ಥ. ಯಾರು ಭಗವಂತನನ್ನು 'ಅಸ್ತಿಃ' ಎಂದು ತಿಳಿದಿದ್ದಾರೋ, ಅವರು ಭಗವಂತನನ್ನು ಕಾಣಬಲ್ಲರು.

ಅಸ್ತೀತ್ಯೇವೋಪಲಬ್ಧವ್ಯಸ್ತತ್ತ್ವಭಾವೇನ ಚೋಭಯೋಃ ।
ಅಸ್ತೀತ್ಯೇವೋಪಲಬ್ಧಸ್ಯ ತತ್ತ್ವಭಾವಃ ಪ್ರಸೀದತಿ ॥೧೩॥

ಅನಂತನಾದ ಭಗವಂತನನ್ನು ಸಾಂತರಾದ ನಾವು ತಿಳಿಯುವುದು ಹೇಗೆ ಎಂದರೆ ಯಮ ಹೇಳುತ್ತಾನೆ: "ಭಗವಂತ ಎಲ್ಲಕ್ಕಿಂತ ವಿಲಕ್ಷಣ ಮತ್ತು ಎಲ್ಲಕ್ಕಿಂತ ಅಧಿಕ ಎಂದು ಗ್ರಹಣ ಮಾಡಬೇಕು" ಎಂದು. ಈ ಜಗತ್ತಿನಲ್ಲಿ ಇರುವ ತತ್ತ್ವ ಎರಡೇ. ಒಂದು ಜಡ ಮತ್ತು ಒಂದು ಚೇತನ ಅಥವಾ ಒಂದು ಕ್ಷರ ಒಂದು ಅಕ್ಷರ ಅಥವಾ ಒಂದು ಚರ ಒಂದು ಅಚರ. ಈ ಎರಡು ತತ್ತ್ವವನ್ನು ನಿಯಂತ್ರಿಸುವ ಮಹಾತತ್ತ್ವ ಆ ಪರಮ ಪುರುಷ ಭಗವಂತ. ಹೀಗಾಗಿ ಆತ ಎಲ್ಲಕ್ಕಿಂತ ಅಧಿಕ. ಭಗವಂತನೊಬ್ಬನೇ ಸ್ವತಂತ್ರತತ್ತ್ವ. ಉಳಿದದ್ದೆಲ್ಲವೂ ಆತನಿಗೆ ಅಧೀನ.

'ಭಗವಂತ ಚರಾಚರಗಳಿಗಿಂತ ಅಧಿಕನಾಗಿ, ಚರಾಚರ ಪ್ರಪಂಚವನ್ನು ಸೃಷ್ಟಿ-ಸ್ಥಿತಿ-ಸಂಹಾರ-ನಿಯಮನ-ಜ್ಞಾನ-ಅಜ್ಞಾನ-ಬಂಧ-ಮೋಕ್ಷಗಳಿಂದ ನಿಯಂತ್ರಿಸುತ್ತಾನೆ' ಎನ್ನುವ ಜ್ಞಾನ ಯಾರಿಗೆ ಬಂತೋ, ಅವರಿಗೆ ಭಗವಂತ ಪ್ರಸನ್ನನಾಗುತ್ತಾನೆ. ಹಾಗಾಗಿ 'ಭಗವಂತ ಸಮಸ್ತ ಪ್ರಪಂಚವನ್ನು ನಿಯಮಿಸಿಕೊಂಡು ಎಲ್ಲವುದಕ್ಕಿಂತ ಮೇಲೆ ಸರ್ವೋತ್ತಮನಾಗಿದ್ದಾನೆ' ಎನ್ನುವ ಎಚ್ಚರವೇ ಭಗವಂತನ ಕೃಪೆಗೆ ಪಾತ್ರರಾಗಲು ಇರುವ ಏಕಮಾತ್ರ ಮಾರ್ಗ.

ಯದಾ ಸರ್ವೇ ಪ್ರಮುಚ್ಯಂತೇ ಕಾಮಾ ಯೇಽಸ್ಯ ಹೃದಿ ಶ್ರಿತಾಃ ।
ಅಥ ಮರ್ತ್ಯೋಽಮೃತೋ ಭವತ್ಯತ್ರ ಬ್ರಹ್ಮ ಸಮಶ್ನುತೇ ॥೧೪॥

ಹಿಂದಿನ ಶ್ಲೋಕದಲ್ಲಿ ಯಮ ಹೇಳಿದ: ನಾವು ಭಗವಂತನ ಸರ್ವೋತ್ತಮತ್ತ್ವವನ್ನು ತಿಳಿದಾಗ ಆತ ಪ್ರಸನ್ನನಾಗುತ್ತಾನೆ" ಎಂದು. ಇಲ್ಲಿ ನಮಗೊಂದು ಪ್ರಶ್ನೆ ಬರಬಹುದು. "ಭಗವಂತನ ಅನುಗ್ರಹ ನಮ್ಮ ಮೇಲೆ ಆಗುವುದು ನಮಗೆ ತಿಳಿಯುವುದು ಹೇಗೆ" ಎಂದು. ಈ ನಮ್ಮ ಪ್ರಶ್ನೆಗೆ ಈ ಶ್ಲೋಕವೇ ಉತ್ತರ. ಯಮ ಹೇಳುತ್ತಾನೆ: "ಭಗವಂತ ನಮ್ಮ ಮೇಲೆ ಪ್ರಸನ್ನನಾದಾಗ ನಮ್ಮ ಲೌಕಿಕವಾದ ಎಲ್ಲಾ ಕ್ಷುದ್ರ ಕಾಮನೆಗಳು ಹೊರಟು ಹೋಗುತ್ತವೆ" ಎಂದು. ಈ ಸ್ಥಿತಿಯಲ್ಲಿ ನಮಗೆ ಕೇವಲ ನಮ್ಮ ಆತ್ಮಸ್ವರೂಪದ ಬಯಕೆಗಳಾದ ಜ್ಞಾನ, ಭಕ್ತಿ, ವೈರಾಗ್ಯ, ಭಗವಂತ ಇಷ್ಟೇ ಇರುತ್ತವೆ. ಇಂತಹ ಸ್ಥಿತಿಯನ್ನು ತಲುಪಿದ ಜೀವ ಸಾವಿಲ್ಲದ ಪೂರ್ಣಾನಂದ ಸ್ಥಿತಿಯನ್ನು ಪಡೆಯುತ್ತಾನೆ.

ಯದಾ ಸರ್ವೇ ಪ್ರಭಿದ್ಯಂತೇ ಹೃದಯಸ್ಯೇಹ ಗ್ರಂಥಯಃ ।
ಅಥ ಮರ್ತ್ಯೋಽಮೃತೋ ಭವತ್ಯೇತಾವದ್ಧ್ಯನುಶಾಸನಮ್ ॥೧೫॥

ಭಗವಂತನ ಅನುಗ್ರಹದಿಂದ ಹೇಗೆ ನಮ್ಮ ಬಯಕೆಗಳೆಲ್ಲಾ ಕರಗಿ ಹೋಗುತ್ತವೆಯೋ, ಹಾಗೇ ನಮ್ಮ ಹೃದಯದಲ್ಲಿ ಹುದುಗಿರುವ ಅಜ್ಞಾನದ ಗಂಟುಗಳೂ ಕರಗಿ ಹೋಗುತ್ತವೆ ಮತ್ತು ನಮ್ಮೊಳಗೆ ಜ್ಞಾನದ ಬೆಳಕು ಬೆಳಗುತ್ತದೆ. ಈ ಸ್ಥಿತಿಯಲ್ಲಿ ಏನನ್ನಾದರೂ ಬಯಸಬೇಕು ಅನಿಸುವುದೇ ಇಲ್ಲ. ಕೋಪ ಇಲ್ಲವಾಗುತ್ತದೆ, ಲೋಭ ಕಾಣೆಯಾಗುತ್ತದೆ. ಹೀಗೆ ಎಲ್ಲಾ ಮಾನಸಿಕ ದೌರ್ಬಲ್ಯಗಳನ್ನು ಕಳೆದುಕೊಂಡ ಮನುಷ್ಯ ಭಗವಂತನ ಸಾಕ್ಷಾತ್ಕಾರವನ್ನು ಪಡೆಯುತ್ತಾನೆ. ಈ ಸ್ಥಿತಿಯನ್ನು ತಲುಪಿದ ಸಿದ್ಧನಿಗೆ ಯಾವ ಶಾಸ್ತ್ರದ ಅನುಶಾಸನಗಳೂ ಇಲ್ಲ. ಅವನು ಮೋಕ್ಷವನ್ನು ಪಡೆಯುತ್ತಾನೆ.

ಶತಂ ಚೈಕಾ ಚ ಹೃದಯಸ್ಯ ನಾಡ್ಯಸ್ತಾಸಾಂ ಮೂರ್ಧಾನಮಭಿನಿಃಸೃತೈಕಾ ।
ತಯೋರ್ಧ್ವಮಾಯನ್ನಮೃತತ್ವಮೇತಿ ವಿಷ್ವಙ್ಙನ್ಯಾ ಉತ್ಕ್ರಮಣೇ ಭವಂತಿ ॥೧೬॥

ಜೀವ ತನ್ನ ದೇಹವನ್ನು ಕಳಚಿ ಮೋಕ್ಷಕ್ಕೆ ಹೋಗುವ ಪ್ರಕ್ರಿಯೆಯನ್ನು ಯಮ ಇಲ್ಲಿ ವಿವರಿಸಿದ್ದಾನೆ. ನಮ್ಮ ದೇಹದ ಎಡಭಾಗದಲ್ಲಿ ಐವತ್ತು ಮತ್ತು ಬಲಭಾಗದಲ್ಲಿ ಐವತ್ತು ಮುಖ್ಯ ನಾಡಿಗಳಿವೆ. ನಡುವಿನಲ್ಲಿ ಹೃದಯದಿಂದ ಮೇಲೆ ಹೋಗುವ ಸುಷುಮ್ನಾ ಅಥವಾ ಬ್ರಹ್ಮನಾಡಿ ಇದೆ. ಅದರ ತುದಿ ನಮ್ಮ ನೆತ್ತಿಯಲ್ಲಿದೆ. ಅದನ್ನೇ ಸಹಸ್ರಾರ ಎನ್ನುತ್ತಾರೆ. ಈ ನಾಡಿಯ ಮೂಲಕ, ಸಹಸ್ರಾರದಿಂದ ಜೀವ ದೇಹದಿಂದ ಹೊರ ಹೋದರೆ, ಆ ಜೀವ ಮತ್ತೆ ಮರಳಿ ಹುಟ್ಟುವುದಿಲ್ಲ. ಇದು ಜೀವ ಹುಟ್ಟು ಸಾವಿನ ಚಕ್ರದಿಂದ ಕಳಚಿಕೊಂಡು ಮೋಕ್ಷವನ್ನು ಸೇರುವ ಮಾರ್ಗ. ದೇಹದಲ್ಲಿನ ಇತರ ನಾಡಿಗಳು ಸಂಸಾರಕ್ಕೆ ಕಾರಣವಾಗಿರುತ್ತವೆ. ಅಂದರೆ ಸಹಸ್ರಾರವಲ್ಲದೇ ದೇಹದ ಇತರ ಯಾವುದೇ ದ್ವಾರದ ಮೂಲಕ ಜೀವ ಹೊರ ಹೋದರೂ, ಮರಳಿ ಸಂಸಾರ ಚಕ್ರದಲ್ಲಿ ಸಿಲುಕುತ್ತಾನೆ.

ಅಂಗುಷ್ಠಮಾತ್ರಃ ಪುರುಷೋಽನ್ತರಾತ್ಮಾ ಸದಾ ಜನಾನಾಂ ಹೃದಯೇ ಸಂನಿವಿಷ್ಟಃ ।
ತಂ ಸ್ವಾಚ್ಛರೀರಾತ್ಪ್ರವೃಹೇನ್ಮುಂಜಾದಿವೇಷೀಕಾಂ ಧೈರ್ಯೇಣ ।
ತಂ ವಿದ್ಯಾಚ್ಛುಕ್ರಮಮೃತಂ ತಂ ವಿದ್ಯಾಚ್ಛುಕ್ರಮಮೃತಮಿತಿ ॥೧೭॥

ನಮ್ಮೊಳಗೆ ಭಗವಂತನ ಮುಖ್ಯವಾದ ಎರಡು ರೂಪಗಳಿವೆ. ನಮ್ಮ ಅಂಗುಷ್ಠದಷ್ಟು ಗಾತ್ರದಲ್ಲಿ ನಮ್ಮ ಹೃದಯದಲ್ಲಿ ಮತ್ತು ನಮ್ಮ ಜೀವಸ್ವರೂಪದ ಅಂಗುಷ್ಠದಷ್ಟು ಗಾತ್ರದಲ್ಲಿ ಜೀವಸ್ವರೂಪದ ಹೃದಯದಲ್ಲಿ ಆತ ನೆಲೆಸಿದ್ದಾನೆ. ಇದನ್ನು ನಾವು ಗ್ರಹಿಸುವುದು ಬಹಳ ಕಷ್ಟ. ಏಕೆಂದರೆ ನಮ್ಮ ಜೀವಸ್ವರೂಪವೇ ಒಂದು ಅಣುವಿನ ಗಾತ್ರದ್ದು. ಅದರ ಹೆಬ್ಬೆರಳಿನ ಗಾತ್ರದಲ್ಲಿ ಅಂತರ್ಯಾಮಿಯಾಗಿ ಅಣೋರಣೀಯನಾಗಿ ಪ್ರತಿಯೊಬ್ಬ ಜೀವರ ಹೃದಯದಲ್ಲಿ ಭಗವಂತ ನೆಲೆಸಿದ್ದಾನೆ.

ನಮ್ಮ ದೇಹದ ಒಳಗೆ ನಮ್ಮ ಜೀವಸ್ವರೂಪವಿದೆ. ಜೀವ ಸ್ವರೂಪದ ಒಳಗೆ ಭಗವಂತನಿದ್ದಾನೆ. ಇಲ್ಲಿ ಜೀವಸ್ವರೂಪ ಮತ್ತು ಭಗವಂತನನ್ನು ಬೇರ್ಪಡಿಸಿ ತಿಳಿದು ಉಪಾಸನೆ ಮಾಡುವುದು ಬಹಳ ಮುಖ್ಯ. ಭಗವಂತನನ್ನು ಧ್ಯಾನದಲ್ಲಿ ಈ ರೀತಿ ಕಾಣಲು ಅರಿವಿನ ಆನಂದ ಬೇಕು ಮತ್ತು ಛಲ ಬೇಕು. ಜೀವಸ್ವರೂಪ ಮತ್ತು ಭಗವಂತನನ್ನು ಹೇಗೆ ಬೇರ್ಪಡಿಸಿ ಕಾಣಬೇಕು ಎನ್ನುವುದನ್ನು ಯಮ ಇಲ್ಲಿ ಒಂದು ದೃಷ್ಟಾಂತದ ಮೂಲಕ ವಿವರಿಸಿದ್ದಾನೆ. ಯಮ ಹೇಳುತ್ತಾನೆ: ಹೇಗೆ 'ಮುಂಜಾ' ವನ್ನು 'ಇಷೀಕಾ'ದಿಂದ ಬೇರ್ಪಡಿಸುತ್ತೇವೋ ಹಾಗೇ ಭಗವಂತ ಮತ್ತು ಜೀವಸ್ವರೂಪವನ್ನು ಬೇರ್ಪಡಿಸಿ ಕಾಣಬೇಕು ಎಂದು. ಇಲ್ಲಿ ಮುಂಜಾ ಮತ್ತು ಇಷೀಕ ಎನ್ನುವುದು ದರ್ಭೆ ಜಾತಿಗೆ ಸೇರಿದ ಹುಲ್ಲಿನ ಗಿಡ. ಇವು ದೂರದಿಂದ ನೋಡಲು ಒಂದೇ ತರನಾಗಿರುತ್ತವೆ. ಮುಂಜಾ ಮೃದುವಾಗಿದ್ದರೆ, ಇಷೀಕ ಆಯುಧದಂತೆ ಗಡಸಾಗಿರುತ್ತದೆ. [ಮುಂಜಾವನ್ನು ಉಡುದಾರಕ್ಕಾಗಿ ಬಳಸುತ್ತಾರೆ. ಯಾದವರು ಇಷೀಕದಿಂದ ಒಬ್ಬರನ್ನೊಬ್ಬರು ಚುಚ್ಚಿಕೊಂಡು ನಾಶವಾದರು].

ನಾವು ಉಪಾಸನೆ ಮಾಡುವಾಗ ಭಗವಂತನನ್ನು ನಮ್ಮಿಂದ ಬೇರ್ಪಡಿಸಿ ಉಪಾಸನೆ ಮಾಡಬೇಕು. ನಮ್ಮದು ದುಃಖಮಯವಾದ ಬಾಳು. ಆದರೆ ಭಗವಂತ ದುಃಖದ ಸ್ಪರ್ಶವೇ ಇಲ್ಲದವನು. ಜೀವಸ್ವರೂಪ ಆನಂದ ಸ್ವರೂಪವಾದರೂ ಕೂಡಾ ದೇಹ ಮತ್ತು ಮನಸ್ಸಿನ ಮೂಲಕ ಅದು ದುಃಖ ಮತ್ತು ಕೊಳೆಯನ್ನು ಅಂಟಿಸಿಕೊಳ್ಳುತ್ತದೆ. ಆದರೆ ಭಗವಂತ ದುಃಖರಹಿತ, ಸ್ವಚ್ಛ, ನಿರ್ಮಲ ಮತ್ತು ಆನಂದಮಯ.

ಇಲ್ಲಿಗೆ ನಚಿಕೇತ ಯಮನಿಂದ ಕೇಳಿ ಪಡೆದ ಅಧ್ಯಾತ್ಮ ವಿದ್ಯೆಯ ಉಪದೇಶದ ಭಾಗ ಮುಗಿಯಿತು(ಇತಿ).

ಮೃತ್ಯುಪ್ರೋಕ್ತಾಂ ನಚಿಕೇತೋಽಥ ಲಬ್ಧ್ವಾ ವಿದ್ಯಾಮೇತಾಂ ಯೋಗವಿಧಿಂ ಚ ಕೃತ್ಸ್ನಮ್ ।
ಬ್ರಹ್ಮಪ್ರಾಪ್ತೋ ವಿರಜೋಽಭೂದ್ವಿಮೃತ್ಯು ರನ್ಯೋಽಪ್ಯೇವಂ ಯೋ ವಿದಧ್ಯಾತ್ಮಮೇವ ॥೧೮॥

ಕಠೋಪನಿಷತ್ತಿನ ಈ ಕೊನೇಯ ಶ್ಲೋಕದಲ್ಲಿ ಉಪಸಂಹಾರದ ಮಾತಿದೆ. ಮೃತ್ಯುದೇವತೆಯಾದ ಯಮನಿಂದ ಅತ್ಯಂತ ಮಾಂಗಲಿಕವಾದ ಈ ಭಗವದ್ ಜ್ಞಾನವನ್ನು ತಿಳಿದ ನಚಿಕೇತ, ಮುಂದೆ ಪೂರ್ಣಾನಂದವಾದ ಮುಕ್ತಿಯನ್ನು ಪಡೆದ. ಯಾರು ಇಲ್ಲಿ ಯಮ ನಚಿಕೇತನಿಗೆ ಹೇಳಿರುವ ಈ ಜ್ಞಾನವನ್ನು ಪಡೆದು ಅದನ್ನು ಅನುಷ್ಠಾನಕ್ಕೆ ತರುತ್ತಾರೋ, ಅವರೂ ಕೂಡಾ ನಚಿಕೇತನಂತೆ ವಿರಜನೂ, ವಿಮುಕ್ತನೂ ಆಗಿ ಭಗವಂತನನ್ನು

ಸೇರಬಲ್ಲರು. ಮೋಕ್ಷ ಸಾಧನವಾದ ಈ ವಿದ್ಯೆಯನ್ನು ಅರ್ಹತೆಯುಳ್ಳ ಸಾತ್ವಿಕರು ಬಳಸಿ ಮೋಕ್ಷ ಮಾರ್ಗವನ್ನು ಕಾಣಬಹುದು.

# ಶಾಂತಿಮಂತ್ರ

ಸಹ ನಾವವತು । ಸಹ ನೌ ಭುನಕ್ತು । ಸಹ ವೀರ್ಯಂ ಕರವಾವಹೈ ।
ತೇಜಸ್ವಿನಾವಧೀತಮಸ್ತು ಮಾ ವಿದ್ವಿಷಾವಹೈ ॥*॥
ಓಂ ಶಾಂತಿಃ ಶಾಂತಿಃ ಶಾಂತಿಃ ॥

ಇದು ಯಜುರ್ವೇದದ ಶಾಂತಿ ಮಂತ್ರ. ಯಜುರ್ವೇದದಲ್ಲಿ, ತೈತ್ತಿರೀಯ ಶಾಖೆಯಲ್ಲಿ ಮತ್ತು ಕಾಠಕಶಾಖೆ ಮೂರರಲ್ಲೂ ಒಂದೇ ಶಾಂತಿ ಮಂತ್ರವಿದೆ ಮತ್ತು ಅದು ಕಠೋಪನಿಷತ್ತಿನ ಕೊನೆಗೆ ಬಂದಿದೆ. [ಯಜುರ್ವೇದದಲ್ಲಿ ತೈತ್ತಿರೀಯಶಾಖೆಯವರಿಗೆ "ಶಂ ನೋ ಮಿತ್ರಃ ಶಂ ವರುಣಃ..." ಎನ್ನುವ ಎರಡನೇ ಶಾಂತಿ ಮಂತ್ರವೂ ಇದೆ, ಆದರೆ ಕಠ ಶಾಖೆಯ ಯಜುರ್ವೇದಿಗಳಿಗೆ ಇದೊಂದೇ ಶಾಂತಿ ಮಂತ್ರ]. ಇದು ಪಾಠ ಪ್ರಾರಂಭದಲ್ಲಿ ಶಿಷ್ಯರು ಮಾಡುವ ಪ್ರಾರ್ಥನೆ. ಇದಕ್ಕೆ ಗುರುಗಳೂ ಧ್ವನಿಗೂಡಿಸಬಹುದು.

ಸಹ ನಾವವತು: ಇಲ್ಲಿ 'ಅವತು' ಎನ್ನುವಲ್ಲಿ 'ಅವ' ಎಂದರೆ ಪ್ರವೇಶ. "ಓ ಭಗವಂತ, ನೀನು ನನ್ನ ಗುರುವಿನೊಳಗೆ ಕುಳಿತು, ಅವರಿಗೆ ವಿದ್ಯೆಯನ್ನು ಹೇಳುವ ಶಕ್ತಿ ತುಂಬು. ನನ್ನೊಳಗೆ ಕುಳಿತು ಗುರುಗಳು ಹೇಳುವ ಮಾತು ನನಗೆ ಅರ್ಥವಾಗುವಂತೆ ಮಾಡು".

ಸಹ ನೌ ಭುನಕ್ತು: 'ಭುನಕ್ತು' ಎಂದರೆ ಪಾಲಿಸುವುದು ಅಥವಾ ತಿನ್ನುವುದು. "ಓ ಭಗವಂತ, ನಮ್ಮ ಅಧ್ಯಯನ ಕಾಲದಲ್ಲಿ ಯಾವುದೇ ವಿಘ್ನ ಬಾರದಂತೆ ನಮ್ಮನ್ನು ಕೊನೇಯತನಕ ಪಾಲಿಸು. ನಿನ್ನ ರಕ್ಷೆ ಸದಾ ನಮ್ಮೊಂದಿಗಿರಲಿ. ನಮ್ಮಿಬ್ಬರಿಗೂ ಉಣ್ಣುವುದಕ್ಕೂ ತಿನ್ನುವುದಕ್ಕೂ ಬೇಕಾಗಿರುವ ಸಮೃದ್ಧಿಯನ್ನು ಕರುಣಿಸು".

ಸಹ ವೀರ್ಯಂ ಕರವಾವಹೈ: "ಗುರುಗಳಿಗೆ ಈ ಅಧ್ಯಾತ್ಮ ವಿದ್ಯೆಯನ್ನು ನಮಗೆ ಕೊಟ್ಟು ನಮ್ಮನ್ನು ಉದ್ಧರಿಸುವಂತೆ ಮಾಡುವ ಸಾಮರ್ಥ್ಯವನ್ನು ಕೊಡು. ನಮ್ಮ ಅಧ್ಯಯನ ಶಕ್ತಿಶಾಲಿಯಾಗಿರಲಿ. ನಮಗೆ ಈ ವಿದ್ಯೆಯನ್ನು ಗ್ರಹಿಸುವ ಮತ್ತು ಗ್ರಹಿಸಿ ಲೋಕಕ್ಕೆ ಉಪಯೋಗವಾಗುವಂತೆ ಬಳಸುವ ಸಾಮರ್ಥ್ಯವನ್ನು ಕೊಡು".

ತೇಜಸ್ವಿನಾವಧೀತಮಸ್ತು ಮಾ ವಿದ್ವಿಷಾವಹೈ: "ನಮ್ಮಿಬ್ಬರ ಕೂಡುವಿಕೆಯಿಂದ ನಡೆಯುವ ಈ ಶಾಸ್ತ್ರಾಧ್ಯಯನದಿಂದ ಶಾಸ್ತ್ರದ ವರ್ಚಸ್ಸು ನಮ್ಮಲ್ಲಿ ವ್ಯಕ್ತವಾಗಲಿ. ಶಿಷ್ಯ ಪರಂಪರೆಯಿಂದ ಊರ್ಜಿತವಾಗಿ ವಿದ್ಯೆ ಮುಂದುವರಿಯಲು ಬೇಕಾಗಿರುವ ತೇಜಸ್ಸು ನಮ್ಮಲ್ಲಿ ಬರಲಿ. ಗುರುಗಳು ಹೇಳಿದ್ದನ್ನು ನಾನು ನನ್ನ ಮುಂದಿನ ತಲೆಮಾರಿಗೆ ಕೊಡುವ ಶಕ್ತಿ ಕರುಣಿಸು. ಕೊನೇಯತನಕ ನಾವು ಒಬ್ಬರನ್ನೊಬ್ಬರು ದ್ವೇಷಿಸದೇ, ಗೌರವ ಮತ್ತು ಪ್ರೀತಿಯಿಂದಿರುವಂತೆ ಮಾಡು. ನಾವು ಎಂದೆಂದೂ ಯಾರನ್ನೂ ದ್ವೇಷಿಸದೇ, ಎಲ್ಲರನ್ನೂ ಪ್ರೀತಿಸುತ್ತಾ ಬದುಕುವಂತೆ ಮಾಡು".

ಓಂ ಶಾಂತಿಃ ಶಾಂತಿಃ ಶಾಂತಿಃ : 'ಓಂ' ಎನ್ನುವುದು ಅತ್ಯಂತ ಮೂಲಭೂತವಾದ ಬೀಜಾಕ್ಷರ. ಇದು ಭಗವಂತನ ಹೆಸರು. 'ಶಂ' ಎಂದರೆ ಆನಂದ; 'ಇ' ಎಂದರೆ ಜ್ಞಾನ; 'ಅಂತ' ಎಂದರೆ ತುತ್ತತುದಿ. ಆದ್ದರಿಂದ 'ಓಂ

ಶಾಂತಿಃ' ಎಂದರೆ: 'ಭಗವಂತ ಜ್ಞಾನಾನಂದಗಳ ತುತ್ತ ತುದಿಯಲ್ಲಿರುವವ' ಎಂದರ್ಥ. ಮೂರು ವೇದಗಳಲ್ಲಿ ಪ್ರತಿಪಾದ್ಯನಾಗಿರುವ, ಮೂರು ಕಾಲಗಳಲ್ಲಿರುವ, ಎಲ್ಲಾಕಡೆ ಇರುವ ಭಗವಂತ ಜ್ಞಾನಾನಂದಪೂರ್ಣ ಎಂದು ಇಲ್ಲಿ ಮೂರು ಬಾರಿ ಹೇಳಲಾಗಿದೆ. "ಈ ಅನುಸಂಧಾನದ ಮೂಲಕ ನಮ್ಮ ಬದುಕಿನಲ್ಲಿ ಕೂಡಾ ಶಾಂತಿಯನ್ನು ಕೊಡು" ಎನ್ನುವ ಪ್ರಾರ್ಥನೆ ಇಲ್ಲಿದೆ.

"ನಮಗೆ ಜ್ಞಾನಾನಂದದ ಪೂರ್ಣತೆಯನ್ನು ಕೊಡು; ನಮಗೆ ಆ ಮೋಕ್ಷದ ಸ್ಥಿತಿಯನ್ನು ಕೊಡು; ಸದಾ ನಿನ್ನೊಂದಿಗಿರುವ ಜ್ಞಾನಾನಂದದ ಅನುಭವವನ್ನು ಕೊಡು; ಅಲ್ಲಿಯ ತನಕ ನಮ್ಮ ಬದುಕಿನಲ್ಲಿ ಇನ್ನೊಬ್ಬರನ್ನು ದ್ವೇಷಿಸದೇ ನೆಮ್ಮದಿಯಿಂದ ಬದುಕುವ ಶಾಂತಿಮಯವಾದ ಬದುಕನ್ನು ಕೊಡು; ಎಲ್ಲರೂ ಶಾಂತಿ-ನೆಮ್ಮದಿಯಿಂದ ಬದುಕಲು ಬಿಡೋಣ ಮತ್ತು ನಾವು ನೆಮ್ಮದಿಯಿಂದ ಬದುಕೋಣ; ಯಾರೂ ಯಾರನ್ನೂ ದ್ವೇಷಿಸುವುದು ಬೇಡ" ಎನ್ನುವುದು ಈ ಶಾಂತಿ ಮಂತ್ರದ ಮೂಲ ಸಂದೇಶ.

ಇತಿ ಕಾಠಕೋಪನಿಷದಿ ದ್ವಿತೀಯಾಧ್ಯಾಯೇ ತೃತೀಯಾ ವಲ್ಲೀ ॥
ಇಲ್ಲಿಗೆ ಕಠೋಪನಿಷತ್ತಿನ ಎರಡನೇ ಅಧ್ಯಾಯದ ಮೂರನೇ ವಲ್ಲೀ ಮುಗಿಯಿತು

*******

# ॥ ಸರ್ವೇ ಜನಾಃ ಸುಖಿನೋ ಭವಂತು ॥

# ॥ ಶ್ರೀ ಕೃಷ್ಣಾರ್ಪಣಮಸ್ತು ॥

ನಿಮ್ಮ ಅನಿಸಿಕೆಗಳನ್ನು ನಮಗೆ ತಲುಪಿಸಲು ಈ ಕೆಳಗಿನ ವೆಬ್ ಸೈಟ್ ಸಂದರ್ಶಿಸಿರಿ:

http://kathopanishat.blogspot.in/